ಸಂಪುಟ 15
ಸಂಚಿಕೆ 6

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

6 ಫೆಬ್ರವರಿ
ರೂ 2.00

"ನಾನು ತಟಸ್ಥ" ಎಂಬುದಕ್ಕೀಗ ಅರ್ಥವಿಲ್ಲ - ಹೇಳಿ ನೀವು ಯಾರ ಕಡೆ ?

ಸಾಗಿದೆ ಸಮರ, ಹೇಳಿ ನೀವು ಯಾರ ಕಡೆ ?

ಮುಂಬೈ ಗಲಭೆಗಳು ಇಂದಿಗ ಭಾರತದ ರಾಜಕೀಯ ಚಿತ್ರವನ್ನು ಮನಸ್ಸಿಗೆ ನಾಟುವ ರೀತಿಯಲ್ಲಿ ಬಿಚ್ಚಿಟ್ಟಿವೆ. ನೀವು . ಅವರನ್ನು ಬೆಂಬಲಿಸಬೇಕು ಇಲ್ಲವೇ ಅವರನ್ನು ವಿರೋಧಿಸಬೇಕು. ನಾನು ತಟಸ್ಥನಾಗಿರುತ್ತೇನೆ ಎಂಬುದನ್ನು ಅಸಾಧ್ಯಗೊಳಿಸಿದ ಘಟನೆಯಿದು. ಸರ್ವವ್ಯಾಪಿ ಕೋಮುವಾದದ ಅಲೆಗಳು ತಾವು ತಟಸ್ಥರು ಎಂದು ನಂಬಿದ್ದವರ ಭ್ರಮಾಲೋಕವನ್ನು ಮುಳುಗಿಸಿಬಿಟ್ಟಿದೆ. ಡಿಸೆಂಬರ್,ಜನವರಿ ತಿಂಗಳಲ್ಲಿ ಭಾರತ ದೇಶ ಬಹುಶಃ ಮೊದಲ ಬಾರಿಗೆ ಜೀವ- ಆಸ್ತಿಗಳ ಬಗ್ಗೆ ಅತ್ಯಂತ ರಾಕ್ಷಸೀ ನಿರ್ಲಕ್ಷವನ್ನು ತೋರಿತು. ಆಸ್ತಿಯೆಂದರೆ ದೊಡ್ಡ ದೊಡ್ಡ ಕುಳಗಳ ಆಸ್ತಿಯಲ್ಲ ಸ್ವಾಮಿ- ಸಣ್ಣ ಪುಟ್ಟ ವ್ಯಾಪಾರಿಗಳ, ಸಣ್ಣ ಸಣ್ಣ ಸ್ಟೇಶನರಿ ಅಂಗಡಿ, ಬೇಕರಿ, ಹೋಟೆಲು, ಪಿಠೋಪಕರಣಗಳ ಅಂಗಡಿಗಳು. ಬಹುಶಃ ಇದುವರೆಗೂ ಯಾವುದರ ಉಸಾಬರಿಯೂ ಬೇಡ ಎಂದು ತಮ್ಮ-ತಮ್ಮ ಲೋಕದಲ್ಲೇ ಇದ್ದ "ಗೌರವಾರ್ಹ ಜಂಟಲ್‌ಮನ್"ಗಳು, ಇತ್ತೀಚೆಗೆ ಶ್ರೀಮಂತರಾದ ಮಧ್ಯಮ ವರ್ಗಗಳ ಜನ ಕೂಡಾ ಮೊತ್ತ ಮೊದಲ ಬಾರಿಗೆ (ಪೋಲೀಸ್ ಆಡಳಿತದಲ್ಲಿ ನಂಬಿಕೆ ಕಳಕೊಂಡು) ಆಧುನಿಕ ಹೂಣರ ಆಕ್ರಮಣಗಳಿಂದ ಆತ್ಮರಕ್ಷಣೆಯ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಯಿತು. ಉದಾಹರಣೆ ಬೇಕೇ? ಮುಂಬೈಯ ಅತ್ಯಂತ ಶ್ರೀಮಂತ ಭಾಗವಾದ ಮಲಬಾರ್ ಹಿಲ್‌ನ ರಾಜ ರಸ್ತೆಗಳನ್ನು ನೋಡಿ. ಜನವರಿ 1993ರಲ್ಲಿ ಅವರ ಪರಿಸ್ಥಿತಿ ನೋಡಿ. ಮುಂಬೈ ಪೋಲೀಸ್ ಕೂಡಾ ಉತ್ತರಪ್ರದೇಶದ ಪಿಎಸಿ ಜವಾನರಿಗಿಂತ ಕಮ್ಮಿಯೇನಲ್ಲ - ಕೋಮುವಾದದ ವಿಷಾಣು ಇವರನ್ನು ಅಷ್ಟೇ ತಟ್ಟಿದೆಯೆಂಬ ಸಂಗತಿಯೂ ಬಹುಶಃ ಮೊತ್ತ ಮೊದಲ ಬಾರಿಗೆ ಮುಂಬೈಯ ಸಾಮಾನ್ಯ ನಾಗರಿಕರ ಗಮನಕ್ಕೆ ಬಂತು. ಇದುವರೆಗೆ ಅವೆಲ್ಲಾ ದೂರದ ಉತ್ತರಪ್ರದೇಶಕ್ಕೆ ತಟ್ಟಿದ ಕಾಯಿಲೆಯೆಂದು ಅವರು ಭಾವಿಸಿದ್ದರು. ಇದಕ್ಕೆ ಪುರಾವೆ ಬೇಕೇ? ಮುಂಬೈಯ ಪೋಲೀಸ್

ಪುಟ 8 ಕ್ಕೆ

ಕೋಮುವಾದ ತಡೆಗಟ್ಟಲು ಬೇಕು ಪ್ರಖರ ವೈಚಾರಿಕತೆ, ಮಾನವತಾವಾದ

-ಡಾ. ಸಿಂಪಿ ಲಿಂಗಣ್ಣ

ಇಂದಿನ ನಮ್ಮ ಎಲ್ಲ ಪ್ರಗತಿಗೆ ಅಡ್ಡಿಯಾಗಿರುವುದು ಕೋಮುವಾದವೇ, ಕೋಮುವಾದವನ್ನು ಪ್ರಖರವಾದ ವೈಚಾರಿಕತೆಯೇ ತಡೆಗಟ್ಟಬಲ್ಲದು. ಜನಸಾಮಾನ್ಯರು ದಾರುಣ ಸ್ಥಿತಿಯಲ್ಲಿರುವಾಗ ಲೇಖಕರು, ಬುದ್ಧಿಜೀವಿಗಳು, ತಮ್ಮ-ತಮ್ಮ ದಂತ ಗೋಪುರಗಳಿಂದ ಕೆಳಗಿಳಿದು ಬಂದು ನಮ್ಮ ಸುತ್ತಲೂ ನಡೆಯುತ್ತಿರುವ ಅನ್ಯಾಯಗಳ ವಿರುದ್ಧ ಪ್ರತಿಭಟನೆಯ ಜಾಗಟೆ ಬಾರಿಸುತ್ತಿರಬೇಕು ಎಂದು ಅಖಿಲ ಭಾರತ 62 ನೇ ಕನ್ನಡ ಸಾಹಿತ್ಯ ಸಮ್ಮೇಳನದ

ಅಧ್ಯಕ್ಷ ಪೀಠದಿಂದ ಡಾ ಸಿಂಪಿ ಲಿಂಗಣ್ಣ ಕರೆ ನೀಡಿದ್ದಾರೆ.

ಭಾರತದ ಇಂದಿನ ಸ್ಥಿತಿಯನ್ನು ನೋಡಿದರೆ ಎದೆ ಒಡೆಯುತ್ತದೆ. ಅಜ್ಞಾನ,

ಬಡತನ, ಜಾತೀಯತೆ, ಅಂಧ ಶ್ರದ್ಧೆಗಳು ನಮ್ಮದೇಶವನ್ನೇ ನುಂಗಿನೀರು ಕುಡಿಯುತ್ತಿವೆ. ಕೋಮು ಗಲಭೆಗಳು ದಿನನಿತ್ಯದ ದೃಶ್ಯಗಳಾಗಿವೆ ಎಂದು ವಿಷಾದದಿಂದ ನುಡಿದ ಸಿಂಪಿ ಲಿಂಗಣ್ಣನವರು ವೈಜ್ಞಾನಿಕ ಮನೋಭಾವದ ತಳಹದಿಯ ಮೇಲೆ ವೈಚಾರಿಕತೆಯ ಸೌಧ ಕಟ್ಟಲು ಸಾಧ್ಯ ವೈಜ್ಞಾನಿಕ ಮನೋಭಾವ ಬೆಳೆಸಿದಾಗ ಮಾತ್ರ ಇಂದಿನ ಮಕ್ಕಳು ಜಾತಿ ಮತ

ಸಂಪ್ರದಾಯಗಳ ಗೋಜಿನಿಂದ ಪಾರಾಗಬಲ್ಲರು ಎಂದು ಹೇಳಿದ್ದಾರೆ.

ಮಸಾಹತೀಕರಣದಿಂದ ಬಿಡುಗಡೆ ಹೊಂದಿದ ಎಲ್ಲ ಹಿಂದುಳಿದ ರಾಷ್ಟ್ರಗಳಲ್ಲಿ ಕಂಡು ಬರುವ ಸಾಮಾನ್ಯ ಸ್ಥಿತಿಗೆ ಭಾರತ ಅಪವಾದವಾಗಿಲ್ಲ. ಇಂದು ನಮ್ಮ ದೇಶ ಸಮಸ್ಯೆಗಳ ಅಗ್ನಿಕುಂಡದ ಮೇಲೆ ನಿಂತಿದೆ. ಮೂಲಭೂತವಾದದತ್ತ ಹೊರಟಿದೆ. ನಮ್ಮ ಸಮಾಜವನ್ನು ಉಳಿಸುವ ಸಲುವಾಗಿ ಭಾವೈಕ್ಯದ ಮಹತ್ವ ಬಿಂಬಿಸುವ ವಿಚಾರ ಸಂಕಿರಣಗಳನ್ನು ಸಾಹಿತ್ಯ ಪರಿಷತ್ತು, ಸಾಹಿತ್ಯ ಅಕಾಡೆಮಿ ನಡೆಸುವಂತಾಗಬೇಕು.

ಜನರಿಂದು ದೇವರು ಧರ್ಮಗಳಲ್ಲಿ ನಂಬಿಕೆ ಕಳಕೊಂಡಿದ್ದಾರೆ. ದೇವರು ಧರ್ಮಗಳ ಬದಲಾಗಿ ಮಾನವತಾವಾದವೊಂದೇ ನಮ್ಮನ್ನು ಕಷ್ಟದ ಪರಿಸ್ಥಿತಿಯಿಂದ ಕಾಪಾಡಬಲ್ಲದು. ಈ ದಿಸೆಯಲ್ಲಿ ನಮ್ಮ ಮಕ್ಕಳಲ್ಲಿ ಗರತಿಯ ಹಾಡಿನ ತ್ರಿಪದಿಗಳಲ್ಲಿ ವಚನಗಳಲ್ಲಿ ಆಸಕ್ತಿ ಹುಟ್ಟಿಸುವ ಪ್ರಯತ್ನ ಮಾಡಬೇಕು ಎಂದು ಡಾ. ಸಿಂಪಿ ಲಿಂಗಣ್ಣನವರು ಕರೆ ನೀಡಿದರು.

ಪ್ರಜಾಪ್ರಭುತ್ವ-ಭಂಜಕರ ಎದೆ ನಡುಗಿಸಿದ ಅಗರ್ತಲಾ ರ್‍ಯಾಲಿ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ಜನವರಿ 31 ರಂದು ತ್ರಿಪುರಾದ ರಾಜಧಾನಿ ಅಗರ್ತಲಾದ ಅತಿ ದೊಡ್ಡ ಮೈದಾನವಾದ ಅಸ್ಸಾಂ ರೈಫಲ್ಸ್ ಮೈದಾನದಲ್ಲಿ ಎಡರಂಗ, ಜನತಾದಳ, ಟಿ.ಹೆಚ್.ಪಿ.ಪಿ.ಯ ಕೇಂದ್ರ ಚುನಾವಣಾ ರ್‍ಯಾಲಿಯಲ್ಲಿ ಭಾಗವಹಿಸಿದರು. ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ಸರಕಾರದ ಐದು ವರ್ಷಗಳ ಭಯೋತ್ಪಾದಕ ಆಡಳಿತದ ದುಸ್ವಪ್ನಗಳನ್ನು ಬೆದರಿಕೆಗಳನ್ನು ಲೆಕ್ಕಿಸದೆ ಅವರು ಬಂದಿದ್ದರು. ಪ್ರವಾಹದಂತೆ ಬಂದಿದ್ದರು. ರಾಜ್ಯದಲ್ಲಿ ಐದು ವರ್ಷಗಳ ಹಿಂದೆ ಮೋಸದಿಂದ ಅಧಿಕಾರ ಕಸಿದುಕೊಂಡು ಅರೆಫ್ಯಾಸಿಸ್ಟ್ ಆಡಳಿತ ಹೇರಿದವರ ಕಾಲ ಮುಗಿಯಿತು ಎಂದು ಸಾರಲು ಬಂದಿದ್ದರು. ಐದು ವರ್ಷಗಳಲ್ಲಿ ಮೊದಲ ಬಾರಿಗೆ ಹೆದರಿಕೆ, ಭಯಗಳನ್ನೆಲ್ಲಾ ತೊರೆದು ಎಲ್ಲಾ ವಲಯಗಳ ಜನ ಬಂದು ಸೇರಿದ್ದರು. ಅದೊಂದು ರೀತಿಯಲ್ಲಿ ಬಂಡಾಯವೇ ಆಗಿತ್ತು. ಭಯೋತ್ಪಾದಕ ಆಡಳಿತ ವಿರುದ್ಧ ಬಂಡಾಯ.

ಇಂತಹ ಬೃಹತ್ ಜನಸ್ತೋಮ ಸೇರಿಯಬಹುದೆಂಬ ಭಯದಿಂದ ಆಳುವ ಕೂಟ ರ್‍ಯಾಲಿ ನಡೆಯದಂತೆ ಗಲಭೆ ಸೃಷ್ಟಿಸಲು ಪ್ರಯತ್ನಿಸಿತು ಕೂಡಾ. ಈ ಸಭೆಗೆ ಪರವಾನಿಗೆಯನ್ನು ಕೂಡಾ ವಾರಗಟ್ಟಲೆ ವಿಳಂಬಮಾಡಲಾಯಿತು. ರ್‍ಯಾಲಿಯ ದಿನದಂದು ಕೂಡಾ ಹಲವೆಡೆ ರ್‍ಯಾಲಿಗೆ ಬರುವ ಬಸ್ಸುಗಳನ್ನು ಟ್ರಕ್ಕುಗಳನ್ನು ಕಾಂಗ್ರೆಸ್(ಐ) ಗೂಂಡಾಗಳು ಹಲ್ಲೆ ಮಾಡಿ ತಡೆಯಲೆತ್ನಿಸಿದರು. ಆದರೆ ಅಲೆ-ಅಲೆಯಾಗಿ ಬಂದ ಜನಪ್ರವಾಹವನ್ನು ತಡೆಯಲು ಅವರಿಗಾಗಲಿಲ್ಲ. 1200 ಕ್ಕೂ ಹೆಚ್ಚು ತುಂಬಿ ತುಳುಕುತ್ತಿದ್ದ ವಾಹನಗಳಲ್ಲದೆ ರಾಜಧಾನಿಯ ಸುತ್ತಮುತ್ತಲ ಜನ ಸಾವಿರ--ಸಾವಿರ ಸಂಖ್ಯೆಯಲ್ಲಿ ಬಂದು ಮೈದಾನದಲ್ಲಿ ತುಂಬಿದರು.

ಈ ರ್‍ಯಾಲಿಯ ಅತ್ಯಂತ ಆಕರ್ಷಕ ಸಂಗತಿಯೆಂದರೆ ಯುವಜನರ ಪಾತ್ರ. ಇವರಲ್ಲಿ ಬಹುಮಂದಿ ಈ ಚುನಾವಣೆಯಲ್ಲಿ ಮೊತ್ತಮೊದಲ ಬಾರಿ ಮತನೀಡುವವರು. ಅವರ ಉತ್ಸಾಹದಲ್ಲಿ ಆಂತರಿಕ ದೃಢನಿರ್ಧಾರ ಝಳಕುತ್ತಿತ್ತು. ಈ ಚುನಾವಣೆಯಲ್ಲಿ ಮೋಸಕ್ಕೆ, ವಂಚನೆಗೆ ಅವಕಾಶ ಖಂಡಿತಾ ಕೊಡುವುದಿಲ್ಲ ಎಂಬ ಮುಗಿಲು ಮುಟ್ಟುವ ಘೋಷಣೆಗಳು. ಏನೇ ಬರಲಿ, ಚುನಾವಣಾ ಮೋಸವನ್ನು ಪ್ರತಿರೋಧಿಸುತ್ತೇವೆ ಎಂಬ ಪ್ರತಿಜ್ಞೆ ಈ ರ್‍ಯಾಲಿಯ ಪ್ರಮುಖ ಅಂಶವಾಗಿತ್ತು.

ಸಭೆ ಆರಂಭವಾಗುವ ಎಷ್ಟೋ ಮೊದಲೇ ಮೈದಾನ ಕಿಕ್ಕಿರಿದಿತ್ತು. ಎಲ್ಲಾ ಕೂಡು ರಸ್ತೆಗಳು ತುಂಬಿ ಹೋಗಿದ್ದವು. ಹಲವು ಮೆರವಣಿಗೆಗಾರರು ದೂರದಲ್ಲೆ ಕುಳಿತು ಭಾಷಣ ಕೇಳಬೇಕಾಯಿತು. ಯುವಕರು ಮರಹತ್ತಿ ತಮ್ಮ ಪ್ರಿಯ ಮುಖಂಡರನ್ನು ನೋಡುವ ಪ್ರಯತ್ನ ನಡೆಸಿದರು. ವೇದಿಕೆಯ ಮೇಲಿಂದ ಪ್ರತಿರೋಧದ ಕರೆಬಂದಾಗ ಇಡೀ ಸಭೆ ಒಕ್ಕೊರಲಿನಿಂದ ದನಿಗೂಡಿಸಿತು. ಭವಿಷ್ಯದ ಸಂಕೇತವಾಗಿತ್ತದು.

ಈ ಕೇಂದ್ರ ಚುನಾವಣಾ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್, ಪಶ್ಚಿಮಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು, ತ್ರಿಪುರಾದ ಮಾಜಿ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ, ಸಿಪಿಐನ ಗೀತಾ ಮುಖರ್ಜಿ, ಫಾರ್ವರ್ಡ್‌ಬ್ಲಾಕ್‌ನ ಚಿತ್ತಬಸು ಮತ್ತಿತರರು ಮಾತನಾಡಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ದಶರಥ್‌ದೇಬ್ ಅಧ್ಯಕ್ಷತೆ ವಹಿಸಿದ್ದರು.

ಬೃಹತ್ ಜನಸ್ತೋಮವನ್ನು ಕಂಡ ಸುರ್ಜಿತ್ ಜನ ವಂಚನೆ-ಮೋಸವನ್ನು ಎದುರಿಸಿ ಮತ್ತೆ ಪ್ರಜಾಪ್ರಭುತ್ವ ಸರಕಾರವನ್ನು ಅಧಿಕಾರಕ್ಕೆ ತರಲು ದೃಢ ಸಂಕಲ್ಪ ಮಾಡಿದ್ದಾರೆ ಎಂದರು. ಸಭೆಯ ದಿನ ಬೆಳಿಗ್ಗೆಯೇ ಆಳುವ ಕೂಟದ ಗೂಂಡಾಗಳು ಒಬ್ಬ ಸಿಪಿಐ(ಎಂ) ಕಾರ್ಯಕರ್ತರನ್ನು ಕೊಚ್ಚಿಹಾಕಿದ್ದರೂ ದೃತಿಗೆಡದೆ ಇಷ್ಟೊಂದು ಅಪಾರ ಜನ ಬಂದಿರುವುದನ್ನು ನೋಡಿದರೆ ವಿಜಯ ಖಂಡಿತ ಎಂದರು. ಎಡರಂಗ ಅಧಿಕಾರದಲ್ಲಿದ್ದಾಗಲೂ ಜನಗಳ ಪರವಾಗಿ ಕೆಲಸ ಮಾಡಿತು, ಅಧಿಕಾರ ವಿಲ್ಲದಾಗಲೂ ಜನರ ಬೆಂಬಲಕ್ಕೆ ನಿಂತಿತು. ಎಡರಂಗದ ಹತ್ತು ವರ್ಷಗಳ ಆಡಳಿತದಲ್ಲಿ ಚುನಾವಣಾ ಮೋಸ ನಡೆಯಿತೇ? ಭ್ರಷ್ಟಾಚಾರ ನಡೆಯಿತೇ? ನೃಪೇನ್ ಚಕ್ರವರ್ತಿ ತನ್ನ ಅಧಿಕೃತ ನಿವಾಸ ಬಿಟ್ಟು ಹೋದಾಗ ಕೇವಲ ಒಂದು ಸೂಟ್‌ಕೇಸ್ ಹಿಡಿದು ನಡೆದರು. ನಾವು ಜನಗಳಿಗಾಗಿ ಕೆಲಸ ಮಾಡುತ್ತೇವೆ. ಕಾಂಗ್ರೆಸ್ (ಐ) ಮುಖಂಡರು ಸ್ವಂತಕ್ಕಾಗಿಯೇ ಕೆಲಸ ಮಾಡುತ್ತಾರೆ. ಅದಕ್ಕಾಗಿ ಯಾವುದೇ ಕೋಮುವಾದಿ, ಪ್ರತ್ಯೇಕತಾವಾದಿ ಸಂಘಟನೆಗಳೊಡನೆ ಕೈಮಿಲಾಯಿಸಲೂ ಹೇಸುವುದಿಲ್ಲ ಎಂದರು.

ಒಂದು ಮುಕ್ತ-ನ್ಯಾಯ ಚುನಾವಣೆ ನಡೆದರೆ ಎಡ ಪ್ರಜಾಪ್ರಭುತ್ವ ರಂಗ ತ್ರಿಪುರಾದಲ್ಲಿ ಅಧಿಕಾರಕ್ಕೆ ಬರುವುದು ಖಂಡಿತ ಎಂದರು ಜ್ಯೋತಿ ಬಸು. "ಚುನಾವಣಾ ಮೋಸಗಳ ಬಗ್ಗೆ ಎಚ್ಚರದಿಂದಿರಿ ಎಂದರು ಬುಡಕಟ್ಟು ಜನಗಳು ಹಾಗೂ ಬಂಗಾಲಿಗಳ ನಡುವೆ ಸಾಮರಸ್ಯಕ್ಕೆ ಕಾಂಗ್ರೆ ಸರಕಾರ ಏನೂ ಮಾಡಲಿಲ್ಲ. ಎಡರಂಗ ಸರಕಾರವಷ್ಟೇ ಇದಕ್ಕೆ ಪ್ರಯತ್ನಿಸಿತ್ತು ಸ್ವಾಯುತ್ತ ಜಿಲ್ಲಾ ಮಂಡಳಿಗಳ ಮೂಲಕ ಬುಡಕಟ್ಟು ಜನಗಳಿಗೆ ಸ್ವಾಯುತ್ತಿದೆ ನೀಡಿ ದೇಶದ ಎದುರು ಒಂದು ಮಾದರಿ ಹಾಕಿಕೊಟ್ಟರು. ಪಶ್ಚಿಮಬಂಗಾಳದಲ್ಲಿ ನಾವೂ ಈ ಮಾದರಿಯಿಂದ ಪಾಠಕಲಿತೆವು ಎಂದರು ಜ್ಯೋತಿಬಸು. ನರಸಿಂಹರಾವ್ ಸರಕಾರದ ನಿಲುವುಗಳನ್ನು ಬಲವಾಗಿ ಟೀಕಿಸಿದ ಅವರು ಪಶ್ಚಿಮ ಬಂಗಾಳ ಜನತೆ ತ್ರಿಪುರಾದ ಜನತೆಯೊಂದಿಗಿದ್ದಾರೆ. ನೀವು ತೋರಿದ ಧೈರ್ಯಕ್ಕಾಗಿ ಅಭಿನಂದನೆಗಳು ಎಂದರು ತ್ರಿಪುರಾದ ಜನತೆಗೆ.

(ಐ.ಎನ್.ಎಸ್.)

ವಾರದ ನುಡಿ

ಶಿಕ್ಷಣ ನಿಜವಾಗಿಯೂ ಭಾರತದ ಪರಿಸ್ಥಿತಿಯಲ್ಲಿ ಪ್ರಸ್ತುತ ಪ್ರಶ್ನೆಯಲ್ಲ. ಒಬ್ಬ ರೈತನಿಗೆ ಬರವಣಿಗೆ ಬಂದರೇನು, ಬರದಿದ್ದರೇನು? ಅವನೇನು ಪತ್ರ ವ್ಯವಹಾರ ನಡೆಸಬೇಕೇ?

- ಕೆ.ಆರ್. ಮಲ್ಕಾನಿ
ಬಿಜೆಪಿ ಉಪಾಧ್ಯಕ್ಷ



ಕೋಟಿ ಕೋಟಿ ಜನರ ಕಂಠದಲ್ಲಿ ಮೊಳಗಿದ ಕೋಮು ಸೌಹಾರ್ದತೆಯ ಪ್ರತಿಜ್ಞೆ
ಜನತೆಯ ಉತ್ಸವದ ರೂಪ ತಳೆದ ಹೋರಾಟ
ಪಶ್ಚಿಮ ಬಂಗಾಳದಲ್ಲಿ ವಿದ್ಯುತ್ ಸಂಚಾರ ತಂದ ಮಾನವ ಸೇತುವೆ

ಪುಟ 7 ನೋಡಿ

ಚಿತ್ರದಲ್ಲಿ ಮುಖ್ಯಮಂತ್ರಿ ಜ್ಯೋತಿ ಬಸು ಮತ್ತು ಇತರ ಎಡರಂಗ ಮುಖಂಡರು

ಕೋಮು ಸಾಮರಸ್ಯ ಪ್ರಚಾರಕ್ಕೆ ರಾಜ್ಯದಲ್ಲಿ ಭಾರೀ ಸ್ಪಂದನ

ಕೋಮುವಾದಿಗಳ ಅಬ್ಬರದ ವಿರುದ್ಧ ಶಕ್ತಿಗಳ ಗರ್ಜನೆ ದೇಶಾದ್ಯಂತ ಮೊಳಗುತ್ತಿದೆ, ವೈವಿಧ್ಯಮಯ ರೂಪಗಳಲ್ಲಿ. ಗಣರಾಜ್ಯ ದಿನವಾದ ಜನವರಿ 26 ರಂದು ರಾಷ್ಟ್ರದ ಉದ್ದಗಲದಲ್ಲಿ ಕೋಮು ಸೌಹಾರ್ದಕ್ಕಾಗಿ 'ಮಾನವಸರಪಳಿ' ಕಾರ್ಯಕ್ರಮ ರಾಷ್ಟ್ರಮಟ್ಟದ. ವೇದಿಕೆಯ ಕರೆಗೆ ನಮ್ಮ ರಾಜ್ಯದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.... ಕೆಲವು ಊರುಗಳಿಂದ ಬಂದಿರುವ ವಿವಿಧ ಕಾರ್ಯಕ್ರಮಗಳ ವರದಿ ಇಲ್ಲಿದೆ.

ರಾರಾವಿ: ದಿನಾಂಕ 27-1-93 ರಂದು ಡಿ.ವೈ.ಎಫ್.ಐ.ನ ನೇತೃತ್ವದಲ್ಲಿ ಸಿರಗುಪ್ಪ ತಾಲ್ಲೂಕಿನ ರಾರಾವಿಯಲ್ಲಿ 'ಮಾನವ ಸರಪಳಿ' ಕಾರ್ಯಕ್ರಮ ಜರುಗಿತು. ನಂತರ ನಡೆದ ಬಹಿರಂಗ ಸಭೆಯಲ್ಲಿ ದೇಶದಲ್ಲಿ ಜರುಗಿರುವ, ಜರುಗುತ್ತಿರುವ ಕೋಮುವಾದದ ಬಗ್ಗೆ ಹಾಗೂ ಮುಖ್ಯವಾಗಿ ಬಿ.ಜೆ.ಪಿ. ಹಿಂದು ಧರ್ಮದ ಹೆಸರಿನಲ್ಲಿ ಭಾರತದಾದ್ಯಂತ ಹುಟ್ಟುಹಾಕಿರುವ ಕೋಮುಗಲಭೆಗಳನ್ನು ಖಂಡಿಸಲಾಯಿತು.

ಪ್ರಧಾನಿ ನರಸಿಂಹರಾವ್ ಸರಕಾರ ನಿರ್ಲಿಪ್ತತೆಯಿಂದ ವರ್ತನೆ ಮಾಡುತ್ತಿರುವುದರ ಬಗ್ಗೆ ವಿವರವಾಗಿ ತಿಳಿಸಲಾಯಿತು.

ಡಿ.ವೈ.ಎಫ್.ಐ.ನ ರಾಮಾಂಜನೇಯಲು (ರಾಜ್ಯ ಸಮಿತಿ ಸದಸ್ಯ) ಹೆಚ್. ಚನ್ನಬಸಪ್ಪ, ಶಿಕ್ಷಕರು, ಮಾರಪ್ಪ (ರೈತಸಂಘ) ಮುಂತಾದವರು ಮಾತನಾಡಿದರು.

ಷಣ್ಮುಖಪ್ಪ, ಅಂಜಿನಪ್ಪ, ಬಸವರಾಜ, ಇ.ಆರ್ ಯಲ್ಲಪ್ಪ ಮುಂತಾದವರು ಮುಂದಾಳತ್ವ ವಹಿಸಿದ್ದರು.

'ಮಾನವ ಸರಪಳಿ'ಕಾರ್ಯಕ್ರಮದಲ್ಲಿ ಸುಮಾರು 100 ಮಂದಿ ವಿದ್ಯಾರ್ಥಿ ಯುವಜನರು ಭಾಗವಹಿಸಿದ್ದರು.

ಚಿಕ್ಕಬಳ್ಳಾಪುರ : ಜನವರಿ 26 ರಂದು ಚಿಕ್ಕಬಳ್ಳಾಪುರದಲ್ಲಿ 'ಮಾನವ ಸರಪಳಿ' ಕಾರ್ಯಕ್ರಮ ನಡೆಯಿತು. ಸಿಪಿಐ(ಎಂ), ಜನತಾದಳ ಎಸ್.ಜೆ.ಪಿ. ಮತ್ತು ಡಿ.ಎಸ್.ಎಫ್. ಕಾರ್ಯಕರ್ತರು ಪಾಲ್ಗೊಂಡಿದ್ದರು. ತಾಲ್ಲೂಕು ಕಚೇರಿ ಮುಂದೆ ನಡೆದ ಸಭೆಯಲ್ಲಿ ಸಿಪಿಐ(ಎಂ) ನಾಯಕರು ಎಸ್.ಲಕ್ಷ್ಮಯ್ಯ ಕೋಮು ಸೌಹಾರ್ದ ವಿಚಾರವಾಗಿ ಮಾತನಾಡಿದರು. ವಿಧಾನಪರಿಷತ್ ಸದಸ್ಯ, ಕೆ.ಬಿ. ಪಿಳ್ಳಪ್ಪ ಪ್ರತಿಜ್ಞೆ ಬೋಧಿಸಿದರು.

ಹಟ್ಟಿ : ಗಣರಾಜ್ಯ ದಿನದಂದು ಹಟ್ಟಿಯಲ್ಲಿ ಮಾನವ ಸರಪಳಿ ಕಾರ್ಯಕ್ರಮಕ್ಕೂ ಮುನ್ನ ಸಿಐಟಿಯು ನೇತೃತ್ವದಲ್ಲಿ ಸುಮಾರು 200 ಜನರು ಭಾಗವಹಿಸಿದ ಕೋಮು ಸೌಹಾರ್ದ ಮೆರವಣಿಗೆ ನಡೆಸಲಾಯಿತು.

ಸಂಜೆ 5-15 ರಿಂದ 5-30 ರ ಅವಧಿಯಲ್ಲಿ ರಚಿತವಾದ ಮಾನವ ಸರಪಳಿ ಪಟ್ಟಣದ ಜನರಲ್ಲಿ ಕುತೂಹಲವನ್ನು ಕೆರಳಿಸಿತ್ತು. ಎಸ್.ಎಫ್.ಐ. ಡಿ.ವೈ.ಎಫ್.ಐ., ರಿಕ್ಷಾಚಾಲಕರ ಸಂಘ, ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರರ ಸಂಘಗಳಿಗೆ ಸೇರಿದ 400 ಕ್ಕೂ ಕಾರ್ಯಕರ್ತರು ಕೈಕೈ ಹಿಡಿದು ಮಾನವ ಸರಪಳಿಯನ್ನು ನಿರ್ಮಿಸಿದ್ದರು.

ಕೋಮುಸೌಹಾರ್ದಕ್ಕಾಗಿ ರಾಷ್ಟ್ರವ್ಯಾಪಿಯಾಗಿ ನಡೆಯುತ್ತಿರುವ ಸಹಿಸಂಗ್ರಹ ಕಾರ್ಯವನ್ನು ಹಟ್ಟಿಯಲ್ಲಿ ಯಶಸ್ವಿಗೊಳಿಸಲು ಚಳವಳಿಯನ್ನು ಹಮ್ಮಿಕೊಳ್ಳಲಾಗಿದೆ.

ಕವು ಕೋಡಿ : ಕವುಕೋಡಿ ಎಸ್ಟೇಟ್ ಕಾರ್ಮಿಕರು ಮತ್ತು ಸುತ್ತಮುತ್ತಲ ಹಳ್ಳಿಗಳ ಜನರು ಸೇರಿ ಜ. 26 ರಂದು ಮೆರವಣಿಗೆ ಹಾಗೂ ಮಾನವ ಸರಪಳಿ ಕಾರ್ಯಕ್ರಮಗಳನ್ನು ನಡೆಸಿದರು. ಸಿಪಿಐ(ಎಂ) ನಾಯಕರಾದ ಕೃಷ್ಣಮೂರ್ತಿ, ಮುತ್ತಳುಣ್ಣಿ ಮತ್ತು ಎಸ್. ರಾಜೇಂದ್ರ ಕೋಮುಶಕ್ತಿಗಳ ದುಷ್ಟ ಸಂಚುಗಳ ಬಗ್ಗೆ ವಿವರಣೆ ನೀಡಿ ಜಾಗೃತರಾಗಿರುವಂತೆ ಕರೆ ನೀಡಿದರು.

ಸಿಪಿಐ(ಎಂ) ಕವುಕೋಡಿ ಶಾಖೆ ಈ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿತ್ತು.

ಭಗತ್‌ಸಿಂಗ್ ಸ್ಮರಣೆಗೆ ..

ಶಿಡ್ಲಘಟ್ಟ : ಕೋಲಾರ ಜಿಲ್ಲೆ ಶಿಡ್ಲಘಟ್ಟ ಟೌನ್‌ನಲ್ಲಿ ಭಗತ್‌ಸಿಂಗ್ ಹುತಾತ್ಮ ದಿನಾಚರಣೆ ಜ್ಞಾಪಕಾರ್ಥವಾಗಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ನೇತೃತ್ವದಲ್ಲಿ "ಮಾನವ ಸರಪಳಿ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು ಈ ಸಂದರ್ಭದಲ್ಲಿ ಇಲ್ಲಿನ ಪ್ರವಾಸಿ ಮಂದಿರದ ಮುಂಭಾಗದಿಂದ ಮಿಡ್ಲ್‌ಸ್ಕೂಲ್ ವೃತ್ತದವರೆಗೆ ಈ ಸಂಘಗಳ ಕಾರ್ಯಕರ್ತರು ಹಿಂದು, ಮುಸ್ಲಿಂ, ಅನ್ನುವ ಭೇದ ಭಾವವನ್ನು ಬಿಟ್ಟು ಎಲ್ಲರೂ ಕೈಕೈಜೋಡಿಸಿ ಮಾನವ ಸರಪಳಿ ರಚಿಸಿದರು. ಈ ಕಾರ್ಯಕರ್ತರು 'ಹಿಂದು-ಮುಸ್ಲಿಂ-ಭಾಯಿ ಭಾಯಿ', 'ನಮ್ಮ ದೇಶ ಛಿದ್ರವಾಗಲು ಬಿಡುವುದಿಲ್ಲ', 'ಕೋಮುವಾದಿ ಶಕ್ತಿಗಳಿಗೆ ಧಿಕ್ಕಾರ', 'ದೇಶದ ಐಕ್ಯತೆ ಸಮಗ್ರತೆ ಚಿರಾಯುವಾಗಲಿ' ಎಂದು ಘೋಷಣೆಗಳನ್ನು ಕೂಗಿದರು. ನಂತರ ಮಿಡ್ಲ್‌ಸ್ಕೂಲ್ ವೃತ್ತದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಮುಖಂಡರು ಅಬ್ದುಲ್ ಸುಬಾನ್ ಸಿಪಿಐ(ಎಂ) ಕಾರ್ಯದರ್ಶಿ ಆರ್. ಮುನಿಯಪ್ಪನವರು ಮಾತನಾಡಿದರು. ನಂತರ ಭಾರತ ಪ್ರಜಾಸತ್ತಾತ್ಮ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಕೋಲಾರ ಜಿಲ್ಲಾ ಸದಸ್ಯರಾದ ಎಸ್. ರಹಮತ್ತುಲ್ಲಾ ಕೂಡಾ ಸಭೆಯಲ್ಲಿ ಭಾಷಣ ಮಾಡಿದರು.

ಕುಂದಾಪುರ : ಗಣರಾಜ್ಯೋತ್ಸವದ ದಿನದಂದು 'ಕೋಮುವಾದ ವಿರೋಧಿ ವೇದಿಕೆ' ನೇತೃತ್ವದಲ್ಲಿ ಕುಂದಾಪುರದ ಗಾಂಧಿ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆ ಜರುಗಿತು. ಅದಕ್ಕೆ ಮುನ್ನ ಪ್ರಗತಿಪರ ಗಣ್ಯ ವ್ಯಕ್ತಿಗಳು, ಕಾರ್ಮಿಕರು ಹಾಗೂ ಯುವ ಜನ ಮೆರವಣಿಗೆಯಲ್ಲಿ ಭಾಗವಹಿಸಿದರು. ಅಪ್ಪಣ್ಣ ಹೆಗ್ಡೆ, ಬಿ. ಅರುಣಕುಮಾರ್ ಶೆಟ್ಟಿ, ಅಬ್ರಹಾಂ ಕರ್ಕಡ, ಮಾಣಿಗೋಪಾಲ, ಜಿ.ವಿ. ಕಾರಂತ, ಎಚ್. ನರಸಿಂಹ, ಮುಕುಂದನ್, ಕೆ. ಶಂಕರ, ಜಿ.ಎಲ್.ಡಿ ಲೀಮ, ಎಡ್ವಿನ್‌ಕ್ರಾಸ್ತಾ ವಿ. ನರಸಿಂಹ, ಸಿ. ನಾರಾಯಣ ಮತ್ತು ಇತರರು ಭಾಗವಹಿಸಿದ್ದರು.

ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ವಿಧಾನ ಪರಿಷತ್ ಸದಸ್ಯರಾದ ಬಿ. ಅಪ್ಪಣ್ಣ ಹೆಗ್ಡೆ ವಹಿಸಿದ್ದರು. ಕೋಮುವಾದ ವಿರೋಧಿ ವೇದಿಕೆ, ಕುಂದಾಪುರ ಇವರ ಸಂಚಾಲಕರಲ್ಲಿ ಒಬ್ಬರಾದ ಜಿ.ವಿ. ಕಾರಂತ ಸ್ವಾಗತಿಸಿ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು. ಕೋಮುವಾದ ವಿರೋಧಿ ವೇದಿಕೆ, ಮಂಗಳೂರು ಇವರ ಸಂಚಾಲಕರಾದ ಫಣಿರಾಜ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಭಾರತದ ಸಂವಿಧಾನ ಜಾತ್ಯಾತೀತ ವ್ಯವಸ್ಥೆಯ ಕುರಿತು ವಿವರಿಸಿ, ಕೋಮುವಾದಿ ಶಕ್ತಿಗಳ ಬೆಳವಣಿಗೆ ದೇಶದ ಪ್ರಜಾಪ್ರಭುತ್ವ, ಜಾತ್ಯಾತೀತತೆ ಮತ್ತು ಸಮಗ್ರತೆಗೇ ಮಾರಕವಾದುದಾಗಿವೆ ಎಂಬುದನ್ನು ಮನಗಂಡು ಈ ಶಕ್ತಿಗಳನ್ನು ಎದುರಿಸಲು ನಮ್ಮೆಲ್ಲರ ಶಕ್ತಿಗಳನ್ನು ಒಗ್ಗೂಡಿಸಬೇಕಾಗಿದೆ ಎಂದು ಹೇಳಿದರು.

ಅನಂತರ ತಾಲೂಕಿನ ಪ್ರಮುಖ ವ್ಯಕ್ತಿಗಳಲ್ಲಿ ಕೆಲವರಾದ ಬಿ. ಅರುಣಕುಮಾರ ಶೆಟ್ಟಿ, ಪುರಸಭಾಧ್ಯಕ್ಷ ಜಿ.ಎಲ್. ಡಿ. ಲೀಮ, ಬೈಂದೂರಿನ ಶಾಸಕರಾದ ಜಿ.ಎಸ್. ಆಚಾರ್ ಮತ್ತು ಅಬ್ರಹಾಂ ಕರ್ಕಡ ಇವರು ಮಾತನಾಡಿದರು.

ಸಭೆಯಲ್ಲಿ ಕೋಮುವಾದ ವಿರೋಧಿ ವೇದಿಕೆಯ ಇನ್ನೊಬ್ಬ ಸಂಚಾಲಕ ಕೆ.ಶಂಕರ್‌ರವರು ಮಾತನಾಡಿ ಇತ್ತೀಚೆಗೆ ಶಾಂತಿಯನ್ನು ಕದಡಿದ ಪ್ರೇಮ ಪ್ರಕರಣದ ಬಗ್ಗೆ ಪ್ರಸ್ತಾಪಿಸಿ, ಭಾಸ್ಕರ ಕೊಠಾರಿಯ ಅಪಹರಣಕ್ಕೆ ಸಂಬಂಧಪಟ್ಟ ಪತ್ರಿಕಾ ವರದಿಗಳು ಜನರಲ್ಲಿ ಸಂಶಯವನ್ನು ಸೃಷ್ಟಿಮಾಡಿದೆ ಎಂದು ಹೇಳಿ, ಈ ಬಗ್ಗೆ ಸಿ.ಓ.ಡಿ ತನಿಖೆಗೆ ಆಜ್ಞೆ ಮಾಡಬೇಕು ಹಾಗೂ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯದ ಕುರಿತು ವಿವರಿಸಿ ಶಾಂತಿ ಕಾಪಾಡಲು ಮನವಿ ಮಾಡಿದರು.

ಕೋಮುವಾದ ವಿರೋಧಿ ವೇದಿಕೆಯ ಸಂಚಾಲಕರಲ್ಲಿ ಒಬ್ಬರಾದ ಮಾಣಿ ಗೋಪಾಲ ಧನ್ಯವಾದ ಅರ್ಪಿಸಿದರು.

ಕಹಪುರ: 26-1-93 ರಂದು ಕಹಪುರ ಪಟ್ಟಣದಲ್ಲಿ ಎಸ್.ಎಫ್.ಐ., ಡಿ.ಎಸ್.ಎಸ್., ಎಐ.ಎಸ್.ಎಫ್. ಹಾಗೂ ಸಿಪಿಐ(ಎಂ) ಮುಖ್ಯ ಬೀದಿಗಳಲ್ಲಿ ಕೋಮುಸೌಹಾರ್ದತೆ ಮತ್ತು ರಾಷ್ಟ್ರೀಯ ಐಕ್ಯತೆಗಾಗಿ ಮಾನವ ಸರಪಳಿ ಕಾರ್ಯಕ್ರಮವನ್ನು ನಡೆಸಿದವು.

ಎಸ್.ಎಫ್.ಐ. ಅಧ್ಯಕ್ಷ ಬಸವರಾಜ. ಕಂದಳ್ಳಿ ಡಿ.ಎಸ್.ಎಸ್.ನ ಹೊನ್ನಪ್ಪ ಟೋಕಾಪೂರ, ಡಿ.ಎಸ್.ಎಫ್.ನ ಜಿಲ್ಲಾ ಸಂಚಾಲಕರಾದ ಮಲ್ಲಿಕಾರ್ಜುನ ಪೂಜಾರಿ, ಸಿಪಿಐ(ಎಂ)ನ ಸಿ.ಎಚ್. ಆನೆಗುಂದಿ ಎಸ್.ಎಫ್.ಐ.ನ ಜಿಲ್ಲಾ ಜಂಟಿ ಕಾರ್ಯದರ್ಶಿ ಆಮಲಪ್ಪ ದೇವಿನಕಟ್ಟಿ, ಎ.ಐ.ಎಸ್.ಎಫ್.ನ ಶರಣಪ್ಪ ಕ್ಯಾತನಾಳ ನೇತೃತ್ವ ವಹಿಸಿದ್ದರು.

ನಂತರ ನಡೆದ ಸಭೆಯನ್ನು ಉದ್ದೇಶಿಸಿ ಎಸ್.ಎಫ್.ಐನ ಕಾರ್ಯದರ್ಶಿ ಅಯ್ಯಪ್ಪ ಮೊರಾಶಿ, ಡಿ.ಎಸ್.ಎಸ್.ನ ಸಹ ಸಂಚಾಲಕ ನೀಲಕಂಠ ಬಡಿಗೇರಿ ಮಾತನಾಡಿದರು.

ಮಾನವ ಸರಪಳಿಯ ಮುಖ್ಯಉದ್ದೇಶವನ್ನು ಸಿಪಿಐ(ಎಂ) ಕಾರ್ಯದರ್ಶಿ ಆನೆಗುಂದಿ ವಿವರಿಸಿದರು. ದೇಶದ ಐಕ್ಯತೆ ಕಾಪಾಡುವುದು ಪ್ರತಿಯೊಬ್ಬ ನಾಗರಿಕರ, ಯುವ ವಿದ್ಯಾರ್ಥಿ, ರೈತರ ಕರ್ತವ್ಯವಾಗಿದೆ. ದೇಶ ಇಂದು ಗಂಭೀರವಾದ ಪರಿಸ್ಥಿತಿಗೆ ಸಿಲುಕಿದೆ. ಜನರಲ್ಲಿ ಕೋಮು ಭಾವನೆ ಮೂಡಿಸುವ ಶಕ್ತಿಗಳನ್ನು ಖಂಡಿಸುತ್ತಾ ಜನರ ಹೆಣಗಳ ಮೇಲೆ ಅಧಿಕಾರದ ಗದ್ದುಗೆಯನ್ನು ಏರುವುದು ಬಿಟ್ಟು ಜನರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಹೇಳುತ್ತಾ ರಾಷ್ಟ್ರೀಯ ಐಕ್ಯತೆ ಸಮಗ್ರತೆಯ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಬಾಗೇಪಲ್ಲಿ : ಜನವರಿ 21ರಂದು ಬಾಗೇಪಲ್ಲಿ ಪುರಸಭೆ ಕಚೇರಿ ಸಭಾಂಗಣದಲ್ಲಿ ತಾಲೂಕು ಡಿವೈಎಫ್ಐ ಸಮಿತಿಯಿಂದ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಅಧ್ಯಕ್ಷತೆಯನ್ನು ಗೂಳೂರಿನ ನಿಡುಮಾಮಿಡಿ ಪೀಠಾಧಿಕಾರಿಗಳಾದ ಶ್ರೀ ಚೆನ್ನಮಲ್ಲ ವೀರಭದ್ರ ದೇಶಿಕೇಂದ್ರ ಮಹಾಸ್ವಾಮಿಗಳು ವಹಿಸಿದ್ದರು. ಆಡಳಿತ ವರ್ಗ ಮತ್ತು ಪುರೋಹಿತ ವರ್ಗ ಒಂದಾಗಿ ತಮ್ಮ ಹಿತಸಾಧನೆಗಾಗಿ ಸಾಮಾನ್ಯ ಜನರನ್ನು ಶೋಷಿಸಿ ಅಧಿಕಾರದಾಹಕ್ಕಾಗಿ ನಮ್ಮನ್ನು ಜಾತಿ-ಜಾತಿಗಳಾಗಿ ದೇಪರ್ಡಿಸಿದ್ದಾರೆ ಎಂಬುದದಾಗಿ ಮಹಾಸ್ವಾಮಿ ತಿಳಿಸಿದರು. ಇಂದಿನ ಧಾರ್ಮಿಕ ಅನಿಷ್ಟಗಳಿಗೆಲ್ಲಾ ಕಾವಿಬಟ್ಟೆಗಳನ್ನು ಹಾಕಿಯುವವರೇ ಕಾರಣ ಎಂದು ದೂಷಿಸಿದರು. ಯಾರೂ ಗಣಪತಿಯನ್ನು ಬೀದಿಯಲ್ಲಿ ಮೆರವಣಿಗೆ ಮಾಡಿದರೋ ಅವರೇ ರಾಮನನ್ನು ಕೂಡಾ ಬೀದಿಗೆ ತಂದರು. ಸಾಮಾನ್ಯ ಜನರು ಇವರ ಕುತಂತ್ರಗಳಿಗೆ ಬಲಿಯಾಗದೇ ಪ್ರೀತಿ, ಪ್ರೇಮ, ಸಂಯಮ, ಶಾಂತಿ ಸಾಮರಸ್ಯದೊಂದಿಗೆ ಬಾಳಬೇಕು ಎಂದು ವಿನಂತಿಸಿದರು.

ಮುಖ್ಯಭಾಷಣಕಾರರಾಗಿದ್ದ ಸಿಪಿಐ(ಎಂ) ಮುಖಂಡ ಜಿ. ವಿ ಶ್ರೀರಾಮರೆಡ್ಡಿ ಎಲ್ಲಾ ಜಾತಿ ಮತ್ತು ಧರ್ಮಗಳನ್ನು ಮೆಟ್ಟಿ ನಿಂತು ಒಂದಾಗಿ ಬಾಳುವುದೇ ಜಾತ್ಯಾತೀತತೆ ಎಂದು ಹೇಳಿದರು. ಇಡೀ ಸಮಾಜ ಭ್ರಷ್ಟವಾಗಿದೆ. ಅದರಲ್ಲಿ ರಾಜಕೀಯವೂ ಒಂದು ಭಾಗವಾಗಿದೆ ರಾಜಕೀಯ ಅವಕಾಶವಾದಿಗಳು ಅಸ್ಸಾಂ, ಪಂಜಾಬ್,ಕಾಶ್ಮೀರಗಳಲ್ಲಿ ಪ್ರತ್ಯೇಕತಾವಾದಿಗಳು ಬೆಳೆಯುವುದಕ್ಕೆ ಮತಾಂಧ ಮೂಲಭೂತವಾದಿಗಳು ಬೆಳೆಯುವುದಕ್ಕೆ ಕಾರಣಕರ್ತರು. ಇಂದಿನ ಈ ಮತಾಂಧ ಶಕ್ತಿಗಳು ಹಿಟ್ಲರ್‌ನ ನಾಜಿ ಪಡೆಗಳನ್ನು ಹೋಲುತ್ತವೆ. ಅಧಿಕಾರಕ್ಕೋಸ್ಕರ ಜರ್ಮನಿಯಲ್ಲಿ ಹಿಟ್ಲರ್‌ನ ಅಧಿಕಾರಾವಧಿಯಲ್ಲಿ ಎಂತಹ ರಾಜಕೀಯ ಬೆಳವಣಿಗೆಗಳು ಸೃಷ್ಟಿಯಾಗಿದ್ದವೋ ಅಂತಹ ಬೆಳವಣಿಗೆಗಳು ಇಂದಿನ ಭಾರತದಲ್ಲಿ ಸೃಷ್ಟಿಯಾಗಿವೆ. ಇಂತಹ ಸಮಯದಲ್ಲಿ ಎಲ್ಲಾ ಯುವಜನರೂ ವಿದ್ಯಾರ್ಥಿಗಳೂ ಜನರಲ್ಲಿ ಜಾತ್ಯಾತೀತತೆಯ ಮೌಲ್ಯಗಳನ್ನು ಮೂಡಿಸುವಲ್ಲಿ ಸಕ್ರಿಯ ಪಾತ್ರ ವಹಿಸಬೇಕೆಂದು ಕರೆಯಿತ್ತರು.

ನ್ಯಾಷನಲ್ ಕಾಲೇಜಿನ ಉಪನ್ಯಾಸಕರಾದ ಹೆಚ್.ಆರ್. ಕೃಷ್ಣಮೂರ್ತಿ ಮಾತನಾಡುತ್ತಾ, ಧರ್ಮದ ಹೆಸರಿನಲ್ಲಿ ಈ ದೇಶದಲ್ಲಿ ಏನೆಲ್ಲಾ ಅನಿಷ್ಟಗಳು ನಡೆಯುತ್ತಿವೆಯೋ ಅವು ನಮ್ಮನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ

(ಪುಟ 3ಕ್ಕೆ)

ಈದ್‌ಗಾ ವಿವಾದ : ರಾಷ್ಟ್ರ ಪ್ರೇಮದ ಪ್ರದರ್ಶನವೋ ? ಕೋಮು ರಾಜಕೀಯದ ಆಟದ ದಾಳವೋ ?

ಹುಬ್ಬಳ್ಳಿಯ ಈದ್‌ಗಾ ಮೈದಾನವಲ್ಲಿ ರಾಷ್ಟ್ರಧ್ವಜ ಹಾರಿಸಬೇಕೆಂಬ ಒತ್ತಾಯ ತಪ್ಪೇ?

• ಈ ಪ್ರಶ್ನೆಯಲ್ಲಿ ಎರಡು ಅಂಶಗಳು ಇವೆ. ಒಂದು ಕಾನೂನಿನ ಅಂಶ, ಇನ್ನೊಂದು ನಿಜಕ್ಕೂ ಇದು 'ರಾಷ್ಟ್ರಪ್ರೇಮ'ದ ಪ್ರಶ್ನೆ ಇಲ್ಲಿದೆಯೇ ಎಂಬುದು. ಹುಬ್ಬಳ್ಳಿಯ ಈದ್‌ಗಾ ಮೈದಾನ ಈಗ ಎಲ್ಲರಿಗೂ ತಿಳಿದಿರುವಂತೆ ನ್ಯಾಯ ವಿವಾದವೊಂದರಲ್ಲಿ ಸಿಲುಕಿರುವ ಜಾಗ. 1921 ರಲ್ಲಿ ಆಗಿನ ಹುಬ್ಬಳ್ಳಿ ನಗರ ಸಭೆ ಒಂದು ನಿರ್ಣಯ ಅಂಗೀಕರಿಸಿ ಇದನ್ನು ಮುಸ್ಲಿಮರಿಗೆ ಲೀಸಿಗೆ ನೀಡಿತ್ತು - ವರ್ಷಕ್ಕೆ ಎರಡುಬಾರಿ ನಮಾಜು ಸಲ್ಲಿಸಲು ಎಂಬ ಉದ್ದೇಶಕ್ಕಾಗಿ. ಬೇರೆ ಯಾವುದೇ ಕಟ್ಟಡವನ್ನು ಅಲ್ಲಿ ಕಟ್ಟಬಾರದು ಎಂಬ ಶರತ್ತೂ ಇತ್ತು. ಆಗಿನ ಮೈಸೂರು ಸರಕಾರ ಇದಕ್ಕೆ ಅನುಮೋದನೆ ನೀಡಿತ್ತು. ಅದರ ಪ್ರಕಾರ ಈ ಮೈದಾನದಲ್ಲಿ ಒಂದು ಈದ್‌ಗಾ ಗೋಡೆ ರಚಿಸಲಾಯಿತು. ವರ್ಷದಲ್ಲಿ ಎರಡು ಬಾರಿ ನಮಾಜು ಬಿಟ್ಟರೆ ಉಳಿದಂತೆ ಇದು ಎಲ್ಲರೂ ಬಳಸುವ ಸಾರ್ವಜನಿಕ ಸ್ಥಳವಾಗಿಯೇ ಉಳಿದಿತ್ತು. 1971 ರಲ್ಲಿ ಸ್ಥಳೀಯ ಅಂಜುಮಾನ್-ಎ-ಇಸ್ಲಾಮ್ ಸಂಘಟನೆ ಇಲ್ಲಿ ಒಂದು ಶಾಂಪಿಂಗ್ ಕಾಂಪ್ಲೆಕ್ಸ್ ಕಟ್ಟಲು ಆರಂಭಿಸಿದಾಗ ವಿವಾದ ಬಂತು. ಇದು ಸಾರ್ವಜನಿಕ ಆಸ್ತಿ ಎಂದು ಹಲವು ಹಿಂದೂ ನಾಗರಿಕರು ವಾದಿಸಿದರೆ, ಈ ಮುಸ್ಲಿಮರ ಸಂಘಟನೆ ಇದು ತಮಗೆ ಲೀಸ್‌ನಲ್ಲಿ ದೊರೆತ ಜಮೀನು ಎಂದು ವಾದಿಸಿತು. ಸ್ಥಳೀಯ ಮುನ್ಸಿಫ್ ಕೋರ್ಟ್ ಇದು ಸಾರ್ವಜನಿಕ ಆಸ್ತಿ ಎಂಬ ಸುಮಾರು 100 ಹಿಂದೂ ನಾಗರಿಕರ ವಾದವನ್ನು ಎತ್ತಿ ಹಿಡಿಯಿತು. ಅಲ್ಲದೆ ಹಿಂದಿನ ಮೈಸೂರು ಸರಕಾರದ ನಿರ್ಣಯಕ್ಕೆ ಈಗ ಜನ ಬಾಧ್ಯರಲ್ಲ ಎಂದೂ ಹೇಳಿತು. ಅಂಜುಮಾನ್ ಸಂಘಟನೆ, ತೀರ್ಪಿನ ವಿರುದ್ಧ ಅಪೀಲು ಮಾಡಿತು. ಅಪೀಲುಗಳು ವಜಾ ಆದವು. ಕರ್ನಾಟಕ ಹೈಕೋರ್ಟ್ ಮುನ್ಸಿಫ್ ಕೋರ್ಟಿನ ತೀರ್ಪನ್ನು ಎತ್ತಿ ಹಿಡಿಯಿತು. ಅಂಜುಮನ್ ಸುಪ್ರೀಂ ಕೋರ್ಟ್‌ಗೆ ಈಗ ಅಪೀಲು ಹೋಗಿದ್ದು ಸುಪ್ರಿಂ ಕೋರ್ಟ್ ಹೈಕೋರ್ಟಿನ ಈ ತೀರ್ಪಿಗೆ ತಡೆಯಾಜ್ಞೆ ನೀಡಿದೆ. ಅಂದರೆ ಸದ್ಯ ಈಗ ಇದು ವಿವಾದಗ್ರಸ್ತ ಸ್ಥಳ.

ಆದರೆ ವಾಸ್ತವವಾಗಿ ವರ್ಷದಲ್ಲಿ ಎರಡು ಬಾರಿ ನಮಾಜಿನ ದಿನ ಬಿಟ್ಟರೆ ಇತರ ಎಲ್ಲಾ ದಿನಗಳಲ್ಲಿ ಇದನ್ನು ಸಾರ್ವಜನಿಕ ಸ್ಥಳವಾಗಿಯೇ ಈಗಲೂ ಬಳಸಲಾಗುತ್ತಿದೆ. ಬಿ.ಜೆ.ಪಿಯಯೂ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು ಇಲ್ಲಿ ಸಾರ್ವಜನಿಕ ಸಭೆ ನಡೆಸುತ್ತಾ ಬಂದಿವೆ. ಯಾರೂ ಇದಕ್ಕೆ ಅಡ್ಡಿ ತಂದಿಲ್ಲ.

ಇನ್ನು ರಾಷ್ಟ್ರಧ್ವಜ ಹಾರಿಸುವ ಪ್ರಶ್ನೆ. ದೇಶದ ಯಾವುದೇ ಒಂದು ಮೂಲೆಯಲ್ಲಿ ರಾಷ್ಟ್ರಧ್ವಜ ಹಾರಿಸಲು ಸಾಧ್ಯವಿಲ್ಲ ಎಂದಾದರೆ ಅದು ಭಾರತಕ್ಕೆ ಸೇರಿಲ್ಲವೆಂದಾಗುತ್ತದೆ ಎಂದಿದ್ದಾರಂತೆ ಬಿಜೆಪಿ ಅಧ್ಯಕ್ಷರು. ಇದು ನಿಜವೇ? ನಮ್ಮ ದೇಶದಲ್ಲಿರುವ ದೇವಸ್ಥಾನಗಳ ಮೇಲೆ ಜನವರಿ 26 ರಂದು ಹಾಗೂ ಆಗಸ್ಟ್ 15 ರಂದಾದರೂ ರಾಷ್ಟ್ರ ಧ್ವಜ ಹಾರಿಸುತ್ತಾರೆಯೇ? ಹಾಗಿದ್ದರೆ ಈ ದೇವಸ್ಥಾನಗಳು ಯಾವುವೂ 'ಭಾರತ'ದಲ್ಲಿ ಇಲ್ಲವೇ? ಅಂದರೆ ಖಾಸಗೀ ಜಾಗದಲ್ಲಿ ರಾಷ್ಟ್ರ ಧ್ವಜವನ್ನೇ ಹಾರಿಸಬೇಕಾದರೂ ಆ ಜಾಗದ ಒಡೆಯರ ಅನುಮತಿ ಅಗತ್ಯ ಎಂದ ಹಾಗಾಯಿತು. ಇದರಲ್ಲಿ ರಾಷ್ಟ್ರಧ್ವಜಕ್ಕೆ ಅಗೌರವ ಅಥವಾ ರಾಷ್ಟ್ರದ್ರೋಹದ ಪ್ರಶ್ನೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸಾರ್ವಜನಿಕ ಸ್ಥಳದಲ್ಲಿ ರಾಷ್ಟ್ರಧ್ವಜ ಹಾರಿಸುವ ಪ್ರಶ್ನೆಯ ಬಗ್ಗೆಯೂ ಹೇಳುವುದಾದರೆ ಸಾರ್ವಜನಿಕ ಸ್ಥಳ ಎಂದರೆ ಸರಕಾರದ ಸುಪರ್ದಿಯಲ್ಲಿರುವ ಆಸ್ತಿ. ಆದ್ದರಿಂದ ಇದಕ್ಕೂ ಸರಕಾರದ ಅನುಮತಿಯಂತೂ ಅಗತ್ಯ.

ಈಗ ಹುಬ್ಬಳ್ಳಿಯಲ್ಲಿ ಈದ್‌ಗಾ ಮೈದಾನದಲ್ಲೇ ರಾಷ್ಟ್ರಧ್ವಜ ಹಾರಿಸಬೇಕೆಂಬ ಒತ್ತಾಯ ಬಗ್ಗೆ ಪರಿಶೀಲಿಸೋಣ. ದೇಶದ ಇತರೆಡೆಯಂತೆ ಹುಬ್ಬಳ್ಳಿಯಲ್ಲೂ ರಾಷ್ಟ್ರಧ್ವಜ ಹಾರಿಸಲಾಗುತ್ತಿದೆ. ಹಾಗಿದ್ದರೂ ಈದ್‌ಗಾ ಮೈದಾನದಲ್ಲೂ ಹಾರಿಸಬೇಕೆಂಬ ಆಗ್ರಹ ಏಕೆ? ಇದೇ ರೀತಿ ದೇಶದ ಅಥವಾ ರಾಜ್ಯದ ಇತರ ಸಾರ್ವಜನಿಕ ಸ್ಥಳಗಳಲ್ಲಿ, ಉದಾಹರಣೆಗೆ ಬೆಂಗಳೂರಿನ ನ್ಯಾಶನಲ್ ಕಾಲೇಜು ಮೈದಾನದಲ್ಲೇಕೆ ಬಿ.ಜೆ.ಪಿ. ಜನವರಿ 26 ರಂದು ರಾಷ್ಟ್ರಧ್ವಜ ಹಾರಿಸುವ ಕಾರ್ಯಕ್ರಮ. ಇಟ್ಟುಕೊಂಡಿರಲಿಲ್ಲ? ಇದು ಕೇವಲ ಕುತರ್ಕದ ಪ್ರತಿಪ್ರಶ್ನೆಯಲ್ಲ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಾಗ ಬಿ.ಜೆ.ಪಿ.ಯ ಈ ಹೊಸ ದುರುಳತನ ನಮಗೆ ಅರಿವಾಗುತ್ತದೆ.

ಈದ್‌ಗಾ ಮೈದಾನದಲ್ಲೂ 1971 ರಲ್ಲೇ ವಿವಾದ ಆರಂಭವಾಗಿದ್ದರೂ 1991 ರ ವರೆಗೂ ಬಿ.ಜೆ.ಪಿಗೆ ರಾಷ್ಟ್ರಧ್ವಜ ಹಾರಿಸುವ ಯೋಚನೆ ಏಕೆ ಬರಲಿಲ್ಲ? ಏಕೆಂದರೆ 1990 ರಲ್ಲಿ ಅಡ್ವಾಣಿಯವರ 'ರಥಯಾತ್ರೆ'ಯ 'ಚುನಾವಣಾ ಯಶಸ್ಸಿ'ನಿಂದ ಸ್ಫೂರ್ತಿ ಪಡೆದ ಬಿ.ಜೆ.ಪಿ. ಅಧ್ಯಕ್ಷ ಜೋಷಿಯವರು 1991 ರಲ್ಲಿ ಕಾಶ್ಮೀರ ಯಾತ್ರೆ ಕೈಗೊಂಡರು. ಕಾಶ್ಮೀರದಲ್ಲಿ ಯಾರಿಗೂ ಈಗ ರಾಷ್ಟ್ರಧ್ವಜ ಹಾರಿಸುವ ಧೈರ್ಯವೇ ಉಳಿದಿಲ್ಲ, ಆದ್ದರಿಂದ ತಾನೇ ಶ್ರೀನಗರದಲ್ಲಿ ಆ ಧೈರ್ಯ ತೋರುತ್ತೇನೆ ಎಂದು ಹೊರಟಿದ್ದರು. ಕಾವಿಪಡೆಗಳ ಇತರ ಹಲವು ಸುಳ್ಳುಗಳಂತೆ ಕಾಶ್ಮೀರದಲ್ಲಿ ರಾಷ್ಟ್ರಧ್ವಜ ಹಾರಿಸುವುದಿಲ್ಲ ಎಂಬುದೂ ಇನ್ನೊಂದು ಸುಳ್ಳಾಗಿತ್ತು. 1991 ರಂದೇ ಶ್ರೀನಗರದಲ್ಲಿ ಸರಕಾರೀ ಧ್ವಜಾರೋಹಣ ನಡೆದ ನಂತರ ಅದೇ ಸರಕಾರದ ವಿಶೇಷ ಸಹಕಾರ ಹಾಗೂ ಬಿಗಿ ಭದ್ರತೆಯಲ್ಲಷ್ಟೇ ಜೋಷಿಯವರು ರಾಷ್ಟ್ರ ಧ್ವಜ ಹಾರಿಸುವ 'ಧೈರ್ಯ' ತೋರಲು ಸಾಧ್ಯವಾಯಿತು. ಹುಬ್ಬಳ್ಳಿಯಲ್ಲೂ ಅಂತಹ "ಅಪೂರ್ವ ಧೈರ್ಯ" ತೋರಬೇಕೆಂದೆನ್ನಿಸಿದಾಗ ಬಿ.ಜೆ.ಪಿ. ಮಂದಿಗೆ ಈ ವಿವಾದ ನೆನಪಾಯಿತು. ಈ ಹಿನ್ನೆಲೆಯಲ್ಲಿ ಬಿ.ಜೆ.ಪಿಯವರ 'ರಾಷ್ಟ್ರಭಕ್ತಿ'ಯ ಮುಖವಾಡದ ಹಿಂದೆ ಇರುವುದೇನು ಎಂಬುದು ಸ್ಪಷ್ಟವಾಗುವುದಿಲ್ಲವೇ? ಇತ್ತೀಚೆಗೆ ದೇಶದಲ್ಲಿ ಕೋಮುದಂಗೆಗಳು ನಡೆದಾಗಲೆಲ್ಲಾ ಹುಬ್ಬಳ್ಳಿ ಆ ಪಟ್ಟಿಯಲ್ಲಿರುವುದು, ಡಿಸೆಂಬರ್ 6ರ ನಂತರ ಗಲಭೆಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಸಂಭವಿಸಿದ 9 ಸಾವುಗಳಲ್ಲಿ 7 ಹುಬ್ಬಳ್ಳಿಯಲ್ಲಿಯೇ ನಡೆದಿದೆ ಎಂಬ ವಾಸ್ತವ ಪರಿಸ್ಥಿತಿಯನ್ನು ನೆನಪಿಸಿಕೊಂಡಾಗ ಬಿ.ಜೆ.ಪಿ.ಯ ಈ ಒತ್ತಾಯದ ಹಿಂದಿರುವ ಅಪ್ರಾಮಾಣಿಕತೆ, ದುರುಳತನ ಇನ್ನಷ್ಟು ಸ್ಪಷ್ಟವಾಗುತ್ತದೆ. ಇಂತಹುದೇ ಪ್ರಯತ್ನವನ್ನು ಇತ್ತೀಚೆಗೆ ದೆಹಲಿಯಲ್ಲಿ 'ಬಾಂಗ್ಲಾದೇಶೀ ವಲಸೆಗಾರರ' ಪ್ರಶ್ನೆ ಎತ್ತಿ ನಡೆಸಿತು ಎಂಬುದನ್ನೂ ನೆನಪಿಸಿಕೊಂಡಾಗ 'ರಾಷ್ಟ್ರಧ್ವಜ', 'ಅಕ್ರಮವಲಸೆ' ಇತ್ಯಾದಿಗಳೂ ಕೂಡಾ ಈ ಪಕ್ಷಕ್ಕೆ 'ಶ್ರೀರಾಮ'ನಂತೆ ನೆಪಮಾತ್ರ ಎಂಬುದು ಸ್ಪಷ್ಟವಾಗುತ್ತದೆ.

ಕ್ಯಾಪಿಟೇಶನ್ ಫೀ ಸಂಬಂಧವಾದ ಸುಪ್ರಿಂ ಕೋರ್ಟ್‌ನ ತೀರ್ಪು ಜನತೆಯ ಆಶಯಗಳಿಗೆ ಸ್ಪಂದಿಸಿದ ಅತೀ ಮಹತ್ವದ ತೀರ್ಪು ಎಸ್.ಎಫ್.ಐ. ಸ್ವಾಗತ

ಎಲ್ಲಾ ಖಾಸಗಿ ವ್ಯಕ್ತಿಗಳ ಕಾಲೇಜುಗಳಲ್ಲಿ ಆಡಳಿತ ಮಂಡಳಿಯ ಕೋಟಾದಲ್ಲಿ ತಮ್ಮ ಕೋಟದಲ್ಲಿ ತಮ್ಮ ಮನಸೋ ಇಚ್ಛೆ ಕ್ಯಾಪಿಟೇಶನ್ ವಸೂಲಿಯನ್ನು ಪ್ರತಿಬಂಧಿಸುವ ಮತ್ತು 14 ವರ್ಷದವರೆಗೆ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂದು ಸುಪ್ರಿಂ ಕೋರ್ಟ್ ನೀಡಿರುವ ತೀರ್ಪು ದೇಶದ ಚರಿತ್ರೆಯಲ್ಲಿಯೇ ದಾಖಲಾಗುವಂತಹ ಅತಿ ಮಹತ್ವದ ತೀರ್ಪು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್.ಎಫ್.ಐ) ರಾಜ್ಯ ಸಮಿತಿ ಸಂತೋಷದಿಂದ ಸ್ವಾಗತಿಸಿದೆ.

ಈ ತೀರ್ಪು ಕೇವಲ ಶಿಕ್ಷಣವನ್ನು ವ್ಯಾಪಾರದಿಂದ ಮುಕ್ತಗೊಳಿಸಲು ಸಹಾಯಕವಾಗುವುದು ಮಾತ್ರವಲ್ಲ ಸ್ವಾತಂತ್ರ್ಯ ಚಳುವಳಿಯಲ್ಲಿ ಸಾವಿರಾರು ಜನರ ತ್ಯಾಗ ಬಲಿದಾನಗಳ ಆಶಯವಾದ ಸರ್ವರಿಗೂ ಶಿಕ್ಷಣವನ್ನುವ ದಿಕ್ಕಿನತ್ತ ಮುನ್ನಡೆಯುತ್ತಿರುವ ಶಕ್ತಿಗಳಿಗೆ ನೈತಿಕ ಬಲವನ್ನು ತಂದಿಕೊಟ್ಟಿದೆ.

ಅರ್ಜಿ ಕರೆಯುವುದು, ಅಭ್ಯರ್ಥಿಗಳ ಆಯ್ಕೆ, ಶುಲ್ಕ ನಿಗದಿ, ಪ್ರವೇಶ ನೀತಿ ರೂಪಿಸುವುದು ಇತ್ಯಾದಿ ಅಧಿಕಾರಗಳನ್ನು ಸರಕಾರಕ್ಕೆ ಅಥವಾ ಸಂಬಂಧಪಟ್ಟ ಇಲಾಖೆಗೆ ವಹಿಸುವ ಮತ್ತು ಶೇಕಡ 50ರಷ್ಟು ಅಭ್ಯರ್ಥಿಗಳಿಗೆ ನಿಗದಿಗೊಳಿಸಿದ ಹೆಚ್ಚು ಶುಲ್ಕ ತೆಗೆದುಕೊಂಡು ತಮ್ಮ ಕಾಲೇಜುಗಳನ್ನು ನಡೆಸಲು ಖಾಸಗಿಯವರಿಗೆ ಸಹಾಯವಾಗುವಂತೆ ಅವಕಾಶ ನೀಡಿರುವ ನ್ಯಾಯಾಲಯದ ಈ ತೀರ್ಪು ಅತ್ಯಂತ ಸಮರ್ಥ ಮತ್ತು ಪ್ರಾಯೋಗಿಕವಾದ ತೀರ್ಪಾಗಿದೆ ಎಂದಿರುವ ಎಸ್.ಎಫ್.ಐ ಕರ್ನಾಟಕ ರಾಜ್ಯ ಸಮಿತಿ ಈ ತೀರ್ಪನ್ನು ಚಾಚೂ ತಪ್ಪದೆ ಜಾರಿಗೊಳಿಸಲು ಕರ್ನಾಟಕ ಸರಕಾರ ಕ್ರಮ ವಹಿಸಬೇಕೆಂದು ಆಗ್ರಹಿಸಿದೆ.

ಈ ತೀರ್ಪು ಶಿಕ್ಷಣವನ್ನು ವ್ಯಾಪಾರದಿಂದ ಮುಕ್ತಗೊಳಿಸಬೇಕೆಂದು, ಶಿಕ್ಷಣ [illegible] ಜನರ ಹಕ್ಕು ಎಂದು ನಿರಂತರವಾಗಿ ಹೋರಾಡುತ್ತಿದ್ದ ಎಸ್.ಎಫ್. ಐ. [illegible] ಸಂಘಟನೆಗಳಿಗೆ, ಶಕ್ತಿಗಳಿಗೆ ದೊರೆತ ವಿಜಯವಾಗಿದೆ ಎಂದು ರಾಜ್ಯ ಸಮಿತಿಯ ಪರವಾಗಿ ಹೇಳಿಕೆ ನೀಡಿರುವ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಹಾಗೂ ಕಾರ್ಯದರ್ಶಿ ಕಾಂತರಾಜ್ ನಾಯಕ್ ಅಭಿಪ್ರಾಯಪಟ್ಟಿದ್ದಾರೆ.

ಕೋಮು ಸಾಮರಸ್ಯ.... ಪುಟ 2 ರಿಂದ

ತಲೆ ತಗ್ಗಿಸುವಂತೆ ಮಾಡಿವೆ ಎಂದರು.

ಕಾರ್ಯಕ್ರಮದಲ್ಲಿ ಬಿ. ನಾರಾಯಣಪ್ಪ (ಜನತಾದಳ) ಬಾಬು ರೆಡ್ಡಿ (ಕಾಂಗ್ರೆಸ್) ವಿ. ವೆಂಕಟಸ್ವಾಮಿ ರೆಡ್ಡಿ [ಸಿಪಿಐ(ಎಂ)] ಅಬ್ದುಲ್ ಲತೀಫ್‌ಖಾನ್ ಸಿಪಿಐ(ಎಂ) ಉಪನ್ಯಾಸಕರಾದ ಬಿ. ಆರ್. ರಾಜು ಆರ್. ಅಶ್ವಥ್ ರಾಮ್ ಮತ್ತು ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಕೂಡ ಭಾಗವಹಿಸಿದ್ದರು.

ತಾಲೂಕು ಡಿ.ವೈ.ಎಫ್.ಐ ಅಧ್ಯಕ್ಷ ಮಹಮದ್ ಅಕ್ರಂ ಸ್ವಾಗತಿಸಿದರು. ತಾಲ್ಲೂಕು ಕಾರ್ಯದರ್ಶಿ ಭಾಸ್ಕರ ರೆಡ್ಡಿ ವಿಷಯ ಪ್ರಸ್ತಾವನೆ ಮಾಡಿ ಪ್ರಜಾ ನಾಟ್ಯ ಸಂಘಟನೆ ಬಗ್ಗೆ ವಿವರಣೆ ನೀಡಿದರು.

ಉಡುಪಿ : ರಾಷ್ಟ್ರೀಯ ಐಕ್ಯತಾ ಆಂದೋಲನಾ ಸಮಿತಿ ಕರೆಯಂತೆ ತಾ. 26-1-93 ರಂದು ಉಡುಪಿಯಲ್ಲಿ ಕೋಮು ಸೌಹಾರ್ದವನ್ನು ದೃಢವಾಗಿ ಬೆಂಬಲಿಸಲು "ಮಾನವ ಸರಪಳಿ" ಕಾರ್ಯಕ್ರಮವನ್ನು ಸಂಜೆ. 4-30ರಿಂದ 5 ರವರೆಗೆ ನಡೆಸಲಾಯಿತು.

ಎಡಪಕ್ಷಗಳು, ಜನತಾದಳ, ದಲಿತ ಸಂಘರ್ಷ ಸಮಿತಿಯ ಮುಂದಾಳುಗಳು ಭಾಗವಹಿಸಿದ ಕೋಮುಸೌಹಾರ್ದತೆವನ್ನು ಸಾರುವ ಈ ಮಾನವ ಸರಪಳಿಯಲ್ಲಿ ಅನೇಕ ಬುದ್ಧಿ ಜೀವಿಗಳು ಬರಹಗಾರರು ಭಾಗವಹಿಸಿ ಬೆಂಬಲಿಸಿದ್ದರಿಂದಾಗಿ ಕೋಮುವಾದದ ವಿರೋಧದ ಹೋರಾಟಕ್ಕೆ ಮತ್ತಷ್ಟು ದೃಢತೆ ಬಂದಂತಾಗಿದೆ ನೂರಾರು ಮಂದಿ ಕಾರ್ಮಿಕರು ಅವರ ಸಂಘಟನೆಗಳ ಗಾಯಕರ ನೇತೃತ್ವದಲ್ಲಿ "ಮಾನವ ಸರಪಳಿ" ಯಲ್ಲಿ ಭಾಗವಹಿಸಿ ವ್ಯಾಪಕವಾದ ರೀತಿಯಲ್ಲಿ ಕೋಮುವಾದದ ವಿರೋಧವಾದ ಕರಪತ್ರಗಳನ್ನು ಹಂಚಲಾಯಿತು.

ಬಾಬರಿ ಮಸೀದಿಯ ನಾಶದ ನಂತರ ಈ ದೇಶದಲ್ಲಿ ನಡೆದ ಕೋಮು ಗಲಭೆ, ಹಿಂಸಾಚಾರ, ಕೊಳ್ಳೆಇಡುವಿಕೆಯಿಂದ ಸ್ವಾತಂತ್ರ್ಯಾನಂತರದಲ್ಲಿ ಈ ದೇಶದಲ್ಲಿ ಎಂದೂ ಕಾಣದಿದ್ದಂತಹ ಅಪಾಯಕಾರಿ ಬೆಳವಣಿಗೆಗಳಿಗೆ ಹಿಂದೂ ಮೂಲಭೂತವಾದಿಗಳು ಮತ್ತು ಮುಸ್ಲಿಂ ಮತಾಂಧರೇ ಕಾರಣರಾಗಿದ್ದಾರೆ. ಇವರನ್ನು ವಿರೋಧಿಸಿ ಕೋಮು ಸೌಹಾರ್ದತೆಯನ್ನು ಕಾಪಾಡಿ ದೇಶದ ಐಕ್ಯತೆ ಸಮಗ್ರತೆಗಳನ್ನು ರಕ್ಷಿಸಲು ದೇಶಮಟ್ಟದಲ್ಲಿ ವ್ಯಾಪಕವಾದ ಚಳುವಳಿ ನಡೆಸಬೇಕಾಗಿದೆ" ಎಂದು ಉಡುಪಿಯ ನಗರ ಸಭೆಯ ಬಳಿಯಲ್ಲಿ ಜರುಗಿಸಲಾದ ಸಾರ್ವಜನಿಕ ಸಭೆಯನ್ನುದ್ದೇಶಿ ಮಾತನಾಡಿದ. ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಮುಂದಾಳು. ಶ್ರೀ ವಿ.ಜೆ.ಕೆ. ನಾಯರ್, ಸಿಪಿಐದ ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಶ್ರೀ. ಬಿ.ಕೆ. ಕೃಷ್ಣಪ್ಪ, ಜನತಾದಳದ ಸಂಘಟನಾ ಕಾರ್ಯದರ್ಶಿ. ಟಿ.ಎಸ್. ಸುಲೆಮಾನ್. ದಲಿತ ಸಂಘರ್ಷ ಸಮಿತಿಯ ಸ್ಥಳೀಯ ಮುಂದಾಳು ಶ್ರೀ ಬಾಬು ಬಂಗೇರ, ಎಸ್.ಎಫ್.ಐ. ಉಡುಪಿ ಮುಂದಾಳು ಶ್ರೀ ಸಂತೋಷ ಮೊದಲಾದವರು ತಿಳಿಸಿದರು. ಕೋಮುವಾದ ವಿರೋಧಿ ಹೋರಾಟಕ್ಕೆದೃಢವಾದ ಬೆಂಬಲ ಸಾರಿದರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿಪಿಐ ನ ಮುಂದಾಳು ಶ್ರೀ ಎಮ್. ಆರ್. ಆಚಾರ್‌ರವರು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಮೋನಪ್ಪಸಾಲಿಯಾನ್ವರವರು ಸ್ವಾಗತಿಸಿದರು. ಕೊನೆಯಲ್ಲಿ ಡೇವಿಡ್ ಎ. ಕರ್ಕಡ ವಂದನಾರ್ಪಣೆ ಸಲ್ಲಿಸಿದರು.

ವಿಜಾಪೂರ : ರಾಷ್ಟ್ರೀಯ ಏಕತಾ ಆಂದೋಲನ, ವಿಜಾಪುರ ಜಿಲ್ಲಾ ಸಮಿತಿಯಿಂದ ಸಂಜೆ 4 ಗಂಟೆ ಗಾಂಧಿ ಚೌಕದಲ್ಲಿ ಕೋಮು ಸೌಹಾರ್ದತಾ ಮಾನವ ಸರಪಳಿ ಏರ್ಪಡಿಸಲಾಗಿತ್ತು. ಬಾಬಾ ಸಾಹೇಬ ಬಾಗೇವಾಡಿ, ಮಾಜಿ ಜಿಲ್ಲಾ ಸ್ವಾತಂತ್ರ್ಯ ಯೋಧರ ಸಂಘದ ಅಧ್ಯಕ್ಷರು ಇವರು ಉದ್ಘಾಟನೆ ಮಾಡಿ ದೇಶದಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡಬೇಕೆಂದು ಸಾರ್ವಜನಿಕರಲ್ಲಿ ಕರೆ ಕೊಟ್ಟರು. ಶಿವಾನಂದ ಪಾಟೀಲ ನಗರ ಸಭೆ ಅಧ್ಯಕ್ಷರು ಜಾತಿವಾದ ಬಿಟ್ಟು ಎಲ್ಲರೂ ಕೋಮು ಸೌಹಾರ್ದತೆ ಕಾಪಾಡಿಕೊಳ್ಳಬೇಕೆಂದು ವಿನಂತಿಸಿದರು. ಕಾರ್ಯಕ್ರಮದಲ್ಲಿ ಸಿಪಿಐ(ಎಂ)ನ ಹಾಗೂ ಸ್ವಾತಂತ್ರ್ಯ ಯೋಧರಾದ ಎಸ್.ಕೆ. ಉಪಾಧ್ಯಾಯ, ಸಿಪಿಐನ ಮುಖಂಡರಾದ ಪ್ರಕಾಶ ಹಿಟ್ನಳ್ಳಿ, ಎಲ್.ಕೆ. ಚಂಚಲಕರ, ಆರ್.ಡಿ.ಹಳಿಂಗಳಿ, ನಿವೃತ್ತ ಪ್ರಾಚಾರ್ಯರಾದ ವಿ.ಎಸ್.ತೊರಿಗಲ್, ಜನವಾದಿ ಮಹಿಳಾ ಸಂಘಟನೆಯ ಸಂಗಮ್ಮ ಹಿರೇಮಠ ಲಕ್ಷ್ಮಿದೇಸಾಯಿ, ಟಾಂಗಾ ಅಸೋಸಿಯೇಶನ್‌ನ ಅಧ್ಯಕ್ಷರಾದ ಮಹಿಬೂಬಪಾಶಾ ಇನಾಮದಾರ ಮತ್ತು ರೈತ ಮುಖಂಡರು ಹಾಗೂ ಸಿಪಿಐ(ಎಂ)ನ ನಾಯಕರಾದ ಭೀಮಸಿ ಕಲಾದಗಿಯವರು ಮಾತನಾಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಸದಾನಂದ ಮೋದಿಯವರು ವಂದಿಸಿದರು.

ಹೊಸಪೇಟೆ : ನಗರದಲ್ಲಿ ದಿನಾಂಕ 26ರಂದು ಗಣರಾಜ್ಯೋತ್ಸವದಂದು ರಾಷ್ಟ್ರೀಯ ಏಕತಾ ಆಂದೋಲನ ಸಮಿತಿಯ ಕರೆಯ ಮೇರೆಗೆ ಗಾಂಧಿ ಪ್ರತಿಮೆಯಿಂದ-ಚರ್ಚ್-ಮಸೀದಿ-ಆಂಜನೇಯ ಗುಡಿ ಮುಂಭಾಗ ಸುತ್ತುವರಿದಂತೆ 150 ಜನರಿಂದ ಮಾನವ ಸರಪಳಿ ರಚಿಸಲಾಯಿತು.

ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಎಸ್.ವೈ.ಗುರುಶಾಂತ್, ಜನತಾದಳದ ಗುಂಡಿಭೀಮಪ್ಪ, ಮಾಜಿ ಶಾಸಕ ಭೀಮನೇನಿ ಕೊಂಡಯ್ಯ, ಸತ್ತಾರ ಸಾಬ್, ಸಜಪದ ಪಾಟೀಲ್, ಎಸ್‌ಎಫ್‌ಐನ ಎಲ್.ಮಂಜುನಾಥ್, ಡಿವೈಎಫ್‌ಐನ ಜಂಬಯ್ಯ ನಾಯ್ಕ್, ಅಧಿಕಾರಿಗಳಾದ ಅಸಿಸ್ಟೆಂಟ್ ಕಮಿಷನರ್ ಎಸ್.ವೈ. ಬೀರಾದಾರ್, ತಹಸೀಲ್ದಾರ್ ಕೆ.ಎನ್.ಲಿಂಗಪ್ಪ, ಶಾಸಕ ರತನ್ ಸಿಂಗ್ ಮುಂತಾದವರು ಮಾತನಾಡಿದರು.

ಗಡಿವಾರಪಲ್ಲಿ(ಚಿಂತಾಮಣಿ) : ದೇಶ ಅತ್ಯಂತ ಸಂಕಷ್ಟದ ಆರ್ಥಿಕ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ ಬಿಜೆಪಿ ದೆಹಲಿಯ ದರ್ಬಾರಿನ ಆಸೆಯಿಂದ ರಾಮನ ಹೆಸರಿನಲ್ಲಿ ರಾಜಕೀಯ ಮಾಡುತ್ತಾ ದೇಶದ ಐಕ್ಯತೆಗೆ ಗಂಡಾಂತರವನ್ನು ತಂದೊಡ್ಡಿದೆ ಎಂದು ಸಿಪಿಐ(ಎಂ)ನ ಕೋಲಾರ ಜಿಲ್ಲಾ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿಯವರು ಮುಂದುವರಿಯುತ್ತಾ ಈ ಬಗ್ಗೆ ಜನತೆ ಎಚ್ಚರಿಕೆಯಿಂದ ಇದ್ದು ಐಕ್ಯತೆಯನ್ನು ಕಾಪಾಡಬೇಕೆಂದರು. ಅವರು 29-1-93 ರಂದು ಚಿಂತಾಮಣಿ ತಾಲೂಕಿನ ಗಡಿಗವಾರಪಲ್ಲಿ ಗ್ರಾಮದಲ್ಲಿ ಮಹಾತ್ಮಗಾಂಧಿ ಹುತಾತ್ಮದಿನಾಚರಣೆಯ ಅಂಗವಾಗಿ ಸಿಪಿಐ(ಎಂ) ಘಟಕ ಏರ್ಪಡಿಸಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.


ಇದೇ ಸಭೆಯಲ್ಲಿ ಮಾತನಾಡಿದ ತಾಲೂಕು ಜನತಾದಳ ಅಧ್ಯಕ್ಷರಾದ ಪಿ. ಬಯ್ಯಣ್ಣನವರು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಅಧಿಕಾರಕ್ಕೆ ಬರಲು ಯಾರದ್ದೂ ವಿರೋಧವಿಲ್ಲ, ಆದರೆ ಬಿಜೆಪಿ "ಧರ್ಮ" ದೇವರ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವುದು ಶೀರಾ ಖಂಡನಾರ್ಹವೆಂದರು.

ಗಡಿಗವಾರಪಲ್ಲಿಯಲ್ಲಿ ಈ ಪ್ರದೇಶದಲ್ಲಿ ಹೆಚ್ಚು ಮುಸ್ಲಿಂ ಜನರಿರುವ ಹಳ್ಳಿಯಾದರೂ ಊರಿನಲ್ಲಿ ಧಾರ್ಮಿಕ ಹಬ್ಬ ಆಚರಣೆಗಳು ಬಂದಾಗ ಎಲ್ಲಾ ಆಚರಣೆಗಳನ್ನು ಹಿಂದು ಮುಸ್ಲಿಂಮರು ಒಂದಾಗಿ ಆಚರಿಸುತ್ತಾ ಬಂದಿದ್ದಾರೆ. ಇದೇ ರೀತಿಯಲ್ಲಿ ಕೋಮು ಸಾಮರಸ್ಯವನ್ನು ಕಾಪಾಡಿಕೊಂಡು ಸುತ್ತಮುತ್ತಲಿನ ಗ್ರಾಮಗಳಿಗೆ ಆದರ್ಶವಾಗಬೇಕೆಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದ ಜಿ.ಸಿ. ಬಯ್ಯಾರೆಡ್ಡಿ ಎಸ್‌ಎಫ್‌ಐ ರಾಜ್ಯಾಧ್ಯಕ್ಷರು ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಜಿ.ಎನ್. ಕೃಷ್ಣಪ್ಪ ವಹಿಸಿದ್ದರು. ಕಾಂ.ಶಿಪ್ಪಾರೆಡ್ಡಿ ಗೆಳೆಯರು ಕ್ರಾಂತಿ ಗೀತೆಯನ್ನು ಹಾಡಿದರು. ಕಾಂ.ನರಸಿಂಹರವರು ವಂದಿಸಿವರು. ಬಹಿರಂಗ ಸಭೆ ಮುಂಚೆ ಸಭೆಗೆ ಆಗಮಿಸಿದ್ದ ಮುಖಂಡರಿಗೆ ಅದ್ದೂರಿ ಸ್ವಾಗತ ಮೆರವಣಿಗೆ ನಡೆಸಲಾಯಿತು.

ಬ್ರಿಟಿಷ್ ಬಂಡವಾಳಶಾಹಿ ಪಡೆಗಳೊಂದಿಗೆ ಮೇಜರ್‌ರ ಭೇಟಿ ಏಕೆ?

ಶತಮಾನಗಳ ಕಾಲ ಭಾರತವನ್ನು ತನ್ನ ವಸಾಹತು ಮಾಡಿಕೊಂಡು ಶೋಷಣೆ ಮಾಡಿದ ಬ್ರಿಟನ್ನಿನ ಇಂದಿನ ಪ್ರಧಾನಿ ಜಾನ್ ಮೇಜರ್ ಭಾರತಕ್ಕೆಭೇಟಿ ನೀಡಿದ್ದರು. ಹಲವು ಒಪ್ಪಂದಗಳಿಗೂ ಸಹಿ ಹಾಕಿದ ಮೇಜರ್ ಭಾರತಕ್ಕೆ ಒಂದು ಕಿವಿ ಮಾತನ್ನು ಹೇಳಿದರು. ಆರ್ಥಿಕವನ್ನೂ ಇನ್ನೂ ಹೆಚ್ಚು ಉದಾರೀಕರಿಸಿ, ಅದರಿಂದ ಭಾರತಕ್ಕೆ ಹೆಚ್ಚಿನ ಲಾಭವಿದೆ. ಇದು ಮೇಜರ್‌ರ ಸಲಹೆ. ಮೇಜರ್‌ರ ಈ ಸಲಹೆ ಅರ್ಥವಾಗುವಂತಹದ್ದೇ. ನಮ್ಮ ಆರ್ಥಿಕವನ್ನು ಉದಾರೀಕರಿಸಿದಷ್ಟು ಬ್ರಿಟನ್‌ಗೆ ಹೆಚ್ಚಿನ ಲಾಭ. ನವೀನ ಮಾದರಿಯಲ್ಲಿ ಭಾರತವನ್ನು ಮತ್ತೆ ತನ್ನ ವಸಾಹತುವಾಗಿಸಿಕೊಳ್ಳುವ ಪ್ರಯತ್ನ ಈ ಮೇಜರನದು. ಇದು ಯಾವ ಮೈನರ್‌ನಿಗೂ ಗೋತ್ತಾಗುವಂತಹದ್ದಲ್ಲವೇ?



ನರಸಿಂಹರಾವ್ ಸರಕಾರದ 20ನೇ ತಿಂಗಳಲ್ಲಿ

'ದೇಶ ಅಡೆತಡೆಗಳನ್ನು ದಾಟುತ್ತದೆ' ನಮ್ಮ ಪ್ರಧಾನಿ ನುಡಿ

ದೇಶ ಎಲ್ಲ ಅಡೆತಡೆಗಳನ್ನೂ ದಾಟಿ ಮುಂದುವರೆಯುತ್ತದೆ ಎಂದು ನಮ್ಮ ಪ್ರಧಾನಿ ನರಸಿಂಹರಾಯರು ಹೇಳಿದ್ದಾರೆ. ಉದಾರೀಕರಣ ಜೊತೆಗೆ ಕೋಮುವಾದಿಗಳ ಬಗೆಗೆ ಸಹನೆಯ ಧೋರಣೆ ತೋರಿ ದೇಶವನ್ನು ದುರಂತದ ಅಂಚಿಗೆ ಕೊಂಡೊಯ್ಯುತ್ತಿರುವ ರಾವ್ ಮಹಾಶಯರಿಗೆ ದೇಶದ ಆರ್ಥಿಕ ನೋವುಗಳ ಕಲ್ಪನೆ ಖಂಡಿತವಾಗಿಯೂ ಇಲ್ಲ. ಮತ್ತೊಮ್ಮೆ 'ಎಲ್ಲ ಸಮಸ್ಯೆಗಳಿಗೂ ನಾಲ್ಕು ವರ್ಷಗಳ ಕಾಲ ವಿರಾಮ ಹಾಕಿ ' ದೇಶದ ಪ್ರಗತಿಗಾಗಿ ಇದು ಅವಶ್ಯ ಎಂದಿರುವ ಈತ ತಾನು ಉದಾರೀಕರಣ ಮುಂದುವರೆಸದೇ ದೇಶದ ಜನತೆಯ ಆರ್ಥಿಕ ತೊಂದರೆಗಳಿಗೆ ತಡೆ ಹಾಕುವ ಮಾತನ್ನಂತೂ ಆಡಿಲ್ಲ.

ಅಂದರೆ 'ನೀವೆಲ್ಲರೂ ಆರ್ಥಿಕ ಸುಧಾರಣೆಗಳಿಗೆ ಯಾವುದೇ ಪ್ರತಿರೋಧ ಒಡ್ಡಬೇಡಿ. ನಾನು ಐ.ಎಂ.ಎಫ್-ವಿಶ್ವಬ್ಯಾಂಕ್‌ನ ನಿರ್ದೇಶನದಂತೆ ಉದಾರೀಕರಣ ನಡೆಸಿ ಜನರ ನೋವು ಹೆಚ್ಚಿಸುತ್ತನೆ' ಎಂಬ ಅರ್ಥವೆ ಪ್ರಧಾನ ಮಂತ್ರಿಗಳ ಈ ಮಾತಿನಲ್ಲಿ?

'ದೇಶದ ಅರ್ಥವ್ಯವಸ್ಥೆ ಪ್ರಗತಿ ತೋರುತ್ತದೆ' ಸರ್ಕಾರದ ತುತ್ತೂರಿ

ಬಜೆಟ್ ಅಧಿವೇಶನ ಹತ್ತಿರ ಬರುತ್ತಿರುವಂತೆ ಸರ್ಕಾರ ಅರ್ಥವ್ಯವಸ್ಥೆ ಪ್ರಗತಿ ತೋರುತ್ತಿದೆ ಎಂಬ ಭ್ರಮೆ ಹುಟ್ಟಿಸುವ ಪ್ರಯತ್ನ ಮಾಡುತ್ತಿದೆ. ಸರ್ಕಾರದ ಪ್ರಕಾರ ಹಣದುಬ್ಬರ ಸತತವಾಗಿ ಇಳಿಯುತ್ತಿದೆ. ಹಾಗೇ 1992-93 ರ ಬಗ್ಗೆ ಬಹಳ ಬಣ್ಣದ ಮಾತುಗಳನ್ನು ಆಡಲಾಗುತ್ತಿದೆ. ದೇಶದ ಆಂತರಿಕ ಉತ್ಪಾದನೆ ಶೇ 4.2 ರಷ್ಟು ಬೆಳವಣಿಗೆಯಾಗಲಿದೆಯಂತೆ. ಉತ್ಪಾದನೆಯ ಮಟ್ಟ 221168 ಕೋಟಿ ರೂಪಾಯಿಗಳಿಗೇರಲಿದೆಯಂತೆ. ಈ ಎಲ್ಲ ಸರ್ಕಾರದ ಹೇಳಿಕೆಗಳನ್ನು ಓದಿ ಮಾರುಕಟ್ಟೆಗೆ ಹೋದ ಜನಸಾಮಾನ್ಯ ಬೆಲೆಗಳ ಇಳಿತ ಕಾಣಬಲ್ಲನೆ? ಬೆಲೆಗಳು ಮಾತ್ರ ಸತತ ಏರುತ್ತಲೇ ಇವೆ.

ರೈಲ್ವೆ ಪ್ರಯಾಣದರವನ್ನು ಸಹ ಹೆಚ್ಚಿಸುವ ಮಾತು ಆಗಲೇ ಕೇಳಿ ಬರುತ್ತಿದೆ. ಜನರ ಆರ್ಥಿಕ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿರುವಾಗ ದೇಶದ ಉತ್ಪಾದನಾ ಗತಿ ಹೆಚ್ಚಲಿದೆ. ಹಣದುಬ್ಬರ ಕಡಿಮೆಯಾಗುತ್ತಿದೆ ಎಂಬೆಲ್ಲಾ ಹೇಳಿಕೆಗಳ ಅರ್ಥವೇನು!!

ಆದ್ಯತೆಯ ವಲಯಕ್ಕೆ ಬೀಳಲಿರುವ ಕೊಡಲಿಯೇಟು

ಖಾಸಗಿ ಬ್ಯಾಂಕುಗಳ ಸ್ಥಾಪನೆಗೆ ಮಾರ್ಗದರ್ಶನಗಳು ಹೊರಬಂದ ಕೂಡಲೇ ಆದ್ಯತೆಯ ವಲಯಕ್ಕೆ ಕೊಡಲಿಯೇಟು ಬೀಳಲಿರುವ ಸೂಚನೆಗಳು ದೊರೆತಿವೆ. ಭಾರತೀಯ ರಿಸರ್ವ್‌ಬ್ಯಾಂಕ್‌ನ ಗವರ್ನರರ ಪ್ರಕಾರ 'ಖಾಸಗಿ' ವಲಯದ ಬ್ಯಾಂಕುಗಳೂ ಆದ್ಯತೆಯ ವಲಯಕ್ಕೆ ಸಾಲ ನೀಡುವ ಕರ್ತವ್ಯದಿಂದ ವಿಮುಖರಾಗುವಂತಿಲ್ಲ. ಆದರೆ ಆದ್ಯತೆಯ ವಲಯಕ್ಕೆ ನೀಡಬೇಕಾದ ಸಾಲದ ಪ್ರಮಾಣದಲ್ಲಿ ಕಡಿತ ಮಾಡಬಹುದು.

ನಮ್ಮ ದೇಶದ ಕೃಷಿ, ಸಣ್ಣ ಕೈಗಾರಿಕೆ ಸಣ್ಣ ವ್ಯಾಪಾರ, ಗುಡಿಕೈಗಾರಿಕೆಗಳು ಇವೆಲ್ಲ ಆದ್ಯತೆಯ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ. ಹಣಕಾಸು ನೆರವು ನೀಡಿಕೆಯ ವಿಷಯದಲ್ಲಿ ಈವರೆಗೆ ಈ ಕ್ಷೇತ್ರಗಳಿಗೆ ಆದ್ಯತೆಯಿದ್ದು ಬ್ಯಾಂಕುಗಳ ಒಟ್ಟು ಸಾಲದ ಶೇ. 40 ರಷ್ಟು ಆದ್ಯತೆಯ ಕ್ಷೇತ್ರಗಳಿಗೆ ಹೋಗಬೇಕೆಂಬುದು ಸರ್ಕಾರಿ ನಿರ್ದೇಶನವಾಗಿತ್ತು. ಹಿಂದುಳಿದಿರುವ ಈ ಕ್ಷೇತ್ರಗಳು ಹಣಕಾಸಿನ ನೆರವಿನ ಕಡಿತದಿಂದ ನರಳಲಿವೆ.

ಸತ್ಯದ ಕತ್ತುಹಿಸಕಲು ಸಿಬಿಐ ಅಧಿಕಾರಿಗಳ ಮೇಲೆ ದಬ್ಬಾಳಿಕೆ

ಶೇರು ಹಗರಣ

ಶೇರು ಹಗರಣಗಳ ತನಿಖೆ ನಡೆಸುತ್ತಿದ್ದ ಮಾಧವನ್ ಅವಧಿ ಮುಗಿಯುವ ಮೊದಲೇ ನಿವೃತ್ತಿ ಹೊಂದಿದ ವಿಷಯ ನೆನಪಿದೆಯೇ? ಸರ್ಕಾರ ಅವರು ವೈಯುಕ್ತಿಕ ಕಾರಣಗಳ ನಿಮಿತ್ತ ಹಾಗೆ ಮಾಡುತ್ತಿದ್ದಾರೆ ಎಂಬ ಹೇಳಿಕೆ ನೀಡಿತ್ತು. ಸರ್ಕಾರದ ಸುಳ್ಳು ಈಗ ಬಯಲಾಗಿದೆ.

ಜಂಟಿ ಪಾರ್ಲಿಮೆಂಟರಿ ಸಮಿತಿಯ ಮುಂದೆ ಹೇಳಿಕೆ ನೀಡಿದ ಮಾಧವನ್ ತಮ್ಮ ನಿರ್ಧಾರಕ್ಕೆ ಕಾರಣಗಳನ್ನು ಹೇಳಿದ್ದಾರೆ. ಸಂಸತ್ ಸದಸ್ಯ ಶ್ರೀ ಜಾರ್ಜ್‌ಫರ್ನಾಂಡಿಸ್‌ರ ಬಳಿ ಹಗರಣದ ಬಗೆಗೆ ದಾಖಲೆಗಳಿರುವುದು ತಿಳಿದುಬಂದದ್ದರಿಂದ ಅವರ ಜೊತೆ ಚರ್ಚಿಸಲು ಅನುಮತಿಯನ್ನು ಮಾಧವನ್‌ರವರು ಸಿಬಿಐ ನಿರ್ದೇಶಕರಾದ ಎಸ್.ಕೆ. ದತ್ತಾ ಅವರನ್ನು ಲಿಖಿತವಾಗಿ ಕೇಳಿದ್ದರು. ಆದರೆ ದತ್ತಾ ಉತ್ತರಿಸಲೇ ಇಲ್ಲ. ಇದರ ನಂತರ ಹಣಕಾಸು ಮಂತ್ರಿಗಳಾದ ಮನಮೋಹನಸಿಂಗರನ್ನೂ ಸಿಬಿಐ ನಿರ್ದೇಶಕರ ಜೊತೆಗೆ ಬೇಟಿ ಮಾಡಿದಾಗ ಮಾಧವನ್ 'ಫರ್ನಾಂಡಿಸರಿಂದ ಹಣಕಾಸು ಮಂತ್ರಾಲಯ 'ವಿವರಗಳನ್ನು ಪಡೆದುಕೊಳ್ಳಬೇಕೆಂದು ಸಲಹೆ ಮಾಡಿದರು."

ಇದರಿಂದ ಶ್ರೀ ದತ್ತಾ ಮಾಧವನ್ ಮೇಲೆ ಸಿಡಿಮಿಡಿ ಗೊಂಡರಂತೆ.

ಎರಡನೇ ಭಿನ್ನಾಭಿಪ್ರಾಯ ಹರ್ಷದ್ ಮೆಹ್ತ ಮತ್ತು ಭೂಪೇನ್ ದಲಾಲ್‌ರ ವಿದೇಶಗಳಲ್ಲಿನ ಬ್ಯಾಂಕ್ ಖಾತೆಗಳ ಬಗ್ಗೆ ಮೂಡಿತು. ಮಾಧವನ್ ಈ ವಿಷಯವನ್ನು ಸಿಬಿಐ ತನಿಖೆ ಮಾಡಬೇಕು ಎಂಬ ಅಭಿಪ್ರಾಯ ಹೊಂದಿದ್ದರು. ಆದರೆ ದತ್ತಾ ಇದಕ್ಕೆ ವಿರುದ್ಧವಾಗಿದ್ದರು. ಎನ್ ಪೋರ್ಸ್ ಡೈರೆಕ್ಟೋರೇಟ್ ಈ ತನಿಖೆ ನಡೆಸಬೇಕು ಎಂಬುದು ಅವರ ನಿಲುವು. ಆದರೆ ಇಂತಹ ಸಂದರ್ಭಗಳಲ್ಲಿ ಲಂಚ ರುಷುವತ್ತುಗಳು ಪಾತ್ರವಹಿಸುತ್ತವೆ ಮತ್ತು ವಿದೇಶಿ ಬ್ಯಾಂಕುಗಳು ವಿವರಗಳನ್ನು ನೀಡುವುದಿಲ್ಲ. ಯಾಕೆಂದರೆ ವಿದೇಶೀ ವಿನಿಮಯ ನಿಯಮಗಳ ಉಲ್ಲಂಘನೆ ವಿದೇಶಗಳ ದೃಷ್ಟಿಯಲ್ಲಿ ಅಪರಾಧವಲ್ಲ. ಆದ್ದರಿಂದ ಸಿಬಿಐ ಈ ತನಿಖೆ ಕೈಗೆತ್ತಿಕೊಳ್ಳಬೇಕು ಎಂಬ ದೃಢ ನಿಲುವನ್ನು ಮಾಧವನ್ ಹೊಂದಿದ್ದರು.

ಸತ್ಯ ಹೊರಬರದಂತೆ ತಡೆಯುವಲ್ಲಿ ಸರ್ಕಾರ ಎಂತಹ ಪಾತ್ರ ವಹಿಸುತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗುವುದಿಲ್ಲವೇ?


ಇನ್ನೊಬ್ಬ ಜಂಟಿ ನಿರ್ದೇಶಕರು ಮನೆಗೆ

ಶೇರು ಹಗರಣದ ಹಲವು ಮೊಕದ್ದಮೆಗಳನ್ನು ತನಿಖೆ ಮಾಡುತ್ತಿದ್ದ ಜಂಟಿ ನಿರ್ದೇಶಕ ಡಿ.ಎಸ್. ಎಸ್. ಶ್ರೀವಾಸ್ತವ ಎಂಬ ಅಧಿಕಾರಿಯನ್ನು ಒತ್ತಾಯದ ರಜೆಯ ಮೇಲೆ ಮನೆಗೆ ಕಳುಹಿಸಲಾಗಿದೆ. ಪ್ರಾಮಾಣಿಕವಾಗಿ ತನಿಖೆ ಮಾಡುತ್ತಿದ್ದ ಇವರಿಂದ ಎಲ್ಲಾ ಮೊಕದ್ದಮೆಗಳನ್ನು ಸಿಬಿಐ ಕಿತ್ತುಕೊಂಡಿತು. ಪ್ರಾಮಾಣಿಕರಾದ ಈ ಅಧಿಕಾರಿ ಪ್ರತಿಭಟನೆತೋರಲು ರಜೆಯ ಮೇಲೆ ಹೋಗಬೇಕಾಯಿತು.

ಹರ್ಷದ್ ಮೆಹ್ತನ ಆಸ್ತಿ 1515 ಕೋಟಿ ರೂಪಾಯಿಗಳು

ಹರ್ಷದ್ ಮೆಹ್ತ ಗುಂಪಿನ ಕಂಪನಿಗಳ ಆಸ್ತಿಯ ಮೊತ್ತವೆಷ್ಟು ಗೊತ್ತೆ? 1515 ಕೋಟಿ ರೂಪಾಯಿಗಳು. ಇದೂ ಸಹ ಸರಿಯಾದ ಅಂದಾಜಲ್ಲವಂತೆ. ವಾರ್ಷಿಕ ರೂ 4 800 ಕ್ಕೂ ಕಡಿಮೆ ವರಮಾನವಿರುವ ಹಲವು ಕೋಟಿ ಜನರಿರುವ ನಮ್ಮ ದೇಶದಲ್ಲಿ ಹರ್ಷದ ಮೆಹ್ತ (ಚೋರ) ದೊರೆಯಲ್ಲವೆ? ಬಡವ ಬಂಡವಾಳಿಗರು ಇವನ್ನೇ ಪ್ರತಿಭೆಗೆ ಪುರಾವೆ ಎಂದು ತೋಗಳುತ್ತಾರೆನೊ ಅಲ್ಲವೇ?

ಅಯೋಧ್ಯೆಯಲ್ಲಿ ಡಿಸೆಂಬರ್ 6ರಂದು ಶ್ರೀರಾಮನ ಹೆಸರಿನಲ್ಲಿ ನಡೆದ ಗೂಂಡಾಗಿರಿ ಸೂರತ್‌ನ ಮಹಿಳೆಯರಿಗೆ ಡಿಸೆಂಬರ್ 8ರ ರಾತ್ರಿಯನ್ನು ಎಂದೂ ಮರೆಯಲಾಗದ ಅತ್ಯಂತ ಬರ್ಬರ, ಭಯಾನಕ ರಾತ್ರಿಯಾಗಿ ಮಾಡಿತು. ಸೂರತ್ ನಗರ ಕಾರ್ಪೋರೇಶನ್ ಬಿಜೆಪಿ ಕೈಯಲ್ಲಿದೆ. ಆದರೂ ಲಾಲ್ ಕೃಷ್ಣ ಅಡ್ವಾಣಿಯವರು ಬಿಜೆಪಿ ಅಧಿಕಾರಕ್ಕೆ ಬಂದರ ಕೋಮು ಗಲಭೆಗಳಿಗೆ ಅವಕಾಶವೇ ಇರುವುದಿಲ್ಲ ಎಂದರು. ಇದಾದ ಒಂದು ತಿಂಗಳ ನಂತರ ಕೂಡಾ ಅಂದರೆ ಅವರ "ಕೋಮು ಸಾಮರಸ್ಯ"ದ ಅರ್ಥವೂ ಅವರ "ಜಾತ್ಯಾತೀತತೆ" ಎಂಬ ಪದದ ಅರ್ಥದಂತೆ ತದ್ವಿರುದ್ಧವಾದದ್ದೇ ಇರಬಹುದೇ? ಸೂರತ್‌ನಲ್ಲಿ ಡಿಸೆಂಬರ್ 8-10 ರ ನಡುವ ಸುಮಾರು 200 ಜನರನ್ನು ಬಲಿತೆಗೆದುಕೊಂಡ ಘಟನೆಗಳ ಈ ಒಂದು ಇಣುಕು ನೋಟದ ನಂತಹ ನಿಮಗೆ ಖಂಡಿತಾ ಹಾಗೆಯೇ ಅನಿಸುತ್ತದೆ.



ಸೂರತ್ : "ಮಾನಕ್ಕಾಗಿ ಪ್ರಾಣಕ್ಕಾಗಿ ಮಹಿಳೆಯರ ಚೀರಾಟ ಇನ್ನೂ ಕಿವಿಗಳಲ್ಲಿ ಮೊರೆಯುತ್ತಿದೆ"

● 15 ದಿನದ ಹಿಂದೆ ಆಕೆಗೆ ಮದುವೆಯಾಗಿತ್ತು. ಗಂಡ ಒಬ್ಬ ಧಾರ್ಮಿಕ ಮುಖಂಡ. ವೈವಾಹಿಕ ಜೀವನದ ನಿರೀಕ್ಷೆಗಳಿಂದ ಆಕೆ ದೂರದ ಅಸ್ಸಾಂನಿಂದ ಸೂರತ್‌ಗೆ ಬಂದಿದ್ದಳು. ಆದರೆ ಸೂರತ್ ಆಕೆಗೆ ನೀಡಿದ್ದೇ ಬೇರೆ. ಕಣ್ಣೆದುರೇ ಗಂಡನನ್ನು ಕೊಚ್ಚಿಹಾಕಿದರು. ಈ ಕೊಚ್ಚಿಹಾಕಿದ ಮಂದಿಯೇ ಒಬ್ಬೊಬ್ಬರಾಗಿ ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದರು. ಮುಖದ ಮೇಲೆ ಆಸಿಡ್ ಎರಚಿದರು. ಅವಳೀಗ ಸಾರ್ವಜನಿಕ ಆಸ್ಪತ್ರೆಯಲ್ಲಿ ಜೀವನ್ಮರಣ ಹೋರಾಟದಲ್ಲಿದ್ದಾಳೆ. ಬದುಕಿದರೂ ಆಕೆಗೆ ಎಂತಹ ಜೀವನ ನೀಡಬಲ್ಲದು ಆ ನಗರ? ಆಕೆ ಮಾನಕ್ಕಾಗಿ ಬದುಕಿಗಾಗಿ ಚೀರಾಡುತ್ತಿದ್ದಾಗ ಧರ್ಮ-ದೇವರುಗಳ ಕಿವಿಗಂತೂ ಅದು ಬೀಳಲೇ ಇಲ್ಲ.

● 23 ವರ್ಷದ ತರುಣಿ ಎಂ.ಕಾಂ. ಎಲ್‌ಎಲ್‌ಬಿ ಮುಗಿಸಿ ಐ.ಎ.ಎಸ್. ಸೇರಲು ಸಿದ್ಧಳಾಗುತ್ತಿದ್ದ ಪ್ರತಿಭಾವಂತ ತರುಣಿ. ತಂದೆ ನಿವೃತ್ತ ಪೋಲೀಸ್ ಅಧಿಕಾರಿ, ಅಣ್ಣನೂ ಪೋಲೀಸ್ ಅಧಿಕಾರಿ. ಅಣ್ಣ ಡ್ಯೂಟಿಯ ಮೇಲಿದ್ದ. ಮನಗೆ ಧರ್ಮದ ಬೊಬ್ಬೆಯೆಬ್ಬಿಸಿಕೊಂಡ ಬಂದ ಜಂಗುಳಿ ಮುತ್ತಿಗೆ ಹಾಕಿತು. ವಯಸ್ಸಾದ ತಂದೆ- ತಾಯಿ, ಇಬ್ಬರು ಹೆಣ್ಣುಮಕ್ಕಳು ಮನೆಯಲ್ಲಿದ್ದಾರೆ. ಹೇಗೋ ಒಬ್ಬ ಮಗಳು, ತಂದೆತಾಯಿ ಪಾರಾದರು ದುರದೃಷ್ಟವಶಾತ್ ಈಕೆ ಸಿಕ್ಕಿ ಹಾಕಿಕೊಂಡು ಮತಾಂಧರ ಹುಚ್ಚಿಗೆ ಬಲಿಯಾದಳು. ಮನೆಯ ಸಾಮಾನುಗಳನ್ನೆಲ್ಲಾ ರಾಶಿಹಾಕಿ ಬೆಂಕಿಯಿಟ್ಟರು. ಆಕೆಯ ದೇಹವನ್ನು ಬೆಂಕಿಗೆ ಹಾಕಿದರು. ಆಕೆಯ ರುಂಡ ಮಾತ್ರ ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಬಂತು. ಎರಡು ದಿನಗಳ ಹಿಂದೆಯಷ್ಟೆ ಅವಳ ಅಧ್ಯಯನಕ್ಕೆಂದು 5000 ರೂ. ಗಳ ಪುಸ್ತಕ ತಂದಿದ್ದೆವು ಎನ್ನುತ್ತಾಳೆ ಶೂನ್ಯದತ್ತ ದಿಟ್ಟಿಸುತ್ತಾ ಆಕೆಯ ತಾಯಿ.

● ಆಕೆ ಡಿಸೆಂಬರ್ 10 ರಂದು ಸೂರತ್-ಭುಸಾವಳ್ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದಳು. ಜತೆಗೆ ಅಣ್ಣ, ಅತ್ತಿಗೆ ಇದ್ದರು. ಇದ್ದಕ್ಕಿದ್ದಂತೆ ಮತಾಂಧರ ದೊಂಬಿ. ರೈಲಿನಿಂದ ಎಳೆದುಹಾಕಿ ಸಾಮೂಹಿಕ ಅತ್ಯಚಾರ. ಅದರ ಮೇಲಿ ಛಾಟಿಯೇಟು. ನಂತರ ಬೆಂಕಿ ಹಚ್ಚಿ ಜೀವಂತ ಸುಡುವ ಪ್ರಯತ್ನ ಅಣ್ಣನನ್ನು ಜೀವಂತ ಸುಟ್ಟರು. "ನಾನು ಸತ್ತಂತೆ ನಟಿಸಿದೆ" ರೈಲ್ವೇ ಹಳಿಗೆ ಎಸೆದು ಹೋದರು. ಎನ್ನುತ್ತಾಳೆ. ಸೂರತ್ ಆಸ್ಪತ್ರೆಯೊಂದರಲ್ಲಿ ಈಗ ಇರುವ ಆಕೆ ತಲೆ ದೋಳಾಗಿದೆ. ಧರ್ಮ-ದೇವರುಗಳಲ್ಲಿ ಕಿವಿಗೆ ಆಕೆಯ ಚೀತ್ಕಾರ ಬಿದ್ದಿರಲಿಲ್ಲ. ಇಬ್ಬರು ಪೋಲೀಸರ ಕಿವಿಗೆ ಹೇಗೋ ಬಿದ್ದು ಆಸ್ಪತ್ರೆಗೆ ತಂದರು.

* * * * * * * * * *

ಇವು ಸೂರತ್‌ನಲ್ಲಿ ನಡೆದ ಭಯಂಕರ ಅತ್ಯಾಚಾರದ, ಹತ್ಯಾಕಾಂಡದ ಘಟನಗಳು ಸಂಸ್ಕೃತಿ ಎನ್ನುವುದು ತುಸುವಾದರು ಇರುವ ಯಾರೇ ಆದರೂ ನಾಚಿಕೆಯಿಂದ ತಲೆತಗ್ಗಿಸಬೇಕಾದ ಘಟನೆಗಳಲ್ಲಿ ಕೆಲವಷ್ಟೆ, ಡಿಸೆಂಬರ್ 8 ರ ರಾತ್ರಿ ಸೂರತ್ ವಿಜಯನಗರ, ವಿಶ್ರಾಮನಗರ, ಕುಂಕೀಣನಗರ, ಜೆ.ಪಿ.ನಗರ, ಸಂದಾಸ್-ನಗರ ಹಾಗೂ ಪಕ್ಕದ ದವಲ್‌ಕಾದ್‌ಶಾದ್ ಪ್ರದೇಶ ಮಹಿಳೆಯ ಚೀರಾಟ, ಆಕ್ರಂದನಗಳಿಂದ ತುಂಬಿಹೋಗಿತ್ತು. ಸಹಾಯಕ್ಕಾಗಿ ಅವರ ಮೊರೆಗೆ ಯಾವ ದೇವರೂ ಕಿವಿಕೊಡಲಿಲ್ಲ- ಅದೊಂದು ಅತ್ಯಂತ ಭಯಂಕರ, ರಾಕ್ಷಸೀ ರಾತ್ರಿ ಎನ್ನುತ್ತಾರೆ ಈ ಪ್ರದೇಶದ ನಿವಾಸಿಗಳು.

ಪೋಲೀಸರ ಪತ್ತೆಯಿಲ್ಲ-ಮತಾಂಧ ಜನಜಂಗುಳಿಯದ್ದೇ ರಾಜ್ಯ . ಕೊಲೆ-ಸುಲಿಗೆ, ಕಾಮವಿಕಾರಗಳ ತಾಂಡವ-ಎಲ್ಲವೂ ಧರ್ಮದ. ಹೆಸರಿನಲ್ಲಿ ಗಂಡಸರಿಗೆ ಜೀವಂತ ಕೊಳ್ಳಿಯಿಟ್ಟು ಉರಿಯುತ್ತಿರುವ ಟಯರುಗಳನ್ನು ಕೊರಳಿಗೆ ಹಾಕಿ ಅವರು ಜೀವಂತ ಸುಡುತ್ತಿರುವುದನ್ನು ನೋಡಿ ಕೈ ಚಪ್ಪಾಳೆ ತಟ್ಟಿ ಕುಣಿಯುತ್ತಿದ್ದರೆ ಹೆಂಗಸರನ್ನು ಸಂಪೂರ್ಣ ನಗ್ನರಾಗಿಸಿ ಓಡಿಸುವುದು. ಭಯಭೀತರಾದ ಮಕ್ಕಳನ್ನು ಎದೆಗವಚಿಕೊಂಡು ಓಡಿಸುವ ನಡುವೆ ಬೇಕಿಂದೇ ಹಗ್ಗ, ಕೋಲುಗಳನ್ನು ಎಸೆದು. ಮುಗ್ಗರಿಸಿ ಬೀಳುವಂತೆ ಮಾಡುವುದು-ಬಿದ್ದಲ್ಲೆ ವಿಕೃತ ಕಾಮಿಗಳಿಂದ ಅತ್ಯಚಾರ. ಇನ್ನೂ ಕೆಲವರು ಈ ಎಲ್ಲಾ ಅನಾಚಾರಗಳನ್ನು ವಿಡಿಯೋ ಮುದ್ರಣ ಕೂಡ ಮಾಡಿಕೊಂಡರಂತೆ- ತಮ್ಮ ತೃಪ್ತಿಗಾಗಿ!

ಈ ಪ್ರದೇಶಗಳಲ್ಲಿ ಬಹಳಷ್ಟು ಹೆಣ್ಣುಮಕ್ಕಳು ಇನ್ನೂ ಕಾಣೆಯಾಗಿದ್ದಾರೆ. ಅವರು ಸತ್ತಿದ್ದಾರೋ, ಬದುಕಿದ್ದಾರೋ, ಬದುಕಿದ್ದರೆ ಹೇಗೆ ಬದುಕಿದ್ದಾರೋ ದೇವರಿಗೂ ಗೊತ್ತಿರಲಿಕ್ಕಿಲ್ಲ, ಏಕೆಂದರೆ ಅವರ ಆಕ್ರಂದನಗಳೇ ಆ ದೇವರ ಕಿವಿಗೆ ಬಿದ್ದಂತಿಲ್ಲ ಎನ್ನುತ್ತಾರೆ ನಿರಾಶ್ರಿತ ಶಿಬಿರಗಳಿಗೆ ಭೇಟಿ ನೀಡಿ ತನಿಖೆಮಾಡಿದ ಒಬ್ಬ ಪತ್ರಕರ್ತರು.

ಮೂಜ್ಹಾಸ್ ಶಾನಿ ಹಾಲ್‌ನಲ್ಲಿ 1529 ಮಂದಿ ನಿರಾಶ್ರಿತರಾಗಿದ್ದಾರೆ. ಎಲ್ಲರೂ ಡಿಸೆಂಬರ್ 8 ರಿಂದ 10 ರವರೆಗಿನ ಅನುಭವಗಳನ್ನು ನೆನೆಸಿಕೊಂಡು ಭಯಭೀತರಾಗಿರುವವರೇ.

ಆಕೆಗೆ 22 ವರ್ಷ. ಆಕೆಯ ಗಂಡನನ್ನು ಕೊಚ್ಚಿಹಾಕಿದರು. ಇನ್ನೊಬ್ಬಳ ಗಂಡ ಮಕ್ಕಳನ್ನು ಕರೆಯಲು ಹೋದವ ಹಿಂದಿರಗಲೇ ಇಲ್ಲ. ಉಳಿದವರು ತಪ್ಪಿಸಿಕೊಂಡು ಹೋಗುವಾಗ ಮಾವನನ್ನು ಕೊಚ್ಚಿಹಾಕಿದರು. ಮೂರು-ವರ್ಷದ ಮಗನ ತಲೆಯ ಮೇಲೆ ಖಡ್ಗದ ಏಟು. ಈ ಬಾಲಕ ಪತ್ರಕರ್ತರಿಗೆ ಈ ಕಥೆ ಹೇಳುವಾಗ ಎಲ್ಲರ ಕಣ್ಣಲ್ಲೂ ನೀರು.

ಇನ್ನೊಂದು ಸೂರತ್‌ಲಾಲಾ ಶಿಬಿರ. ಅಲ್ಲಿ 800 ಜನ ಇದೇ ಸ್ಥಿತಿಯಲ್ಲಿದ್ದಾರೆ. ಒಬ್ಬ ಬಾಲಕ ತನ್ನ ಕಣ್ಣೆದುರೇ ತಾಯಿ ಹಾಗೂ ಅಕ್ಕನ ಮೇಲೆ ದುರುಳರು ಸಾಮೂಹಿಕ ಅತ್ಯಾಚಾರ ಮಾಡಿ ಕೊಳ್ಳಿಯಿಟ್ಟು ಸಾಯಿಸಿದ್ದನ್ನು ಕಂಡಿದ್ದ. ಅಂದಿನಿಂದ ಅವನ ಕಣ್ಣಲ್ಲಿ ತೊಟ್ಟು ಕಣ್ಣೀರೂ ಬಂದಿಲ್ಲ.

* * * * * * * * * *

ಸೂರತ್ ಗುಜರಾತದ ಮಾತ್ರವಲ್ಲ ಪಶ್ಚಿಮ ಭಾರತದ ಪ್ರಮುಖ ಕೈಗಾರಿಕಾನಗರಗಲ್ಲಿ ಒಂದು. ಗುಜರಾತಿನಲ್ಲೇ ಕಪ್ಪುಹಣ ಅತ್ಯಂತ ಹೆಚ್ಚು ಚಲಾವಣೆಯಲ್ಲಿರುವ, ಜೀವನವೆಚ್ಚ ಕೂಡ ಹೆಚ್ಚಾಗಿರುವ ನಗರ. ಬಡವ-ಶ್ರೀಮಂತರ ನಡುವೆ ಅತ್ಯಂತ ಹೆಚ್ಚು ವ್ಯತ್ಯಾಸವಿರುವ ನಗರ ಕೂಡಾ. ಆದರೆ ಹಿಂದೆ ಎಂದೂ ಕೋಮು ಹಿಂಸಾಚಾರ ಕಂಡರಿಯದ ನಗರ. "ಮಾನಭಂಗಕ್ಕೊಳಗಾದ ಮಹಿಳೆಯರ ಆಕ್ರಂದನ ಈಗಲೂ ನನ್ನ ಕಿವಿಗಳ ಮೇಲೆ ಮತ್ತೆ ಮತ್ತೆ ಬಡಿಯುತ್ತಿದೆ ಎನ್ನುತ್ತಾರೆ ಈ ನಗರದವರೇ ಆದ ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶ ಡಿ.ವಿ. ದೇಸಾಯಿ.

ವಜ್ರ ಹಾಗೂ ಬಟ್ಟೆ ಉದ್ಯಮಕ್ಕೆ ಹೆಸರಾದ ಈ ನಗರಕ್ಕೆ ಸುತ್ತಮುತ್ತಲ ಪ್ರದೇಶದ ಜನಗಳಲ್ಲಿ ಮುಖ್ಯವಾಗಿ ಸೌರಾಷ್ಟ್ರದ ಬರಪೀಡಿತ ಪ್ರದೇಶಗಳಿಂದ ಉದ್ಯೋಗದ ಸಮೃದ್ಧಿಯ ಕನಸನ್ನು ಹೊತ್ತು ಬಂದವರು. ಇಲ್ಲಿ ರಾಜಕಾರಣಿಗಳು, ಪೋಲೀಸರು, ಕಟ್ಟಡ ಕಾಂಟ್ರಾಕ್ಟರುಗಳು, ಕಳ್ಳಸಾಗಣೆಕಿದಾರರ ವೈಪೋಟಿಗಳ ನಡುವೆ ತಮ್ಮ ಕನಸುಗಳು ನುಚ್ಚುನೂರಾಗುವುದನ್ನು ಕಂಡವರು. ಇದರಿಂದಾಗಿ ಎಲ್ಲಾ ರೀತಿಯ ಛಿದ್ರಕಾರೀ ಪ್ರವೃತ್ತಿಗಳಿಗೆ ಬಲಿಯಾದವರು. ಬೀದಿಗಿಳಿದ "ಹಿಂದುತ್ವ" ಕೂಡಾ ಇದರಲ್ಲಿ ಒಂದು. ಒಂದೆಡೆ ಕಾಂಗ್ರೆಸ್‌ನ ಶ್ರೀಮಂತ ಮುಸ್ಲಿಂ ಮುಖಂಡರು ಬಡ ಕೊಳೆಗೇರಿ ವಾಸಿ ಮುಸ್ಲಿಮ್ ಯುವಕರನ್ನು ಬೀದಿಗಿಳಿಸಿದರೆ ಪ್ರತಿಯಾಗಿ ಡಿಸೆಂಬರ್ 7 ರಿಂದ 10 ರವರೆಗೆ ಇಡೀ ಮುಸ್ಲಿಮ್ ಸಮುದಾಯ "ಹಿಂದುತ್ವ"ದ ಹೆಸರಿನಲ್ಲಿ ಅಲೆದಾಡುತ್ತಿರುವ ಗೂಂಡಾಶಕ್ತಿಗಳ ಸೆರೆಯಾಳಾಯ್ತು. ಮುಸ್ಲಿಮರ ಮನೆ, ಕಾರ್ಖಾನೆ, ಅಂಗಡಿಗಳನ್ನು ವ್ಯವಸ್ಥಿತವಾಗಿ ಆರಿಸಿ-ಆರಿಸಿ ಬಲಿಹಾಕಿದರು. ಯಾವ ಭೀತಿಯೂ ಇಲ್ಲದೆ ಹಗಲು-ರಾತ್ರಿ ಬೀದಿಯಲ್ಲಿ ಅಲೆದಾಡುತ್ತಿದ್ದ ಶಸ್ತ್ರ ಸಜ್ಜಿತ ಗೂಂಡಾಪಡೆಗಳು ಎನ್ನುತ್ತಾರೆ "ಟೈಮ್ಸ್ ಆಫ್ ಇಂಡಿಯಾ"-ದಲ್ಲಿ (ಜನವರಿ 20) ಪತ್ರಕರ್ತ ಹರೀಶ್ ಖರೆ. ವಿಜಯನಗರ ಪ್ರದೇಶದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರೇ ಈ ಗೂಂಡಾಪಡೆಗಳ ನೇತೃತ್ವವಹಿಸಿದ್ದರು. ಈ ಪ್ರದೇಶದಿಂದ ಕಾರ್ಪೋರೇಶನ್‌ಗೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದವನ ಹೆಸರು ಒಂದು ದೂರಿನಲ್ಲಿ ದಾಖಲಾಗಿದ್ದರೆ. ಜನತಾದಳದಿಂದ ಚುನಾಯಿತನಾಗಿ ಈಗ ದೊಡ್ಡ ಕಾಂಟ್ರಾಕ್ಟುದಾರನಾಗಿರುವ ಚುನಾಯಿತ ಕಾರ್ಪೋರೇಟರ್ ಬಿಜೆಪಿ ಸೇರಿದ್ದಾನೆ.

ಉದ್ಯಮಿಗಳ, ವ್ಯಾಪಾರಿಗಳ, ಅವರ ಹಿತಾಸಕ್ತಿಗಳದು ಎತ್ತಿಹಿಡಿಯುವ ಕಾಂಗ್ರೆಸ್, ಬಿಜೆ.ಪಿ. ರಾಜಕಾರಣಿಗಳ ಆಟಕ್ಕೆ ಅಯೋಧ್ಯಾ ಘಟನೆ ಹಚ್ಚಿದ ಬೆಂಕಿಗೆ ಬಲಿಯಾದವರು ಮಹಿಳೆಯರು. ಕಳೆದ ವರ್ಷ ಅಡ್ವಾಣಿಯವರು ಚುನಾವಣಾ ಪ್ರಚಾರಕ್ಕೆ ಬಂದಾಗ ಐದು ಲಕ್ಷ ಮಂದಿ "ರಾಮರಾಜ್ಯ"ದ ಸಂದೇಶಕ್ಕೆ ಮಾರುಹೋದ ಪ್ರದೇಶವೇ ಇಂದು ವಿಕೃತಕಾಮಿಗಳಿಗೆ ಬಲಿಯಾದ ಮಹಿಳೆಯರ ಆಕ್ರಂದನದಿಂದ ತುಂಬಿ ಹೋಗಿರುವುದು ಕೇವಲ ಆಕಸ್ಮಿಕವೇ? ಬಿಜೆಪಿ ಯ 'ರಾಮಭಕ್ತಿ'ಯ ಮುಖವಾಡದ ಹಿಂದಿರುವ ಕ್ರೂರ ವರ್ಗ ಹಿತಾಸಕ್ತಿ ಕಾಣಬಲ್ಲವರಿಗೆ ಇದು ಆಕಸ್ಮಿಕವೆನಿಸುವುದಿಲ್ಲ.

ಆಧಾರ: 'ಟೈಮ್ಸ್ ಆಫ್ ಇಂಡಿಯಾ'ದ ಡಿಸೆಂಬರ್ 20, ಜನವರಿ 20 ಹಾಗೂ 21ರ ಸಂಚಿಕೆಗಳಲ್ಲಿ ಪ್ರಕಟವಾದ ವರದಿಗಳು.

"ಭಾರತದ ಗೋಧಿಯಿಂದ ...

ಭಾರತದ ಆತ್ಮೀಯ ಸೋ...

ನಾವು ಒಂಟಿಯಲ್ಲ......

ನಿಜ, ನಾವು ಬಹಳ ಕಷ್ಟದಲ್ಲಿದ್ದೇವೆ. ಇದ್ದಕ್ಕಿದ್ದಂತೆ ಸಮಾಜವಾದೀ ರಂಗದ, ಸೋವಿಯೆತ್ ಒಕ್ಕೂಟ ಮಯಾವಾದದ್ದು ನಮಗೆ ಬಹಳ ತೊಂದರೆಯುಂಟುಮಾಡಿದೆ. ನಮಗೆ ಇಂಧನ, ಕಚ್ಚಾಸಾಮಗ್ರಿಗಳನ್ನು ಒದಗಿಸಿದ ಈ ದೇಶಗಳು ನಮ್ಮ ರಟ್ಟಿಗೆ ನ್ಯಾಯಬೆಲೆಯನ್ನು ನೀಡುತ್ತಿದ್ದವು. ಈಗ ಅದಿಲ್ಲ. ಅಲ್ಲದೆ ಸಾಮ್ರಾಜ್ಯಶಾಹಿ ಈ ಪರಿಸ್ಥಿತಿಯ ದುರ್ಲಾಭ ಪಡೆದು ನಮ್ಮ ಜನ ಹಸಿವು-ರೋಗರುಜಿನಗಳಿಗೆ ತುತ್ತಾಗಿ ಶರಣಾಗುವಂತೆ ಮಾಡಬಯಸುತ್ತಿದೆ.................

..........ಇತಿಹಾಸ ನಮ್ಮ ದೇಶಕ್ಕೆ ಮೀಸಲಿಟ್ಟಿರುವ ಕಠಿಣ ಪರೀಕ್ಷೆಯಿದು. ಆದ್ದರಿಂದ ಇದನ್ನು ಎದುರಿಸುವ ಕೆಲಸ ನಮ್ಮಸ್ವಂತ ಪ್ರಯತ್ನಗಳು, ಹೋರಾಟಗಳು, ತ್ಯಾಗಗಳ ಮೇಲೆಯೇ ಅವಲಂಬಿಸಿದೆ. ಆದರೆ ಇದರಿಂದ ನಮಗೆ ಸಿಗುತ್ತಿರುವ ಸೌಹಾರ್ದ ಬೆಂಬಲವೇನೂ ಕಮ್ಮಿಯಿಲ್ಲ. ನಾವು ಈ ಸೌಹಾರ್ದಕ್ಕಾಗಿ ಕೃತಜ್ಞರು.- ಏಕೆಂದರೆ ನಮ್ಮ ಹೋರಾಟದಲ್ಲಿ ಅದು ನಮಗೆ ಪ್ರೋತ್ಸಾಹ, ಉತ್ಸಾಹ ತುಂಬುತ್ತದೆ. ಅದೊಂದು ಭಾರೀ ನೈತಿಕ ಶಕ್ತಿ- ನಾವು ಒಂಟಿಯ ಎಂದು ನೆನಪಿಸುವ ಶಕ್ತಿ. ನಮ್ಮ ದೇಶ ವಿಶ್ವದ ಈ ಇತರ ಹಲವು ಜನ ಕೂಡಾ ಒಪ್ಪುವ ಮೌಲ್ಯಗಗಾಗಿ ಹೋರಾಡುತ್ತಿದೆ ಎಂದು ನೆನಪಿಸುವ ಶಕ್ತಿ.

ಈ ಸೌಹಾರ್ದವನ್ನು ಸಾಮ್ರಾಜ್ಯಶಾಹಿಯ ಭಯಂಕರ ಅಪಪ್ರಚಾರ ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ. ನಮ್ಮ ನೆರವಿಗೆ ಬರುವ ಹಡಗುಗಳನ್ನು ತಡೆಯಲು, ವಿಶ್ವಸಂಸ್ಥೆಯಲ್ಲಿ ನಮ್ಮ ದೇಶದ ಮೇಲೆ ಇರುವ ನಿರ್ಬಂಧದ ವಿರುದ್ಧ ಮತ ನೀಡದಂತೆ ತಡೆಯಲು ಪ್ರಯತ್ನಿಸುತ್ತಿದೆ. ಅತ್ಯಂತ ನ್ಯಾಯಯುತ ದೇಶದ, ಮಾನವಕುಲದ ಅತ್ಯಂತ ಮಾನವೀಯ ಕ್ರಾಂತಿಕಾರಿ ಪ್ರಕ್ರಿಯೆಯ ವಿಕೃತ ಚಿತ್ರ ನೀಡಲು ಪ್ರಯತ್ನಿಸುತ್ತಿದೆ.

ಅವರ ಬಳಿ ಆಂಟೆನಾಗಳಿವೆ

ಆದರೆ ಕೇವಲ ಮಾತುಗಳಲ್ಲ. ಸಂಗತಿಗಳೇ ನಮ್ಮ ಪರವಾಗಿ ಮಾತನಾಡುತ್ತಿವೆ. ನಮ್ಮ ವಿರುದ್ಧ ಪ್ರಚಾರವೇನೆ ಇರಲಿ ಜನ ನಮ್ಮ ಪರವಾಗಿ ಸ್ಪಂಧಿಸುತ್ತಿದ್ದಾರೆ. 10 ಲಕ್ಷಕ್ಕೂ ಹೆಚ್ಚು ಭಾರತೀಯರು ( ) ಸೌಹಾರ್ದ ಪ್ರಚಾರದಲ್ಲಿ ಭಾಗವಹಿಸಿದ್ದರು. ಕ್ಯೂಬಾದೊಂದಿಗೆ ಜನಗಳ ಸೌಹಾರ್ದ ಹೆಚ್ಚುತ್ತಿದೆ. ಏಕೆಂದರೆ ಜನಗಳಲ್ಲಿ ಸತ್ಯವನ್ನು ತಿಳಿಯುವ ಸಹಜ ಸ್ವಭಾವವಿದೆ. ವಸಾಹತುಶಾಹಿ, ನವವಸಾಹತುಶಾಹಿ ಹಾಗೂ ಸಮ್ರಾಜ್ಯಶಾಹಿ ಹೇರಿದ ಅನ್ಯಾಯ, ದಮನ, ಅನಾಹುತಗಳೇನೆಂದು ಅವರಿಗೆ ಗೊತ್ತು.

ತ್ರಿಪುರಾ ಚುನಾವಣೆ: ಮ...

ಇದೇ ಫೆಬ್ರುವರಿ 15 ರಂದು ತ್ರಿಪುರಾ ವಿಧಾನಸಭಾ ಚುನಾವಣೆ ನಡೆದಿದೆ. ಐದು ವರ್ಷಗಳ ಹಿಂದೆ 'ಫೆಬ್ರುವರಿ 2 ರಂದು ಮೋಸ, ವಂಚನೆಗಳಿಂದ ಅಧಿಕಾರ ಗಿಟ್ಟಿಸಿದ, ತನ್ನ ಆಡಳಿತಾವಧಿಯಲ್ಲಿ ಪ್ರಜಾಪ್ರಭುತ್ವದ ಹೆಸರಿಗೆ ಒಂದು ದೊಡ್ಡ ಕಳಂಕ ತಂದ ಕಾಂಗ್ರೆಸ್(ಐ) -ಟಿ.ಯುಜೆಎಸ್ ಸರಕಾರದ ದುಷ್ಕೃತ್ಯಗಳ ಕಥೆ ಹಿನ್ನೋಟ ಬೀರಿದ್ದಾರ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ. ಕಾಂ. ಪ್ರಕಾಶ್ ಕಾರಟ್'

ಕಳೆದ ಚುನಾವಣೆಯಲ್ಲಿ ಕೇಂದ್ರ ಸರ್ಕಾರ ಸಿನಿಮೀಯ ಮಾದರಿಯ ಪಿತೂರಿ ನಡೆಸಿ. ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದಿತು. ಚುನಾವಣೆಗೆ ಮೂರು ದಿವಸಗಳ ಮೊದಲು ಅಂದಿನ ಪ್ರಧಾನಿ ಶ್ರೀ ರಾಜೀವ್‌ಗಾಂಧಿ ತ್ರಿಪುರಾವನ್ನು ಗಲಭೆಪೀಡಿತ ಪ್ರದೇಶವೆಂದು ಘೋಷಿಸಿದರು. ಈ ಘೋಷಣೆ ರಾಜ್ಯದ ಸೈನಿಕರನ್ನು ನಿಯುಕ್ತಗೊಳಿಸಲು ಅನುವು ಮಾಡಿಕೊಟ್ಟಿತ್ತು. ತ್ರಿಪುರಾ ರಾಷ್ಟ್ರೀಯ ಸ್ವಯಂ ಸೇವಕರ (ಟಿಎನ್‌ವಿ) ಭಯೋತ್ಪಾದನೆ ತಡೆಯುವ ನೆವದಲ್ಲಿ ಕೈಗೊಂಡ ಈ ಕ್ರಮ ಆಡಳಿತದಲ್ಲಿದ್ದ ಎಡರಂಗ ಸರ್ಕಾರವನ್ನೂ ಕಡೆಗಣಿಸಿತ್ತು. ಈ ಹಿಂದೆ ಎಡರಂಗ ಸರ್ಕಾರ ಈ ಭಯೋತ್ಪಾದನೆ ತಡೆಯಲು ಸೈನ್ಯದ ಹೆಚ್ಚಿನ ತುಕಡಿಗಳನ್ನು ಕೇಳಿದಾಗ ಕೊಡದೆ ಈ ಕ್ರಮವನ್ನು ಕೇಂದ್ರ ಸರ್ಕಾರ ಕೈಗೊಂಡಿತ್ತು. ಟಿ.ಎನ್.ವಿಯ ಭಯೋತ್ಪಾದನೆಯಿಂದ ಹೆದರಿದ್ದ ಬಂಗಾಳಿಗಳ ಮತಗಳನ್ನು ಒಡೆಯುವಲ್ಲಿ ಈ ಕ್ರಮ ನೆರವಾಯಿತು. ನಂತರದ ಕೆಲವು ತಿಂಗಳಲ್ಲಿ ಮಿಜೋರಾಮ್‌ನ ಕಾಂಗ್ರೆಸ್ ಮುಖ್ಯಮಂತ್ರಿ ಲಾಲ್ತನ್‌ವಾಲ್ ಮತ್ತು ಟಿ.ಎನ್.ವಿಯ ಮುಖ್ಯಸ್ಥ ಬಿಜೋರಿಯ ಹ್ರಂಖಾರಿಯ ಸೇರಿ ನಡೆಸಿದ ಪಿತೂರಿ ಇದು ಎಂಬುದು ಬಯಲಾಯಿತು. ಎಡರಂಗದ ಸರ್ಕಾರ ಆಡಳಿತ ನಡೆಸುವಾಗ ಭಯೋತ್ಪಾದನೆ ನಡೆಸಿದ್ದ ಟಿ.ಎನ್.ವಿ. ನಂತರ ಕಾಂಗ್ರೆಸ್‌ನೊಂದಿಗೆ ಸಖ್ಯ ಬೆಳೆಸಿ ಕಾಂಗ್ರೆಸ್ ಸರ್ಕಾರಕ್ಕೆ ಶರಣಾಯಿತು.

ಚುನಾವಣೆಯಲ್ಲಿ...

ಟಿ.ಎನ್.ವಿ. ಎಂಬತು ಜ... ಕೊಲೆಯನ್ನು ಚುನಾವಣ... ವಿರುದ್ಧ ಕಾಂಗ್ರೆಸ್ ಬಳಸಿಕೊಂಡಿ... ರಾಜ್ಯಸಚಿವರುಗಳಾದ ಸಂತೋಷ... ಮತ್ತು ಪಿ. ಚಿದಂಬರಮ್ ರಾ... ಹೆದರಿಸಿ ಬೆದರಿಸಿ ತಮಗೆ ಸ... ಮಾಡಿಕೊಂಡರು. ಮತ ... ಎಡರಂಗ ಪೋಲಿಂಗ್ ಏಜಂಟ... ಬೆದರಿಕೆಯಿಂದ ಓಡಿಸಲಾಯಿತು... ಮಿಲಿಟರಿ ಈ ಅಕ್ರಮಗಳ ರಕ್ಷ... ಮಾಡಲಾಯಿತು. ಇಷ್ಟೆಲ್ಲ ಮಾ... ಗೆದ್ದರೂ ಎಡರಂಗ ಶೇ.50.58 ... ಕಾಂಗ್ರೆಸ್ ಟಿ.ಯು.ಜೆ.ಎಸ್.ನ ... ರಷ್ಟು ಮತಗಳನ್ನು ಮಾತ್ರ ಪಡೆಯ...

ಬರ್ಬರತೆಯ ನ...

ಕಾಂಗ್ರೆಸ್ ಟಿಯುಜೆ.ಎಸ್‌... ಕಾರಕ್ಕೆ ಬಂದ ಮೇಲೆ ಕ್ರೌರ್ಯ ... ಡಿತು. ತ್ರಿಪುರಾ ರಣಭೂಮಿಯ... ಮುಗ್ಧರ ಹಸುಳೆ, ಹೆಂಗಸರ ರಕ್ತದ... ಸಿಪಿಐ(ಎಂ) ಕಾರ್ಯಕರ್ತರ ಸಾ... ಹೋಮ ನಡೆಯಿತು. ಮೊದಲ ... 40 ಕಾರ್ಯಕರ್ತರನ್ನು ಕೊಲ್ಲಲಾಯ...

ಕಾಂಗ್ರೆಸ್ ಬೆಂಬಲಿತ ಗೂಂ... 300 ಮಹಿಳೆಯರ ಮೇಲೆ ಸಾ... ಗೈದರು.

ಉಜಾನ್ ಮೈದಾನದಲ್ಲಿ ... ಸೈನಿಕರು ಬುಡಕಟ್ಟು ಜನಾಂಗ... ಮೇಲೆ ಸಾಮೂಹಿಕ ಅತ್ಯಾಚಾ...

...ತ್ರ ನೈತಿಕ ಧೈರ್ಯ ಹೆಚ್ಚಿದೆ"
...ರಿಗೆ ಕಾಸ್ಟ್ರೋ ಕೃತಜ್ಞತೆ

...ಜನ ಸಂಪರ್ಕವಿಟ್ಟುಕೊಳ್ಳಲು ಅವರ ...ಅಂಟಿನಾಗಳಿವೆಯೋನೋ ಎಂದನಿ-... ಈ ಅಂಟಿನಾಗಳಮೂಲಕಅವರು ...ು ದಶಕಗಳ ಕಾಲ ನಾವು ಇತಿ-...ದ ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯದ ... ನಡೆಸುತ್ತಿರುವ ಧೀರ ಹೋರಾ-...ಬಗ್ಗೆ ಸತ್ಯ ಸಂಗತಿಗಳ ಬಗ್ಗೆ ಅವರಿಗೆ ...ಸುತ್ತಿದೆಯೋನೋ ಅನಿಸುತ್ತಿದೆ. ...ನಮ್ಮ ಈ ಹೋರಾಟಗಳನ್ನು ಅವರು ...ಸುತ್ತಾರೆ. ಅದಕ್ಕಾಗಿ ನಾವು ಕೃತ-... ಹಿಂದೆ ನಾವು ಮಾಡಿದಂತೆ, ...ೂ ಮಾಡುತ್ತಿರುವಂತೆ ಕಷ್ಟದ ಸಮು-...ಲ್ಲಿ ನೆರವಿಗೆ ಬಂದಿರುವ ಅವರೆಲ್ಲ-... ನಾವು ಸದಾ ಕೃತಜ್ಞರು. ಕ್ಯೂಬಾ-... ಈಗಲೂ ವಿದೇಶೀ ವಿದ್ಯಾರ್ಥಿಗಳ ...ಶಿಪ್‌ಗಳು ಮುಂದುವರಿಯುತ್ತಿವೆ. ...ತ್ಯಂತ ಹಲವು ದೇಶಗಳಲ್ಲಿ ನಮ್ಮ ... ಈಗಲೂ ಸೇವೆ ಸಲ್ಲಿಸುತ್ತಿ-... ಆದರೆ ಇಂದು ನಮ್ಮ ಅತ್ಯಂತ ...ದ ಅಂತರ್‍ರಾಷ್ಟ್ರೀಯ ಕೆಲಸವೆಂದರೆ, ಕ್ರಾಂತಿಯನ್ನು, ಸಮಾಜವಾದವನ್ನು ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದು.

ಗೆದ್ದೆ ಗೆಲ್ಲುವೆವು!

...0105 ಟನ್ ಗೋಧಿ ಮತ್ತು ...ಗಳು ಕೇವಲ ಒಂದು ಪ್ರತೀಕ-... ಅದಕ್ಕೂ ಹೆಚ್ಚು. ಅದು 10105 ಟನ್ ಸೌಹಾರ್ದತೆ, 10105 ಟನ್ ನೈತಿಕ ಬೆಂಬಲ- ನಮ್ಮನ್ನು ಇನ್ನಷ್ಟು ಹೆಚ್ಚು ಅಂತರ್‍ರಾಷ್ಟ್ರೀಯವಾದಿಗಳಾಗಿಸುವ, ಇನ್ನಷ್ಟು ಹೆಚ್ಚು ಕ್ರಾಂತಿಕಾರಿಗಳಾಗಿಸುವ, ನಮ್ಮ ಭವ್ಯ ಗುರಿಸಾಧನೆಗೆ ಇನ್ನಷ್ಟು ದೃಢ ಸಂಕಲ್ಪ ಮಾಡುವಂತೆ ಪ್ರೇರೇಪಿಸುವ ಶಕ್ತಿ.

ಪ್ರಿಯ,

ಭಾರತದ ಸೋದರರೇ ಧನ್ಯವಾದ!

ಭಾರತೀಯ ನಿಯೋಗದ ಪ್ರಿಯ ಸಂಗಾತಿಗಳೇ, ಧನ್ಯವಾದ. ಭಾರತೀಯ ಸರಕಾರದ ಪ್ರತಿನಿಧಿಗಳೇ ಧನ್ಯವಾದ! ನಮ್ಮ ಜನತೆಯ ಪರವಾಗಿ ಧನ್ಯವಾದ! ನಮ್ಮ ಕ್ರಾಂತಿಯ ಪರವಾಗಿ, ಪಿತೃಭೂಮಿಯ ಪರವಾಗಿ ನಿಗಮುಗಿದೋ ಧನ್ಯವಾದ!

ಸಮಾಜವಾದ ಅಥವಾ ಸಾವು!
ಪಿತೃಭೂಮಿ ಅಥವಾ ಸಾವು!
ನಾವು ಗೆದ್ದೆ ಗೆಲ್ಲುವೆವು!

-ಫಿಡೆಲ್‌ಕಾಸ್ಟ್ರೋರವರ
ಭಾಷಣದ ಕೊನೆಯಲ್ಲಿ

ಸಮಾರಂಭದಲ್ಲಿ ಕಾಸ್ಟ್ರೋರವರೊಂದಿಗ ಸಿಪಿಐ(ಎಂ)ಪ್ರಧಾನಕಾರ್ಯದರ್ಶಿ ಹಾಗೂ ಭಾರತದ ನಿಯೋಗದ ಮುಖಂಡ ಹರ್ಕಿಶನ್‌ಸಿಂಗ್ ಸುರ್ಜಿತ್.

"10105 ಟನ್ ಗೋಧಿಯೆಂದರೆ ಎಷ್ಟಾಗುತ್ತ ಗೊತ್ತೇ? ಇಷ್ಟನ್ನು ಪಡೆಯಲು ನಾವು 10,500 ಎಕರೆ ಕಬ್ಬು ಬೆಳೆದು ಅವರಿಂದ ಸಕ್ಕರೆ ಉತ್ಪಾದಿಸಬೇಕು. ಬಹುಶಃ ಭಾರತದಲ್ಲಿ ಇಷ್ಟು ಗೋಧಿ ಬೆಳೆಯಲು ಎಷ್ಟು ಶ್ರಮ ಹಾಕಬೇಕು ಎಂದು ನಮಗೆ ಗೊತ್ತಿಲ್ಲ. ಆದರೆ ಈ ಉತ್ಪಾದನೆಯಲ್ಲಿ ಎಷ್ಟು ಜನ ಭಾಗವಹಿಸಿದ್ದರೆಂದು ನಾವು ಊಹಿಸಬಲ್ಲೆವು."

ನಂತರ ಅದನ್ನು ಪಂಜಾಬಿನಿಂದ ಹಲ್ದಿಯಾ ಬಂದರಿಗೆ 1700 ಕಿ.ಮೀ. ದೂರ ರೈಲಿನಲ್ಲಿ ತಂದರು. ಅದನ್ನು ಹಡಗಿಗೆ ತುಂಬಲು 15 ದಿನ ಹಿಡಿಯಿತು. ನೂರಾರು ಕಾರ್ಮಿಕರ ಶ್ರಮ ಹಿಡಿಯಿತು. ಅಲ್ಲಿಂದ 37 ದಿನ ಹಿಂದೂ ಮಹಾಸಾಗರ, ಆಫ್ರಿಕಾಖಂಡದ ದಕ್ಷಿಣಭಾಗ, ಅಟ್ಲಾಂಟಿಕ್ ಸಾಗರದ ಮೂಲಕ 20 ಸಾವಿರ ಕಿ. ಮೀ. ಕ್ರಮಿಸಿ ಹವಾನಾ ತಲುಪಿತು.

ಈ 10105 ಟನ್ ಗೋಧಿಯಿಂದ 100 ಗ್ರಾಂನ 8 ಕೋಟಿ ಉತ್ತಮ ಬ್ರೆಡ್ ಸುರಳಿಗಳನ್ನು ತಯಾರಿಸಬಹುದು. ಅಂದರೆ ಪ್ರತಿಯೊಬ್ಬ ನಾಗರಿಕನಿಗೆ ಒಂದು ವಾರ ತಿನ್ನಲು ಸಾಕಾಗುವಷ್ಟು 10105 ಟನ್ ಗೋಧಿ ಎನ್ನುವುದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಈ ಕೊಡುಗೆಯ ಮಹತ್ವ ಏನು ಎಂದು ಇದು ತೋರಿಸುತ್ತದೆ".

ಈ ಲೆಕ್ಕಾಚಾರ ಸ್ವಾತಂತ್ರ್ಯ, ಸಮಾಜವಾದಕ್ಕಾಗಿ ಹೋರಾಟನಿರತರಾಗಿರುವ ವೀರ ಕ್ಯೂಬನ್ನರ ಪ್ರೀತಿಯ ಮುಖಂಡ ಮತ್ತದ್ದಿ ಫಿಡೆಲ್‌ಕಾಸ್ಟ್ರೋರವರದ್ದು. ಸಂದರ್ಭ, ಡಿಸೆಂಬರ್ 28, 1992 ಭಾರತದ ಜನರಿಂದ 10105 ಟನ್ ಗೋಧಿ ಹೊತ್ತು 'ಕೆರೇಬಿಯನ್ ಪ್ರಿನ್ಸೆಸ್' ಹಡಗು ಕ್ಯೂಬಾದ ರಾಜಧಾನಿ ಹವಾನಾ ತಲುಪಿದಾಗ ನಡೆದ ಸಮಾರಂಭ.

ಈ ಸಮಾರಂಭದ ಮೊದಲು ಅದೇ ಬಂದರಿನಲ್ಲಿ ಕಾಸ್ಟ್ರೋ ಇನ್ನೂ ಎರಡು ಇಂತಹ ಸಮಾರಂಭಗಳಲ್ಲಿ ಭಾಗವಹಿಸಿ ಸ್ಪೇನಿನಿಂದ ಬಸ್ಸುಗಳು ಹಾಗೂ ಇತರ ಸಾಮಗ್ರಿಗಳ ಕೊಡುಗೆಯನ್ನು ಸ್ವೀಕರಿಸಿದ ಕ್ಯಾಸ್ಟ್ರೋ 'ನಮ್ಮ ಸಮಾಜವಾದ ರಕ್ಷಣೆಯ ಹೋರಾಟವೂ ಅಂತರ್‍ರಾಷ್ಟ್ರೀಯ ಹೋರಾಟ. ಇದರಲ್ಲಿ ನಾವು ಒಂಟಿಯಲ್ಲ' ಎಂದು ಹೇಳಿದರು. ಸಾವಿರ ಸಾವಿರ ವರ್ಷಗಳ ಮಹಾನ್ ನಾಗರಿಕತೆಯ ದೇಶ, ಯುರೋಪು ಇನ್ನೂ ಆರಂಭಾವಸ್ಥೆಯಲ್ಲಿದ್ದಾಗ ಮಹಾನ್ ನಾಗರಿಕತೆ ಬೆಳೆದಸಿದ್ದ ದೇಶ ಭಾರತ ಎನ್ನುತ್ತಾ ವಸಾಹತುಶಾಹಿಯಿಂದ ವಿಮೋಚನೆಗಾಗಿ ಹಾಗೂ ಇತರ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಬೃಹತ್ ದೇಶ ಭಾರತ ನಡೆಸಿದ ಹೋರಾಟಗಳನ್ನು ನೆನಪಿಸಿಕೊಂಡು 81 ಕೋಟಿ 60 ಲಕ್ಷಕ್ಕೂ ಭಾರತೀಯ ನಿಲುವು ನಮಗೆ ಬಹಳ ನೈತಿಕ ಬೆಲೆಯುಳ್ಳ ಮಹತ್ವದ ಸಂಗತಿ" ಎಂದ ಕಾಸ್ಟ್ರೋರವರ ಭಾಷಣದ ಇತರ ಕೆಲವು ಅಂಶಗಳು.

ಹವಾನಾ ಬಂದರಿನಲ್ಲಿ ನಡೆದ ಸಮಾರಂಭದಲ್ಲಿ ಕ್ಯಾಸ್ಟ್ರೋ, ಸುರ್ಜಿತ್, ಎಂ.ಎ. ಬೇಬಿ ಮತ್ತು ಇತರರು.



...ಅದೇ "ರಿಗ್ಗಿಂಗ್" ಪ್ರಯತ್ನಗಳು

...ಮ

...ಘೋರವಾಗಿ ...ಲ್ಲಿ ...ರಂಗ ...ತ್ರ ಸರ್ಕಾರದ ...ಹನ್‌ದೇಬ್ ...ಕಾರಿಗಳನ್ನು ... ನೀಡುವಂತೆ ...ಂದ್ರಗಳಿಂದ ... ಬಂದೂಕಿನ ...ವ್ರದ ಪ್ರಾರಾ ... ನಿಲ್ಲುವಂತೆ ...ಾವಣೆಯಲ್ಲಿ ...ತಗಳಿಸಿತ್ತು. ... ಶೇ. 48 ...ವಾಯಿತು.

...ಡವ

...ೂಟ ಅಧಿ-...ಂಡವವಾ- ... ನೂರಾರು ...ಹರಿಯಿತು. ... ಪ್ರಾರಣ-...ರ್ವದಲ್ಲೇ ... ಬುಡಕಟ್ಟು ... ಅತ್ಯಾಚಾರ- ... ರೈಫಲ್‌ನ ...ಹಿಳೆಯರ ... ಬೇರೇಂದ್ರ

ಮಾನುವಿನಲ್ಲಿ 13 ಜನ ಸಿಪಿಐ(ಎಂ) ಕಾರ್ಯಕರ್ತರನ್ನೂ ಭೀಕರವಾಗಿ ಕೊಲೆ ಮಾಡಲಾಯಿತು. ರಾಜೀವ್‌ಗಾಂಧಿಯ ಹತ್ಯೆಯ ನಂತರದಲ್ಲೂ ಈ ಹಿಂಸಾಚಾರ ಇನ್ನೊಮ್ಮೆ ತಾಂಡವವಾಡಿತು. ಕಾಂಗ್ರೆಸ್ ಕುಕೃತ್ಯಗಳ ಯಾದಿ ಇನ್ನೂ ದೊಡ್ಡದಾಗೇ ಇದೆ.

ಫೆಬ್ರವರಿ 1988 ರಿಂದ ರಾಜ್ಯದಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಯಲೇ ಇಲ್ಲ. ಉಪಚುನಾವಣೆ 1989 ಮತ್ತು 1991 ರ ಲೋಕಸಭಾ ಚುನಾವಣೆಗಳಲ್ಲಿ ವ್ಯಾಪಕವಾಗಿ ಅಕ್ರಮಗಳನ್ನು ನಡೆಸಲಾಯಿತು.

ಹಿರಿಯ ಐ.ಎ.ಎಸ್. ಅಧಿಕಾರಿ ಶ್ರೀ ಸುಬ್ರಮಣ್ಯಮ್ ಅವರ ಮೇಲೆ ಅಗರ್ತಲದಲ್ಲಿ ತೀವ್ರ ಹಲ್ಲೆ ನಡೆಸಲಾಯಿತು. ನ್ಯಾಯಾಧೀಶರುಗಳಿಗೆ ಬೆದರಿಕೆ ಹಾಕಲಾಯಿತು.

ಅಧಿಕಾರಿಗಳನ್ನು ಕಂಗಾಲುಗೊಳಿಸಲಾಯಿತು. ಒಂದು ಹಂತದಲ್ಲಿ 1990 ರಲ್ಲಿ ರಾಜ್ಯದ ಒಂಬತ್ತು ಐ.ಎ.ಎಸ್. ಅಧಿಕಾರಿಗಳು ರಾಜ್ಯದಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸುವುದು ಸಾಧ್ಯವಿಲ್ಲವೆಂದು ಮುಖ್ಯ ಕಾರ್ಯದರ್ಶಿಗಳಿಗೆ ಬರೆಯಬೇಕಾಯಿತು.

ಈಗ ಈ ಚುನಾವಣೆಯಲ್ಲೂ ಮತ್ತೆ ಅಕ್ರಮಗಳನ್ನು ನಡೆಸುವ ಯೋಜನೆಗಳು ತಯಾರಾಗಿದೆ. ಅದೇ ಸಂತೋಷ್ ಮೋಹನ್‌ದೇಬ್ ಈ ಯೋಜನೆಗಳ ಮುಂದಾಳತ್ವವಹಿಸುತ್ತಿದ್ದಾರೆ. ಅವರ ಹಿಂಬಾಲಕ ಮುಖ್ಯಮಂತ್ರಿ ಸಮೀರ್ ಬರ್ಮನ್ ಸಹ-ನೇತೃತ್ವ ನೀಡುತ್ತಿದ್ದಾನೆ.

ಪ್ರತಿರೋಧ ನೀಡುವ ದೃಢ ನಿರ್ಧಾರ

ಸಿಪಿಐ(ಎಂ) ಮತ್ತು ಎಡರಂಗದ ಚುನಾವಣಾ ಪ್ರಚಾರಕರ ಮೇಲೆ ಹಲ್ಲೆಯ ವರದಿಗಳು ಆಗಲೇ ಬರುತ್ತಿವೆ ಆದರೆ ರಾಜ್ಯದ ಜನತೆ ಈ ಎಲ್ಲಾ ದಮನಕಾರಿ ಕ್ರಮಗಳನ್ನು ಎದುರಿಸಿ ಚುನಾವಣೆಗಳನ್ನು ನ್ಯಾಯಯುತಗೊಳಿಸಲು ಮುಂದೆ ಬರುತ್ತಿದ್ದಾರೆ ಎಲ್ಲ ಬೆದರಿಕೆಗಳನ್ನು ಎದುರಿಸಿ ಜನ ಸಿಪಿಐ(ಎಂ) ಮತ್ತು ಎಡರಂಗದ ಪ್ರಚಾರದ ಸಭೆಗಳಿಗೆ ಬರತೊಡಗಿದ್ದಾರೆ. ಜನವರಿ 7 ರಂದು ಗಣಮುಕ್ತಿ ಪರಿಷತ್ ಅಗರ್ತಲಾದಲ್ಲಿ ರ್‍ಯಾಲಿಯೊಂದನ್ನು ಏರ್ಪಡಿಸಿತ್ತು. ಈಗಾಗಲೇ ಡಿ.ವೈ.ಎಫ್.ಐನ ನಾಯಕರೊಬ್ಬರ ಬಲಿಯಾಗಿದೆ.

ಜನರ ದೃಢ ನಿರ್ಧಾರ ಭಯೋತ್ಪಾದನೆಯಿಂದ ತೀವ್ರವಾಗಿ ಪೀಡಿತವಾಗಿರುವ ಪ್ರದೇಶಗಳಿಗೂ ಎಡರಂಗ ಪ್ರಚಾರ ಕೊಂಡೊಯ್ಯಲು ನೆರವಾಗುತ್ತಿದೆ. ಸಿಪಿಐ(ಎಂ) ತ್ರಿಪುರಾದಲ್ಲಿ ಜನರ ಮತದಾನದ ಹಕ್ಕನ್ನು ಸಂರಕ್ಷಿಸಲು ಎಂತಹ ತ್ಯಾಗಕ್ಕೂ ಸಿದ್ಧವಿದೆ.

ಅಯೋಧ್ಯೆಯ ಘಟನೆಗಳಿಂದ ದುರ್ಬಲವಾಗಿರುವ ದೇಶದ ಐಕ್ಯತೆಯನ್ನು ಕಾಂಗ್ರೆಸ್ ಸರ್ಕಾರ ಇನ್ನೂ ದುರ್ಬಲಗೊಳಿಸಲು ಹೊರಟಿರುವಂತಿದೆ. ಪ್ರತಿಗಾಮಿ ಶಕ್ತಿಗಳಿಗೆ ನೆರವು ನೀಡಿ ಕೋಮುವಾದ ಮತ್ತು ವಿಚ್ಛಿದ್ರಕಾರಿ ಶಕ್ತಿಗಳನ್ನು ಬೆಳೆಸುವ ಪ್ರಯತ್ನವನ್ನೂ ಅದು ಮಾಡುತ್ತಿದೆ.

ತ್ರಿಪುರಾವನ್ನೂ ಬೆಂಬಲಿಸಬೇಕು

ಸಿಪಿಐ(ಎಂ)ನ ಕೇಂದ್ರ ಸಮಿತಿ ತ್ರಿಪುರಾ ರಾಜ್ಯ ಘಟಕದ ವೀರ ಹೋರಾಟದಲ್ಲಿ ನೆರವು ನೀಡುವಂತೆ ಕರೆ ನೀಡಿದೆ.

ಪಂಜಾಬಿನಲ್ಲಿ ಆಗಲೇ 8000 ರೂಪಾಯಿಗಳ ಸಂಗ್ರಹವಾಗಿದೆ. ಕೇರಳ ಐದು ಲಕ್ಷ ರೂಪಾಯಿಗಳ ಕೊಡುಗೆ ನೀಡಿದೆ. ಪಶ್ಚಿಮಬಂಗಾಳದ ಜನ ತ್ರಿಪುರಾದಲ್ಲಿ ಪಕ್ಷಕ್ಕೆ ನೆರವು ನೀಡುವ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದಾರೆ. ತ್ರಿಪುರಾದಲ್ಲಿ ಪ್ರಜಾಪ್ರಭುತ್ವ ಗೆಲ್ಲಲು ಎಲ್ಲ ಪ್ರಜಾಪ್ರಭುತ್ವವಾದಿಗಳ ನೆರವು ನೀಡುವ ಅವಶ್ಯಕತೆ ಇದೆ.

ಪ್ರೀತಿ ಇಲ್ಲದ ಮೇಲೆ

ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೆ?
ಮೋಡ ಕಟ್ಟೀತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ?

ಪ್ರೀತಿ ಇಲ್ಲದ ಮೇಲೆ
ಮಾತಿಗೆ ಮಾತು ಕೂಡೀತು ಹೇಗೆ?
ಅರ್ಥ ಹುಟ್ಟೀತು ಹೇಗೆ?
ಬರೀ ಪದಕ್ಕೆಪದ ಜತೆಗಿದ್ದ ಮಾತ್ರಕ್ಕೆ
ಪದ್ಯವಾದೀತು ಹೇಗೆ?

ಪ್ರೀತಿ ಇಲ್ಲದ ಮೇಲೆ
ದಕ್ಷಿಣಾಫ್ರಿಕದ ಕಗ್ಗತ್ತಲ್ಲಿಗೆ
ಬೆಳಕು ಮೂಡೀತು ಹೇಗೆ?
ಸೆರೆಮನೆಯ ಕಂಬಿಯ ನಡುವೆ
ಕಮರುವ ಕನಸು ಕೊನರೀತು ಹೇಗೆ?
ಬಿಳಿ ಜನರ ಕರಾಳ ಕಪ್ಪು ಹೃಯಕ್ಕೆ
ಕ್ರಿಸ್ತನ ಕರುಣೆ ಅರ್ಥವಾದೀತು ಹೇಗೆ!

ಪ್ರೀತಿ ಇಲ್ಲದ ಮೇಲೆ
ಸಂಶಯದ ಗಡಿಗಳುದ್ದಕ್ಕು
ಸಿಡಿಗುಂಡುಗಳ ಕದನ ನಿಂತೀತು ಹೇಗೆ?
ಜಾತಿ ಮತ ಭಾಷೆ ಬಣ್ಣಗಳ ಗೋಡೆಯ ನಡುವೆ
ನರಳುವ ಹಾಡು ತಪ್ಪೀತು ಹೇಗೆ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ?

- ಜಿ.ಎಸ್.ಶಿವರುದ್ರಪ್ಪ



ತ್ರಿಪುರಾ ಚುನಾವಣೆಗಳು ಮುಕ್ತ ರೀತಿಯಲ್ಲಿ ನಡೆಯುವುವೆ?

ಕಾಂಗ್ರೆ ಅತೃಪ್ತರಿಂದ ಹಿಂಸಾಚಾರ

ಈಶಾನ್ಯದ ಪುಟ್ಟ ಗುಡ್ಡಗಾಡು ರಾಜ್ಯ ತ್ರಿಪುರಾ ಇದೀಗ ಮತ್ತೆ ಸದಾ ಸುದ್ದಿಗೆ ಗ್ರಾಸವಾಗುತ್ತಿದೆ. ಫೆಬ್ರವರಿ ಎರಡನೇ ವಾರದಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿರುವ ಸಂದರ್ಭದಲ್ಲಿ ಸಂಭವಿಸುತ್ತಿರುವ ಹಿಂಸಾಚಾರಗಳು ಇದಕ್ಕೆ ಮುಖ್ಯ ಕಾರಣ. ಜನವರಿ 20 ಮತ್ತು 21 ರಂದು ತ್ರಿಪುರದಾದ್ಯಂತ ವ್ಯಾಪಕ ಹಿಂಸೆ, ದೊಂಬಿಗಳು ನಡೆದವು. ಪ್ರಸಕ್ತ ಆಳುವ ಕೂಟದ ಮುಖ್ಯ ಅಂಗಪಕ್ಷವಾದ ಕಾಂಗ್ರೆಸ್(ಐ)ನ ಅಧಿಕೃತ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಗೂ ಇದಕ್ಕೂ ಸಂಬಂಧವಿದೆ ಅಂದರೆ ಸ್ಪರ್ಧಿಸಲು ಟಿಕೆಟ್ ಸಿಗದ ಕಾಂಗ್ರೆಸ ಅತೃಪ್ತರು ಈ ಗಲಭೆಗಳನ್ನು ಸ್ಫೋಟಿಸಿದರು. ಕೇಂದ್ರ ಸಚಿವ ಸಂತೋಷ್ ಮೋಹನ್‌ದೇಶ್ ಮತ್ತು ಮುಖ್ಯಮಂತ್ರಿ ಸಮೀರ ರಂಜನ್ ಬರ್ಮನ್ ಇಡೀ ಪಟ್ಟಿಯಲ್ಲಿ ಲೇಪವೆಸಗಿ ರಾಜ್ಯದ ಮುಖ್ಯ ಕಾಂಗ್ರೆ ನಾಯಕರಿಗೆ ಟಿಕೆಟ್ ನಿರಾಕರಿಸಿದ್ದಾರೆ ಎಂದು ಈ ಅತೃಪ್ತರು ಆರೋಪಿಸಿದ್ದಾರೆ ಎಂದು ಐ.ಎನ್.ಎಸ್ ವರದಿ ಮಾಡಿದೆ.

ಕಾಂಗ್ರೆ ಟಿಕೆಟ್ ಸಿಗದವರಲ್ಲಿ ಪಶುಸಂಗೋಪನಾ ಸಚಿವ ಬಿಲ್ಲಾಲ್ ಮಿಯಾನ್ ಮತ್ತು ಇಬ್ಬರು ಹಾಲಿ ಶಾಸಕರು ಸೇರಿದ್ದಾರೆ. 20 ಮಂದಿ ಹೊಸಬರಿಗೆ ಟಿಕೆಟ್ ನೀಡಲಾಗಿದೆ. ಅವರಲ್ಲಿ ಮುಖ್ಯಮಂತ್ರಿ ಮಗ ಸುದಿತ್ ಬರ್ಮನ್ ಕೂಡ ಸೇರಿದ್ದಾನೆ. ಪ್ರದೇಶ ಕಾಂಗ್ರೆ ಅಧ್ಯಕ್ಷ ರಾಧಿಕ ರಂಜನ್ ಗುಪ್ತಾಗೆ ರಾಜಧಾನಿ ಅಗರ್ತಲಾದ ಒಂದು ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ನೀಡದೆ ಬೇರೆ ಕಡೆ ಅವಕಾಶ ಕಲ್ಪಿಸಲಾಗಿದೆ. ಈ ಎಲ್ಲಾ ಅಂಶಗಳು ಈಗಾಗಲೇ ಒಳಜಗಳಗಳಿಂದ ಜರ್ಝರಿತವಾಗಿರುವ ರಾಜ್ಯ ಕಾಂಗ್ರೆ ಪಕ್ಷದಲ್ಲಿ ಅತೃಪ್ತಿಯ ಅಲೆಗಳನ್ನು ಎಬ್ಬಿಸಲು ಕಾರಣವಾದವು. ಎಲ್ಲಾ ಉಪವಿಭಾಗಗಳಲ್ಲಿ ಹಿಂಸಾತ್ಮಕ ಪ್ರತಿಕ್ರಿಯೆ ಕಂಡುಬಂತು. ಅತ್ಯಾಚಾರ ಸಹಿತ ಅನೇಕ ಹಗರಣಗಳಲ್ಲಿ ಪಾಲ್ಗೊಂಡಿರುವ ಜಹರ್ ಪಹಾಗೆ ಮತ್ತೆ ಸ್ಪರ್ಧಿಸಲು ಟಿಕೆಟ್ ನೀಡದ್ದನ್ನು ಪ್ರತಿಭಟಿಸಿದ ಕೋಪೋದ್ರಿಕ್ತ ಕಾಂಗ್ರೆ ಕಾರ್ಯಕರ್ತರು ಅಮರಪುರ ವಿಭಾಗ ಮತ್ತು ರಾಜ್ಯದ ಇತರ ಭಾಗದೊಂದಿಗೆ ಸಂಪರ್ಕ ಕಲ್ಪಿಸುವ ಸೇತುವೆಯನ್ನೇ ಸುಟ್ಟು ಹಾಕಿದರು. ಧರ್ಮನಗರ ಉಪವಿಭಾಗದಲ್ಲಿ ಅಧಿಕೃತ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವುದನ್ನು ತಡೆಯಲು ಅತೃಪ್ತರು ಕಾರ್ಯಕ್ರಮ ಹಾಕಿಕೊಂಡಿದ್ದರಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಪಕ್ಷದ ಹೈಕಮಾಂಡ್ ಕಣಕಿಳಿಸಿರುವ ಎಲ್ಲಾ ಅಧಿಕೃತ ಅಭ್ಯರ್ಥಿಗಳ ವಿರುದ್ಧ ಕಾಂಗ್ರೆ ಅತೃಪ್ತರು ನಾಮ ಪತ್ರಗಳನ್ನು ಸಲ್ಲಿಸಿದ್ದಾರೆ. ಅವರ ಮನವೊಲಿಸಲಿಕ್ಕಾಗಿ ಕಾಂಗ್ರೆ ವೀಕ್ಷಕ ಆಸ್ಕರ್ ಫೆರ್ನಾಂಡಿಸ್ ತ್ರಿಪುರಾಕ್ಕೆ ಧಾವಿಸಿದ್ದಾರೆ.

ಒಂದು ಕಡೆ ಮತ್ತೆ ಅಧಿಕಾರವನ್ನು ಕಬಳಿಸಲಿಕ್ಕಾಗಿ ಕಾಂಗ್ರೆ-ಟಿ.ಯು.ಜೆ.ಎಸ್. ಮೈತ್ರಿಕೂಟ ಭದ್ರತಾ ಪಡೆಗಳನ್ನು ಬಳಸಿಕೊಳ್ಳುವುದು ಸೇರಿದಂತೆ ಹಿಂಸಾಚಾರದಲ್ಲಿ ತೊಡಗಿದೆ. ಇನ್ನೊಂದೆಡೆ ಕಾಂಗ್ರೆಸ ಗುಂಪು ಕಲಹ ವಾತಾವರಣವನ್ನು ಇನ್ನಷ್ಟು ಕೆಡಿಸಿದೆ. ಹೀಗಾಗಿ ಚುನಾವಣೆ ಶಾಂತ ಹಾಗೂ ಮುಕ್ತ ರೀತಿಯಲ್ಲಿ ನಡೆಯುತ್ತದೋ ಇಲ್ಲವೋ ಎನ್ನುವ ಭೀತಿ ಆತಂಕ ಪ್ರಜಾಪ್ರಭುತ್ವದಲ್ಲಿ ನೈಜ ಕಳಕಳಿ ಉಳ್ಳವರನ್ನು ಕಾಡತೊಡಗಿದೆ.

ಅಧಿಕಾರಿಯ ಗಮನಕ್ಕೆ

ಸಿಪಿಐ(ಎಂ) ನಾಯಕರಾದ ನೃಪೇನ್‌ಚಕ್ರವರ್ತಿ ಮತ್ತು ಮಾಣಿಕ್ ಸರ್ಕಾರ್ ಜನವರಿ 20 ರಂದು ಅಗರ್ತಲಾದಲ್ಲಿ ಉಪ ಮುಖ್ಯ ಚುನಾವಣಾ ಕಮಿಷನರ್ ಡಿ. ಎಸ್. ಬಗ್ಗಾ ಅವರನ್ನು ಭೇಟಿಯಾಗಿದ್ದರು. ವಿವಿಧ ಕ್ಷೇತ್ರಗಳಲ್ಲಿ ಮುಂದುವರಿಯುತ್ತಿರುವ ಹಿಂಸಾಚಾರ ಮತ್ತು ಚುನಾವಣಾ ನಿಯಮಗಳನ್ನು ಉಲ್ಲಂಘಿಸುವಂಥ ಅಕ್ರಮ ಚಟುವಟಿಕೆಗಳ ಬಗ್ಗೆ ಅವರು ಅಧಿಕಾರಿಗೆ ವಿವರಣೆ ನೀಡಿದರು.

ಚುನಾವಣೆಯಲ್ಲಿ ಸ್ಪರ್ಧಿಸಿರುವ ಎಲ್ಲಾ ಪ್ರತಿಪಕ್ಷಗಳನ್ನು ದೂರನ್ನು ಸಲ್ಲಿಸುವ ಅನುಕೂಲವಾಗುವಂತೆ ಮತದಾನ ನಡೆಯುವ ಫೆಬ್ರವರಿ 15ಕ್ಕಿಂತ ಒಂದು ದಿನ ಮುನ್ನ ಕೇಂದ್ರೀಯ ವೀಕ್ಷಕರನ್ನು ರಾಜ್ಯಕ್ಕೆ ಕಳಿಸಬೇಕು ಎಂದು ಉಭಯ ನಾಯಕರು ಬಗ್ಗಾರನ್ನು ವಿನಂತಿಸಿದರು.

ಕಾಂಗ್ರೆ-ಟಿ.ಯು.ಜೆ.ಎಸ್. ಮೈತ್ರಿಕೂಟದ ಐದು ವರ್ಷಗಳ ಆಡಳಿತ ಅವಧಿಯಲ್ಲಿ ನಡೆದ ಫ್ಯಾಸಿಸ್ಟ್ ರೀತಿಯ ಹಿಂಸಾಚಾರದ ಹಾಗೂ ಮಹಿಳೆಯರ ಮೇಲೆ ನಡೆದ ಅತ್ಯಾಚಾರಗಳ ಬಗೆಗಿನ ವರದಿಗಳನ್ನು ಕೂಡ ಉಪಮುಖ್ಯ ಚುನಾವಣಾಧಿಕಾರಿಗೆ ಸಲ್ಲಿಸಲಾಯಿತು. ರಾಜ್ಯದಲ್ಲಿನ ಭಯಾನಕ ಪರಿಸ್ಥಿತಿಯ ತೀಕ್ಷ್ಣತೆ ಬಗ್ಗೆ ಈ ಉನ್ನತಾಧಿಕಾರಿಯ ಗಮನ ಸೆಳೆಯುವುದು ಅದರ ಉದ್ದೇಶವಾಗಿತ್ತು.

ಕಾರ್ಯಕರ್ತನ ಹತ್ಯೆ

ರಾಜ್ಯದ ತೆಲಿಯ ಮುರಾ ಪ್ರದೇಶದ ಡಿವೈಎಫ್ಐ ನಾಯಕ ಬಾಬೂಲಾಲ್ ಘೋಷರನ್ನು ಕಾಂಗ್ರೆ ದುಷ್ಕರ್ಮಿಗಳು ಜನವರಿ 24 ರಂದು ಹತ್ಯೆ ಮಾಡಿದರು. ಈ ದಾಳಿಯಲ್ಲಿ ಇನ್ನಿಬ್ಬರು ಡಿ.ವೈ.ಎಫ್.ಐ ಕಾರ್ಯಕರ್ತರು ಗಾಯಗೊಂಡರು. ಸಿಪಿಐ(ಎಂ) ಚುನಾವಣಾ ಸಭೆಯೊಂದರಿಂದ ಹಿಂದಿರುಗಿದ ನಂತರ ಈ ಘಟನೆ ನಡೆಯಿತು.

ಅಗರ್ತಲಾದಿಂದ ಎಂಟು ಕಿ.ಮೀ ದೂರದಲ್ಲಿರುವ ರಾಣಿದ್‌ಬಜಾರ್‌ನಲ್ಲಿ ಸಿಪಿಐ(ಎಂ) ಕಚೇರಿ ಮೇಲೆ ಆಕ್ರಮಣ ಮಾಡಿದ ಕಾಂಗ್ರೆ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಮತ್ತು ಸಿಆರ್‌ಪಿಎಫ್ ಸಿಬ್ಬಂದಿಗಳು ಗಾಳಿಯಲ್ಲಿ 27 ಸುತ್ತು ಗುಂಡುಹಾರಿಸಿದ ಘಟನೆ ಜ. 24 ರಂದು ನಡೆಯಿತು.

ಸಾಮೂಹಿಕ ನಿಧಿ ಸಂಗ್ರಹ

ತ್ರಿಪುರಾದ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಚುನಾವಣಾ ಸಮಯದಲ್ಲಿ ನೆರವಾಗುವ ಉದ್ದೇಶದಿಂದ ಸಿಪಿಐ(ಎಂ) ಪಶ್ಚಿಮಬಂಗಾಳ ಘಟಕ ಜನವರಿ 17 ರಂದು ರಾಜ್ಯಾದ್ಯಂತ 'ಸಾಮೂಹಿಕ ನಿಧಿ ಸಂಗ್ರಹ' ಕಾರ್ಯಕ್ರಮವನ್ನು ನಡೆಸಿತು. ಪ್ರಚಾರಕ್ಕಾಗಿ ಪುಸ್ತಿಕೆಯ ಒಂದು ಲಕ್ಷ ಪ್ರತಿಗಳನ್ನು ಮುದ್ರಿಸಲಾಗಿತ್ತು. ಕೋಮುಸೌಹಾರ್ದಕ್ಕಾಗಿ ನಡೆದ ರ‍್ಯಾಲಿಯಲ್ಲಿ ಕೂಡ ತ್ರಿಪುರಾ ನಿಧಿಯನ್ನು ಸಂಗ್ರಹಿಸಲಾಯಿತು.

ತಮಿಳುನಾಡಿನಲ್ಲಿ ಮಾನವ ಸರಪಳಿ

ಕೋಮು ಸೌಹಾರ್ದ ಮತ್ತು ಶಾಂತಿಗಾಗಿ ತಮಿಳುನಾಡಿನಾದ್ಯಾಂತ ಜನವರಿ 20 ರಂದು ಮಾನವ ಸರಪಳಿ ಕಾರ್ಯಕ್ರಮಗಳು ನಡೆದವು. ರಾಷ್ಟ್ರೀಯರಂಗ ಮತ್ತು ಎಡರಂಗಗಳು ಇದಕ್ಕೆ ಕರೆನೀಡಿದ್ದವು. ಡಿ.ಎಂ.ಕೆ., ಸಿಪಿಐ(ಎಂ)., ಸಿಪಿಐ., ಜನತಾದಳ, ಫಾರ್ವರ್ಡ್ ಬ್ಲಾಕ್ಸ್ ಸಾವಿರಾರು ಕಾರ್ಯಕರ್ತರು ಹಾಗೂ ವಿವಿಧ ರಂಗಗಳ ಸಾರ್ವಜನಿಕರು ಭಾಗವಹಿಸಿದ್ದರು. ಭಾರೀ ಸಂಖ್ಯೆಯ ಮುಸ್ಲಿಮರು ಅತ್ಯಂತ ಉತ್ಸಾಹ ಹಾಗೂ ಸ್ವಯಂ ಸ್ಫೂರ್ತಿಯಿಂದ ಪಾಲ್ಗೊಂಡಿದ್ದು ಕಾರ್ಯಕ್ರಮದ ವಿಶೇಷವಾಗಿತ್ತು.

ರಾಜಧಾನಿ ಮದ್ರಾಸ್ ಎರಡು ಸ್ಥಳಗಳಲ್ಲಿ ಸರಪಳಿಯನ್ನು ಆಯೋಜಿಸಲಾಗಿತ್ತು. ಅಣ್ಣಾ ಫ್ಲೈ ಓವರ್‌ನಿಂದ ಮೌಂಟ್ ರಸ್ತೆಯಲ್ಲಿರುವ ಸೇತುವೆತನಕ ರಚಿಸಲಾದ ಮಾನವ ಸರಪಳಿಯಲ್ಲಿ ಡಿ.ಎಂ.ಕೆ. ಅಧ್ಯಕ್ಷ ಕರುಣಾನಿಧಿ, ಸಿಪಿಐ(ಎಂ) ನಾಯಕರಾದ ನಲ್ಲಶಿವನ್ ವರದರಾಜನ್, ಪಾಪ್ಪ ಉಮಾನಾಥನ್, 'ಫ್ರಂಟ್‌ಲೈನ್' ಸಂಪಾದಕ ಎನ್. ರಾಮ್ ಮತ್ತು ಅನೇಕ ಕ್ರೈಸ್ತ ಪಾದ್ರಿಗಳು ಪಾಲ್ಗೊಂಡಿದ್ದರು.

ಮದ್ರಾಸ್‌ನಗರದ ಉಪನಗರಗಳ ಏಳು ವಿವಿಧ ಸ್ಥಳಗಳಲ್ಲಿ ಮಾನವಶೃಂಖಲೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಜನರು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವ ಪಣ ತೊಟ್ಟರು.

ರಾಜ್ಯದ ಇತರ ಭಾಗಗಳಲ್ಲಿ ಒಟ್ಟು 400 ಕ್ಕೂ ಹೆಚ್ಚು ಕಡೆ ಮಾನವ ಸರಪಳಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ರಾಷ್ಟ್ರೀಯ-ಪ್ರಾದೇಶಿಕ ಪತ್ರಿಕೆಗಳು ಹಾಗೂ ರೇಡಿಯೋ-ದೂರದರ್ಶನ ಈ ಎಲ್ಲಾ ಕಾರ್ಯಕ್ರಮಗಳಿಗೆ ಸಾಕಷ್ಟು ಪ್ರಚಾರ ನೀಡಿದವು.

ಅಯ್ಯೋ ಪಾಪ, ಮಮತಾ ಬ್ಯಾನರ್ಜಿ

ಪ್ರಧಾನಿ ಪಿ.ವಿ. ನರಸಿಂಹರಾವ್ ತಮ್ಮ ಸಚಿವ ಸಂಪುಟವನ್ನು ಇತ್ತೀಚೆಗೆ ಪುನರಚಿಸಿದಾಗ ಮಮತಾ ಬ್ಯಾನರ್ಜಿಯವರನ್ನು ಕೈಬಿಟ್ಟರು. ಇದು ಪತ್ರಿಕೆಗಳು ಹಾಗೂ ಇತರ ವಲಯಗಳಲ್ಲಿರುವ ಮಮತಾ ಬೆಂಬಲಿಗರಿಗೆ ಆಘಾತಕಾರಿ ವಿಚಾರವಾಗಿದೆ. ಹಲವು ಊಹಾಪೋಹಗಳಿಗೆ ಎಡೆ ಮಾಡಿಕೊಟ್ಟದ್ದು ಅವರ ತಮ್ಮ ಯೋಜನೆಗಳನ್ನು ಪುನರೂಪಿಸತೊಡಗಿದ್ದಾರೆ.

ಕೇಂದ್ರದ ಸಚಿವೆಯಾಗಿ ಅನುಭವಿಸುತ್ತಿದ್ದ ಸೌಲಭ್ಯಗಳು ಹಾಗೂ ಅನುಕೂಲತೆಗಳ ಜತೆ ಪತ್ರಿಕೆಗಳು ಸ್ಫೋಟಿಸಿದ್ದ 'ಬೆಂಕಿಯ ಉಂಡೆ' ಎಂಬ ಇಮೇಜ್‌ನ ದಿನಗಳು ಮುಗಿದುಹೋಗಿವೆ. ಈ ಎರಡರ 'ಶಕ್ತಿ'ಯಿಂದಾಗಿ ಆಕೆ ಜನರನ್ನು ಗೊಂದಲಕ್ಕೀಡು ಮಾಡುವದಲ್ಲದೆ ಸರಕಾರಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡುವುದು ಹಾಗೂ ಗೂಂಡಾಗಿರಿಯಲ್ಲಿ ತೊಡಗಿದ್ದರು. ಸಚಿವೆ ಸ್ಥಾನ ಕೈ ಬಿಟ್ಟಿರುವುದರಿಂದ ಮಮತಾಗೆ ಈಗ ತನ್ನ ಸ್ಥಾನಮಾನವನ್ನು ಉಳಿಸಿಕೊಳ್ಳುವುದು ಕಷ್ಟವಾಗಿದೆ.

ಆಕೆಗೆ ಉಳಿದಿರುವ ಅಧಿಕೃತ ಮಾರ್ಗಗಳು ಸೀಮಿತವಾಗಿವೆ. ಸರಕಾರಿ ಹಾಗೂ ಪೊಲೀಸ್ ಅಧಿಕಾರಿಗಳನ್ನು ಹೊಡೆದು ಕಚ್ಚಿದ ಹಾಗೂ ದಿವಂಗತ ಜಯಪ್ರಕಾಶ್ ನಾರಾಯಣ ಅವರ ಕಾರಿನ ಮೇಲೆ ನೃತ್ಯ ಮಾಡಿದ 'ವೈಭವ'ದ ಇತಿಹಾಸವಿರುವ ಇವರು ರಾಜ್ಯಪಾಲ ಹುದ್ದೆಗಂತೂ ಸೂಕ್ತ ವ್ಯಕ್ತಿಯಲ್ಲ. ಹಾಗಾಗಿ ಎ.ಐ.ಸಿ.ಸಿ (ಐ) ನಲ್ಲಷ್ಟೇ ಆಕೆಗೆ ಒಂದು ಸ್ಥಾನ ಸಿಗಬಹುದು. ಹಾಗೆ ಮಾಡಬೇಕಾದರೂ ಪ್ರದೇಶ ಯುವ ಕಾಂಗ್ರೆ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಡಬೇಕಾಗುತ್ತದೆ.

ಏ... ರೂ ಅನಧಿಕೃತ ಮಾರ್ಗಗಳು ಹಲವಷ್ಟಿವೆ. ಕೇಂದ್ರ ಸಂಪುಟದಲ್ಲಿ ಮಮತಾ ಬ್ಯಾನರ್ಜಿಗೆ ಸ್ಥಾನ ಸಿಗದಿರುವ ಬಗ್ಗೆ ಭಾರತೀಯ ಜನತಾಪಕ್ಷ ಬಹಳ ಚಿಂತೆಗೊಳಗಾಗಿದೆ. 'ಜನಸಮೂಹದ ಸಂಪರ್ಕವಿರುವ' ಮಮತಾರನ್ನು ಕೈಬಿಡುವ ಮೂಲಕ ತಾನು ಸಾರ್ವಜನಿಕ ಪ್ರತಿಕ್ರಿಯೆನ್ನು ನಿರ್ಲಕ್ಷಿಸುತ್ತದೆ ಎಂಬುದನ್ನು ಕಾಂಗ್ರೆ ಸಾಬೀತುಪಡಿಸಿದೆ' ಎಂದು ಬಿ.ಜೆ.ಪಿ. ಪಶ್ಚಿಮಬಂಗಾಳ ಘಟಕದ ಪ್ರಧಾನ ಕಾಯದರ್ಶಿ ಪರಶ್‌ದತ್ತಾ ಮತ್ತು ಕಾರ್ಯದರ್ಶಿ ಅನಿಂದ್ಯಾ ಗೋಪಾಲ್ ಮಿತ್ರಾ ಹೇಳಿದ್ದಾರೆ. ಅಯ್ಯೋ ಪಾಪ, ಮಮತಾಗೆ ಈ ಪರಿಸ್ಥಿತಿ ಬರಬಾರದಿತ್ತು. ಎನ್ನುವುದು ಬಿ.ಜೆ.ಪಿಯ ಪರಿತಾಪ. ಹಾಗಾಗಿ ' ಬಂದು ನಮ್ಮ ಪಕ್ಷವನ್ನೇ ಸೇರಿ' ಎಂದ ಆಕೆಗೆ ರಾಜ್ಯ ಬಿ.ಜೆ.ಪಿ. ಅಧ್ಯಕ್ಷರು ಆಹ್ವಾನಿಸಿದ್ದಾರೆ. ಬಿ.ಜೆ.ಪಿ. ನಿಮಗೆ ಸೂಕ್ತ ಜಾಗ ಎಂದು ಹೇಳಿದ್ದಾರೆ. ಇದರಿಂದ ಮಮತಾ ಬ್ಯಾನರ್ಜಿ ಬಿ.ಜೆ.ಪಿ. ಸೇರುವರೆ ಎಂಬ ಬಗ್ಗೆ ಊಹಾಪೋಹಗಳು ಸೃಷ್ಟಿಯಾಗಿವೆ.

ಅದಕ್ಕೆ ಪೂರಕವಾದ ಬೆಳವಣಿಗೆ ಹೀಗಿದೆ. ಸಿಪಿಐ(ಎಂ) ಮತ್ತು ಎಡಚಳುವಳಿಗೆ 'ಮೂರನೆ ಪರ್ಯಾಯ'ವನ್ನು ಕಟ್ಟಿ ಎಂದು ಮಮತಾರಿಗೆ ಸಲಹೆಗಾರರಂತೆ ವರ್ತಿಸುತ್ತಿರುವ ಕೆಲವು ಪತ್ರಿಕೆಗಳು ಆಕೆಗೆ ಸಲಹೆ ಮಾಡಿವೆ. ಈ 'ಮೂರನೇ ಪರ್ಯಾಯ ವೇದಿಕೆ' ಬಿ.ಜೆ.ಪಿ. ಸೇರಲು ಸಿದ್ಧತೆಯೇ ಎಂಬುದನ್ನು ಕಾಲವೇ ಹೇಳಬೇಕು. ಏನಿದ್ದರೂ ಕಾಂಗ್ರೆಸ ಅಂತಃಕಲಹವನ್ನು ಕಂಡರೆ ಆ ಸಾಧ್ಯತೆಯನ್ನು ತಳ್ಳಿ ಹಾಕಲಂತೂ ಆಗುವುದಿಲ್ಲ.

ತಮ್ಮ ಅಧಿಕಾರ ಹಾಗೂ ಸ್ಥಾನಮಾನವನ್ನು ಬಳಸಿಕೊಂಡು ಬಿ.ಜೆ.ಪಿ. ಮತ್ತು ಇತರ ಛಿದ್ರಕಾರಿ ಶಕ್ತಿಗಳಿಗೆ ಪರೋಕ್ಷವಾಗಿ ನೆರವು ನೀಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣ ಆಗಿರುವುದರಿಂದ ಮಮತಾ ಬ್ಯಾನರ್ಜಿ ಬಿ.ಜೆ.ಪಿ.ಯನ್ನು ಸೇರಬಹುದು ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯಪಟ್ಟಿರುವುದಾಗಿ ಐ.ಎನ್.ಎಸ್. ವರದಿಯೊಂದು ತಿಳಿಸಿದೆ.

ಎಂ.ಬಿ. ಸ್ಮಾರಕ ಭವನಕ್ಕೆ ಅಡಿಗಲ್ಲು

'ಮಾಕಿನೇನಿ ಬಸವಪುನ್ನಯ್ಯ ಸ್ಮಾರಕ ಭವನಂ'- ಜನವರಿ 21 ರಂದು ಹೈದರಾಬಾದ್‌ನಲ್ಲಿ ಈ ಕಟ್ಟಡ ಶಂಕುಸ್ಥಾಪನೆ ನೆರವೇರಿಸುವ ಸಂದರ್ಭದಲ್ಲಿ ಸಿಪಿಐ(ಎಂ)ನ ಹಿರಿಯ ನಾಯಕರಲ್ಲಿ ಹಾಗೂ ಅತ್ಯುಚ್ಚ ಸಿದ್ಧಾಂತಗಳಲ್ಲಿ ಒಬ್ಬರಾದ ತೆಲಂಗಾಣ ವೀರ ಎಂ. ಬಸವಪುನ್ನಯ್ಯ ಅವರಿಗೆ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಪಕ್ಷದ ಪಾಲಿಟಬ್ಯೂರೋ ಸದಸ್ಯ ಎಲ್. ಬಿ. ಗಂಗಾಧರರಾವ್ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭವೊಂದರಲ್ಲಿ ಕೇರಳದ ಮಾಜಿ ಮುಖ್ಯಮಂತ್ರಿ ಇ.ಕೆ. ನಾಯನಾರ್ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಎಂ.ಬಿ.ಯವರ ಅವಿಸ್ಮರಣೀಯ ಸೇವೆ ಹಾಗೂ ಪಕ್ಷದ ಬೆಳವಣಿಗೆಯಲ್ಲಿ ಅವರ ಪಾತ್ರವನ್ನು ಕಾಂ. ನಾಯನಾರ್ ನೆನಪಿಸಿಕೊಂಡರು.

ತಮ್ಮ 14 ನೇ ವಯಸ್ಸಿನಲ್ಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ ಎಂ.ಬಿ. ತಮ್ಮ ಜೀವಿತದ ಕೊನೆಯವರೆಗೂ ಜನತೆ ಹಾಗೂ ಪಕ್ಷಕ್ಕೆ ಸೇವೆ ಸಲ್ಲಿಸಿದರು ಎಂದು ನಾಯನಾರ್ ಹೇಳಿದರು. ಸಿದ್ಧಾಂತ ಮತ್ತು ಅನುಷ್ಠಾನದ ಸಮನ್ವಯದಲ್ಲಿ ಎಂ.ಬಿ. ವಹಿಸಿದ ಪಾತ್ರ ಅಮೋಘವಾದುದು ಎಂಬುದಾಗಿ ಅವರ ವಿಶಿಷ್ಟಗುಣಲಕ್ಷಣವನ್ನು ಸ್ಮರಿಸಿದರು.

ಎಂ.ಬಿ. ಟ್ರಸ್ಟಿನ ಅಧ್ಯಕ್ಷ ಹಾಗೂ ಆಡಳಿತ ಟ್ರಸ್ಟಿಯಾಗಿರುವ ಎಂ. ಹನುಮಂತರಾವ್ (ಸಂಸತ್‌ಸದಸ್ಯ) ವರದಿಯನ್ನು ಮಂಡಿಸಿದರು. ಸ್ಮಾರಕ ಭವನಕ್ಕೆ ಸುಮಾರು 50 ಲಕ್ಷಕ್ಕೂ ವೆಚ್ಚ ತಗಲುತ್ತದೆ. ಹಿತೈಷಿಗಳು ಆಗಲೇ 7 ಲಕ್ಷ ರೂ ವಂತಿಗೆ ರೂಪದಲ್ಲಿ ನೆರವು ನೀಡಿದ್ದಾರೆ ಎಂದು ಅವರು ತಿಳಿಸಿದರು. ಭವನ ನಿರ್ಮಾಣ ಕಾರ್ಯ ತಕ್ಷಣವೇ ಆರಂಭವಾಗಲಿದ್ದು ಮುಂದಿನ ವರ್ಷ ಎಂ.ಬಿ. ಜನ್ಮದಿನ ಸಂದರ್ಭದಲ್ಲಿ, ಅಂದರೆ ಏಪ್ರಿಲ್ 12, 1994 ರ ವೇಳೆಗೆ ಕಟ್ಟಡ ಪೂರ್ಣವಾಗುವ ನಿರೀಕ್ಷೆಯಿದೆ.

ಆಂಧ್ರದಲ್ಲಿ ಹೆಚ್ಚಿದ ನಕ್ಸಲೀಯ ಚಟುವಟಿಕೆ

ಆಂಧ್ರಪ್ರದೇಶದಲ್ಲಿ ಎಡ ಸಾಹಸವಾದಿಗಳು ಇದ್ದಕ್ಕಿದ್ದಂತೆ ತಮ್ಮ ಚಟುವಟಿಕೆಗಳನ್ನು ಪುನಾರಾಂಭಿಸಿದ್ದಾರೆ. ಭಾರೀ ಹಿಂಸೆ ಅಪಹರಣ ಕೃತ್ಯಗಳಿಗೆ ಕೈ ಹಾಕಿದ್ದಾರೆ.

ನಿಷೇಧಿತ ಪೀಪಲ್ಸ್ ವಾರ್ ಗ್ರೂಪ್(ಪಿ.ಡಬ್ಲ್ಯು.ಜಿ.) ಗೆ ಸೇರಿದವರೆನ್ನಲಾದ ನಕ್ಸಲಿಯರು ಜ. 27 ರಂದು ಹೈದರಾಬಾದ್‌ನಲ್ಲಿ ಡಿ.ಐ.ಜಿ. ರ‍್ಯಾಂಕಿನ ಪೋಲಿಸ್ ಅಧಿಕಾರಿ ಕೆ.ಎಸ್. ವ್ಯಾಸ್ ಅವರನ್ನು ಹತ್ಯೆ ಮಾಡಿದರು. ಸಂಜೆ ಹೊತ್ತು ಜಾಗಿಂಗ್‌ಗಾಗಿ ಕ್ರಿಡಾಂಗಣಕ್ಕೆ ತೆರಳಿದ್ದ ವ್ಯಾಸ್ ಟ್ರ್ಯಾಕ್ ಸೂಟ್ ಧರಿಸಿ ಬಂದಿದ್ದ ನಕ್ಸಲೀಯರ ಕುಕೃತ್ಯಕ್ಕೆ ಬಲಿಯಾದರು.

ಕಳೆದ ಒಂದು ದಶಕದಿಂದ ರಾಜ್ಯದಲ್ಲಿ ನಕ್ಸಲಿಯ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದ ವ್ಯಾಸ್ ನಕ್ಸಲೀಯರ ಹಿಟ್‌ಲಿಸ್ಟ್‌ನಲ್ಲಿದ್ದರು. ವ್ಯಾಸ್ ಕೊಲೆಗೆ ಕಾರಣನೆಂದು ಹೇಳಲಾದ ಪಿ.ಡಬ್ಲ್ಯು.ಜಿ. ಸದಸ್ಯ ಗಣಪತಿ ನಾಯ್ಡು ಎಂಬಾತನನ್ನು ಪೋಲೀಸರು ತಿರುಪತಿಯಲ್ಲಿ ಬಂಧಿಸಿದ್ದಾರೆ.

ಅಪಹರಣ

ಡಿ.ಐ.ಜಿ. ವ್ಯಾಸ್ ಹತ್ಯೆಯಿಂದ ರಾಜ್ಯದಲ್ಲಿ ಭೀತಿಯ ವಾತಾವರಣ ಮೂಡಿದ ಬೆನ್ನಲ್ಲೇ ಪಿ.ಡಬ್ಲ್ಯು.ಜಿ. ನಕ್ಸಲೀಯರು ಒಬ್ಬ ಕಾಂಗ್ರೆ ಶಾಸಕ ಹಾಗೂ ಏಳು ಮಂದಿ ಅಧಿಕಾರಿಗಳನ್ನು ಜ. 30 ರಂದು ಅಪಹರಿಸಿದರು.

ಅಪಹೃತರದಲ್ಲಿ ಶಾಸಕ ಬಾಲರಾಜು ಹಾಗೂ ಐ.ಎ.ಎಸ್. ಅಧಿಕಾರಿ ಶ್ರೀನಿವಾಸಲು ಸೇರಿದ್ದಾರೆ. 10 ಮಂದಿಯನ್ನು ಅಪಹರಿಸಿದ್ದ ನಕ್ಸಲೀಯರು ನಂತರ ಇಬ್ಬರನ್ನು ಬಿಡುಗಡೆಗೊಳಿಸಿದರು. ವಾರಂಗಲ್ ಜೈಲಿನಲ್ಲಿರುವ ತಮ್ಮ ಕೆಲವು ನಾಯಕರನ್ನು ಬಿಡುಗಡೆ ಮಾಡಬೇಕೆನ್ನುವುದು ನಕ್ಸಲೀಯರ ಬೇಡಿಕೆಯಾಗಿದೆ. ಇಲ್ಲದಿದ್ದರೆ ಎಲ್ಲಾ ಅಪಹೃತರನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದೆ.

ಅಪಹರಣದಿಂದ ಉಂಟಾದ ಪರಿಸ್ಥಿತಿಯ ನಡುವೆಯೇ ಪಿ.ಡಬ್ಲ್ಯು.ಜಿ ಕಾರ್ಯಕರ್ತರು ರಾಜ್ಯದ ಪಶುಸಂಗೋಪನ ಖಾತೆ ಸಚಿವ ಪಿ. ಜಗನ್ ನಾಯಕ್ ಅವರ ಮನೆಯನ್ನು ಸ್ಫೋಟಿಸಿದರು. ಮದನ್‌ಪಲ್ಲಿಯಲ್ಲಿರುವ ನಿವಾಸ ಪೂರ್ಣ ನಾಶವಾಗಿದ್ದು ಹೊರಗೆ ನಿಲ್ಲಿಸಿದ್ದ ಟ್ರ್ಯಾಕ್ಟರ್ ಚೂರುಚೂರಾಗಿದೆ.

ಈ ಮಧ್ಯೆ ಅಪಹರಣ ಪ್ರಕರಣ ಸಂಬಂಧದಲ್ಲಿ ಆಂಧ್ರಪ್ರದೇಶ ಸರಕಾರದ ಧೋರಣೆಯನ್ನು ಪ್ರತಿಭಟಿಸಿ ನಾಲ್ವರು ಶಾಸಕರು ಮತ್ತು ಇಬ್ಬರು ಸಂಸತ್‌ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ.

ಈ ವರದಿಯನ್ನು ಸಿದ್ಧಪಡಿಸುವವರಿಗೆ ದೊರೆತ ವರದಿಗಳ ಪ್ರಕಾರ ಅಪಹೃತರ ಬಿಡುಗಡೆ ಪ್ರಶ್ನೆ ಇನ್ನೂ ಪರಿಹಾರವಾಗದೆ ಉಳಿದಿತ್ತು.

ಲೋಕ ಸಂಚಾರ

"ಅಮೇರಿಕ, ಅಮೇರಿಕ"

ಯಾರಿಗೆ ಸ್ವರ್ಗ ! ಯಾರಿಗೆ ನರಕ !!

ಇದು ನಿಮಗೆ ಗೊತ್ತೇ? ಅಮೇರಿಕಾದ ಕಾರ್ಮಿಕರಿಗೆ ದೊರೆಯುವ ಕಾನೂನಿನ ರಕ್ಷಣೆ ಉಳಿದ ಹಲವು ದೇಶಗಳ ಕಾರ್ಮಿಕರಿಗಿಂತ ಕಡಿಮೆ ಹೇಗೆಂದು ಅಮೇರಿಕಾದ ಹಲವು ಯೂನಿಯನ್‌ಗಳಿಗೆ ವಕೀಲರಾಗಿರುವ ರೋಬರ್ಟ್ ಶ್ವಾರ್ಟ್ಸ್ ಮೋಸ್ಟ್ರ್‌ನಿಂದ ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ ಡೆಮಾಕ್ರಸಿ'ಗೆ ಬರೆದಿದ್ದಾರೆ. ವಿಶ್ವದಲ್ಲಿ ತಾನೇ ಪ್ರಜಾಪ್ರಭುತ್ವದ ರಕ್ಷಕನೆಂಬ ಪೋಸು ಕೊಡುವ ಅಮೆರಿಕಾ ಕಾರ್ಮಿಕರಿಗೆ ನೀಡಿರುವ ಹಕ್ಕುಗಳೇನು ರಕ್ಷಣೆಯೇನು? ಶ್ವಾರ್ಟ್ಸ್‌ರವರ ಮಾತುಗಳಲ್ಲೇ ಓದಿ.

* ಒಬ್ಬ ನೌಕರರನ್ನು ಕೆಲಸದಿಂದ ತೆಗೆದುಹಾಕಲು ಯಾವುದೇ ಮಾಲಕ 'ನ್ಯಾಯಕಾರಣ'ವನ್ನು ತೋರಿಸಬೇಕಾಗಿಲ್ಲ. ಎಷ್ಟೇ ದೀರ್ಘಕಾಲ ಕೆಲಸ ಮಾಡಿರಲಿ ತನಗೆ ಸರಿಕಾಣದ, ತನ್ನ ಸೂಪರ್‌ವೈಸರುಗಳಿಗೆ ತಲೆಬಾಗದ ನೌಕರರನ್ನು ಮಾಲಕರು ವಜಾ ಮಾಡಬಹುದು. ವಜಾ ಮಾಡುವಾಗ ವಯಸ್ಸು, ಲಿಂಗ, ಜನಾಂಗ, ರಾಷ್ಟ್ರೀಯತೆ, ಅಂಗಹೀನತೆ ಅಥವಾ ಯೂನಿಯನ್ ಚಟುವಟಿಕೆಯ ಆಧಾರದ ಮೇಲೆ ಭೇದ ಭಾವ ಇರಬಾರದು ಎಂದು ಅಮೇರಿಕಾದ ಕಾನೂನು ಹೇಳುತ್ತದೆ. ಇದು ಬಿಟ್ಟರೆ ವಜಾ ಆಗುವ ಮೊದಲು ನೋಟೀಸು ಕೊಟ್ಟು ನೌಕರನ ಅಹವಾಲು ಕೇಳಬೇಕು ಎಂಬ ಹಕ್ಕನ್ನೇನೂ ಕಾನೂನು ಅಮೇರಿಕಾದ ನೌಕರನಿಗೆ ಕೊಟ್ಟಿಲ್ಲ.

ಡ ಯೂನಿಯನ್ ಸೇರಿರುವ ನೌಕರರು ಮಾಲಕರೊಂದಿಗೆ ಮಾಡಿಕೊಳ್ಳುವ ಕಾಂಟ್ರಾಕ್ಟರ್‌ಗಳಲ್ಲಿ ಈ ರೀತಿ ಮನಬಂದಂತೆ ವಜಾ ಮಾಡಬಾರದು ಎಂಬ ಒಂದು ಅಂಶ ವಿರುತ್ತದೆ. ಆದರೆ ಅಮೇರಿಕಾದಲ್ಲಿ ಕೇವಲ 20 ಶೇ. ನೌಕರರು ಯೂನಿಯನ್ ಸೇರುತ್ತಾರೆ. ಸೂಪರ್‌ವೈಸರ್‌ಗೆ ಬಾಯಿ ತಪ್ಪಿ ಹೇಳಬಹುದಾದ ಒಂದು ಸಿಟ್ಟಿನ ಮಾತು, ಅಥವಾ ಕೆಲಸದಲ್ಲಿ ಆಗಬಹುದಾದ ಸಣ್ಣ ತಪ್ಪು ತಮ್ಮನ್ನೆಲ್ಲಿ ಯಾವುದೇ ಸಮಜಾಯಿಷಿ ಕೇಳದೆ ಮನೆಗೆ ಕಳಿಸುತ್ತಾರೋ ಎಂಬ ಭಯ ಯಾವಾಗಲೂ ಕಾಡುತ್ತಿರುತ್ತದೆ.

* ಅಮೇರಿಕನ್ ಕಾರ್ಮಿಕರಿಗೆ ಯೂನಿಯನ್ ರಚಿಸಿಕೊಳ್ಳುವ ಅವಕಾಶ ಕೊಡಲಾಗಿದೆ. ಆದರೆ ಅದಕ್ಕೆ ಹಾಕಿರುವ ಕಾನೂನು ವಿಧಿ-ಕಟ್ಟಳೆಗಳು ಹಲವಾರು. ಒಂದು ಚುನಾವಣೆಯಲ್ಲಿ ಕನಿಷ್ಠ 51 ಶೇ. ನೌಕರರು ಮತ ನೀಡುವ ಯೂನಿಯನ್‌ಗೆ ಮಾತ್ರ ಮಾನ್ಯತೆ. ಇದರಿಂದ ದೊಡ್ಡ ಕಂಪೆನಿಗಳಲ್ಲಿ ಯೂನಿಯನ್ ಕಟ್ಟಿಕೊಳ್ಳುವ ಕೆಲಸ ಬಹಳ ಕಷ್ಟಕರಗೊಳಿಸಲಾಗಿದೆ. ಯಾವುದೇ ಒಂದು ವಿಭಾಗದಲ್ಲಿ ಎಲ್ಲಾ ಕಾರ್ಮಿಕರು ಯೂನಿಯನ್ ಸೇರಿದರೂ ಆ ಕಂಪೆನಿಯಲ್ಲಿ 51 ಶೇ. ಮತ ದೊರೆಯದಿದ್ದರೆ ಆ ಯೂನಿಯನ್‌ಗೆ ಮಾನ್ಯತೆಯಿರುವುದಿಲ್ಲ.

* ಸೂಪರ್ ವೈಸರ್‌ಗಳು ಯೂನಿಯನ್ ಸೇರುವಂತೆಯೇ ಇಲ್ಲ. ಇದು ಕೆಲಸಗಾರರನ್ನು ವಿಭಜಿಸುತ್ತದೆ. ಸ್ವಲ್ಪವೇ ಉಸ್ತುವಾರಿ ಅಧಿಕಾರವಿರುವ ಕೆಲಸಗಾರರು ಬಯಸಿದರೂ ಅವರು ಯೂನಿಯನ್ ಸದಸ್ಯರಾಗುವಂತಿಲ್ಲ. ಕಾರ್ಮಿಕರಿಗೆ ಹಲವು ಶರತ್ತುಗಳ ಮೇಲೆ ಚುನಾವಣೆ ಅವಕಾಶ ನೀಡಿರುವ ಕಾನೂನು ಮಾಲಕರಿಗೆ ಯೂನಿಯನ್ ಚುನಾವಣೆಗಳನ್ನು ವಿಳಂಬ ಮಾಡಲು, ಇಂತಹ ಚುನಾವಣೆಗಳ ಫಲಿತಾಂಶಗಳನ್ನು ಮಾನ್ಯ ಮಾಡಲು ನಿರಾಕರಿಸಲು ಸಾಕಷ್ಟು ಅವಕಾಶ ನೀಡಿದೆ.

* ಕಾರ್ಮಿಕರು ಯೂನಿಯನ್ ರಚಿಸಿಕೊಂಡಾಗ ಅವರ ಮುಷ್ಕರದ ಹಕ್ಕಿನ ಮೇಲೆ ತೀವ್ರ ಮಿತಿ ಬರುವುದು ಅಮೇರಿಕಾದ ಕಾನೂನುಗಳ ಇನ್ನೊಂದು ವಿಶಿಷ್ಟ ಲಕ್ಷಣ. ಈ ಒಪ್ಪಂದದ ಅವಧಿಯಲ್ಲಿ ಏನೇ ಆದರೂ ಮುಷ್ಕರ ಮಾಡುವಂತೆಯೇ ಇಲ್ಲ. ಒಪ್ಪಂದದಲ್ಲಿ ದೂರುಗಳ ಪರಿಹಾರಕ್ಕೆ ವ್ಯವಸ್ಥೆಯ ಪ್ರಸ್ತಾಪವಿದ್ದರೆ ನ್ಯಾಯಾಲಯಗಳು ಸಾಮಾನ್ಯವಾಗಿ ಮುಷ್ಕರ ನಿರತ ಕಾರ್ಮಿಕರ ವಿರುದ್ಧ ತೀರ್ಪು ನೀಡಿ ಈ ವ್ಯವಸ್ಥೆಯ ಮೂಲಕವೇ ನಿಮ್ಮ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಿ ಎನ್ನುತ್ತವೆ. ನ್ಯಾಯಾಲಯದ ಆಜ್ಞೆಯನ್ನು ನಿರ್ಲಕ್ಷಿಸಿದರೆ ಲಕ್ಷಾಂತರ ಡಾಲರುಗಳ ದಂಡ ತೆರಬೇಕು. ಚುನಾವಣೆಗಳ ಫಲಿತಾಂಶವನ್ನು ಮಾನ್ಯ ಮಾಡಲು ನಿರಾಕರಿಸುವ, ವಿಳಂಬ ಮಾಡುವ ಮಾಲಕರಿಗೆ ಇಂತಹ ದಂಡ ಇಲ್ಲ. "ಸೆಕೆಂಡ್ ಬಾಯ್‌ಕಾಟ್" ಅಂದರೆ ಮುಷ್ಕರ ನಿರತ ಕಂಪೆನಿಯ ಕಾರ್ಮಿಕರನ್ನು ಉಳಿದ ಕಂಪೆನಿಗಳ ಕಾರ್ಮಿಕರು ಬೆಂಬಲಿಸುವಂತೆ ಕೇಳುವುದು ಪೂರ್ಣ ನಿಷಿದ್ಧ. ಉದಾಹರಣೆಗೆ ಒಂದು ಪತ್ರಿಕಾ ಕಂಪೆನಿಯ ಕಾರ್ಮಿಕರು ಮುಷ್ಕರ ನಡೆಸಿದಾಗ ಅದೇ ಯುನಿಯನ್‌ಗೆ ಸೇರಿದ ಇತರ ಪತ್ರಿಕೆಗಳ ಕಾರ್ಮಿಕರೂ ಆ ಕಂಪೆನಿಯ ಕಾರ್ಮಿಕರಿಗೆ ಬೆಂಬಲ ಸೂಚಿಸಿ ಕೆಲಸ ನಿಲ್ಲಿಸುವಂತಿಲ್ಲ. ಇದರಿಂದ ಒಂದು ವಿಭಾಗದ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಿ ಒಂದು ನಗರದ ಎಲ್ಲಾ ಕಾರ್ಮಿಕರು "ಸಾರ್ವತ್ರಿಕ ಮುಷ್ಕರ" ಮಾಡುವಂತೆಯೇ ಇಲ್ಲ.

• ಯೂನಿಯನ್‌ಗಳು ತಮ್ಮ ನಿಯಮಾವಳಿಗಳನ್ನು ಜಾರಿಗೆ ತರಲು ಕೂಡಾ ಮಾಲಕರ ಮರ್ಜಿಯನ್ನು ಅವಲಂಬಿಸಿರಬೇಕು. ಉದಾಹರಣೆಗೆ, ಹಲವು ಯೂನಿಯನ್‌ಗಳಲ್ಲಿ ಮುಷ್ಕರದ ಸಮಯದಲ್ಲಿ ಒಬ್ಬ ಯೂನಿಯನ್ ಸದಸ್ಯ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡುವಂತಿಲ್ಲ ಎಂಬ ನಿಯಮವಿರುತ್ತದೆ. ಆದರೆ ಒಬ್ಬ ಸದಸ್ಯ ಮಾಲಕರ ಪರವಾಗಿ ಕೆಲಸ ಮಾಡಲು ಯೂನಿಯನ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರೆ ತಮ್ಮ ಯೂನಿಯನ್ ನಿಯಮಾವಳಿಯಂತೆ ಅದನ್ನು ನಿರಾಕರಿಸಲು ಯೂನಿಯನ್‌ಗೆ ಸ್ವಾತಂತ್ರ್ಯ ಇಲ್ಲ. ಮುಷ್ಕರ ಮುರುಕರನ್ನು ತಡೆಯುವುದು, ಅವರ ಬಗ್ಗೆ ಹೇಳಿಕೆ ನೀಡುವುದು ಕಾನೂನು ಪ್ರಕಾರ ನಿಷಿದ್ಧ!

• ಅತ್ಯಂತ ಕಠಿಣ ಕಾನೂನು ಸರಕಾರೀ ನೌಕರರ ಮೇಲೆ. ಫೆಡರಲ್ ಸರಕಾರ, ರಾಜ್ಯ ಸರಕಾರದ, ನಗರ, ಸ್ಥಳೀಯ ಸಂಸ್ಥೆಗಳ ನೌಕರರು, ಕಾರ್ಮಿಕರು ಯಾವುದೇ ಮುಷ್ಕರದಲ್ಲಿ ಭಾಗವಹಿಸುವಂತೆಯೇ ಇಲ್ಲ. ಯಾವುದೇ ನ್ಯಾಯಯುತ ಬೇಡಿಕೆಗಾಗಿ ಕೆಲಸ ನಿಲ್ಲಿಸಿದರೂ ಕ್ರಿಮಿನಲ್ ಕಾನೂನು ಅನ್ವಯಿಸಲಾಗುತ್ತದೆ.

ಇದೀಗ ವಿಶ್ವದ 'ಪ್ರಜಾಪ್ರಭುತ್ವ ರಕ್ಷಕ' ತನ್ನ ಬಹುಪಾಲು ನಾಗರೀಕರಿಗೆ ನೀಡಿರುವ ರಕ್ಷಣೆ! ಬಿ.ಜೆ.ಪಿಯೂ ಸೇರಿದಂತೆ ನಮ್ಮ ಆಳರಸರು ಈ ಬಂಡವಾಳಶಾಹಿಗಳ ಸ್ವರ್ಗವನ್ನಲ್ಲವೇ ನಮ್ಮಲ್ಲಿ ಕಾಪಿ ಮಾಡಲು ಬಯಸುವುದು?

ರಷ್ಯಾದಲ್ಲಿ ಚಿತೆಗೂ ಚಿಂತೆ..........


ಸಮಾಜವಾದದ ಪತನವಾದ ನಂತರದ ಹಿಂದಿನ ಸೋವಿಯತ್ ಒಕ್ಕೂಟದಲ್ಲಿ ಬದುಕುವುದು ಬಹಳ ದುಸ್ತರವಾಗಿದೆ. ಅದಕ್ಕಿಂತಲೂ ಗಂಭೀರವಾದದ್ದೆಂದರೆ ಅಲ್ಲಿ ಈಗ ಮೃತಪಟ್ಟರೇ ಕೂಡ ಅದು ಕಷ್ಟಕರವಾಗಿ ಪರಿಣಮಿಸುತ್ತದೆ.

ರಷ್ಯಾದಲ್ಲಿ ಅಂತ್ಯ ಸಂಸ್ಕಾರ ತುಂಬಾ ತುಟ್ಟಿಯಾಗಿದೆ. ಪ್ರಾವ್ದಾದಲ್ಲಿ ಪ್ರಕಟವಾದ ಇತ್ತೀಚಿನ ಒಂದು ವರದಿಯ ಪ್ರಕಾರ ಕಿರ್ಗಿಜ್ ರಾಜಧಾನಿ ಬಿಷೆಕ್‌ನಲ್ಲಿ ಒಂದು ಸಾಧಾರಣ ಅಂತ್ಯಕ್ರಿಯೆ ಕಾರ್ಯಗಳಿಗೆ ತಗಲುವ ವೆಚ್ಚ ಸುಮಾರು 20 ಸಾವಿರದಿಂದ 25 ಸಾವಿರ ರೂಬಲ್, ಅಂದರೆ ಇದು ಸರಾಸರಿ ಮೂರು ತಿಂಗಳ ವೇತನಕ್ಕೆ ಸಮನಾದ ಮೊತ್ತ. ಮರದಿಂದ ಮಾಡಿದ ಶವಪೆಟ್ಟಿಗೆಗಳು ದೊರೆಯುವುದಿಲ್ಲ; ದೊರೆತರೂ ಅದರ ಬೆಲೆ ಸುಮಾರು ಐದು ಸಾವಿರ ರೂಬಲ್‌ಗಳು. ಆದ್ದರಿಂದ ಜನರು ಈಗೀಗ ಶವಗಳನ್ನು ಕಾರ್ಡ್ ಬೋರ್ಡ್ ಪೆಟ್ಟಿಗೆಗಳು ಅಥವಾ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ಇಟ್ಟು ಹೂಳುತ್ತಾರೆ.

ಇತ್ತೀಚಿನ ಒಂದು ವರದಿಯಂತೆ, ಖರೀದಿಗಾಗಿ ಪೋಲಂಡ್‌ಗೆ ತೆರಳಿದ್ದ ರಷ್ಯನರ ಪೈಕಿ ಒಬ್ಬ ಅಲ್ಲೇ ಮೃತಪಟ್ಟ. ಪೋಲಂಡ್‌ನಲ್ಲಿ ಸಾಮಾನುಗಳು ಅಗ್ಗವಾಗಿ ದೊರೆಯುವುದರಿಂದ ಅನೇಕ ರಷ್ಯನರು ಖರೀದಿಗಾಗಿ ಅಲ್ಲಿಗೆ ಹೋಗುವುದು ಸಾಮಾನ್ಯವಾಗಿದೆ.

ಹೀಗೆ ಖರೀದಿಸಲು ತೆರಳಿದ್ದ ಒಂದು ಬಸ್ಸಿನಲ್ಲಿದ್ದವರ ಪೈಕಿ ಒಬ್ಬ ಮೃತನಾದಾಗ ಆತನ ಅಂತ್ಯಸಂಸ್ಕಾರಕ್ಕೆಂದು ಪ್ರಯಾಣವನ್ನು ಮೊಟಕುಗೊಳಿಸಿ ರಷ್ಯಾಕ್ಕೆ ವಾಪಸು ಬರಲು ಯಾರೂ ಇಷ್ಟಪಡಲಿಲ್ಲ. ಹೆಣವನ್ನು ಬಸ್ಸಿನ ಹಿಂದಿನ ಸೀಟಿನಲ್ಲಿ ಇಟ್ಟುಕೊಂಡೇ ದಿನಗಟ್ಟಲೆ ಪೋಲಂಡ್‌ನಲ್ಲಿ ಸುತ್ತಾಡಿ ವ್ಯಾಪಾರವನ್ನು ಮುಗಿಸಿ ಆ ಮೇಲೆ ಹಿಂದಿರುಗಿದರು.

ಖರೀದಿಯಿಂದ ಹಿಡಿದು ಪ್ರವಾಸಿ ತಾಣಗಳಿಗೆ ಪ್ರವಾಸ ಒಳಗೊಂಡಂತೆ ಎಲ್ಲದಕ್ಕೂ ಸ್ವತಂತ್ರ ರಾಜ್ಯಗಳ ಕಾಮನ್ವೆಲ್ತ್ (ಸಿಐಎಸ್) ಆದ್ಯತೆ ಕೊಡುತ್ತಿರುವ ಪೋಲಂಡ್‌ಗೆ ವಾಣಿಜ್ಯ ನೆಲೆಯಲ್ಲಿ ಪ್ರವಾಸಿ ಟ್ರಿಪ್‌ಗಳನ್ನು ಏರ್ಪಡಿಸುವುದು ಎಷ್ಟು ಲಾಭದಾಯಕವೆಂದರೆ ವಾಣಿಜ್ಯ ಹಿತಾಸಕ್ತಿಗಳ ಜನರು ನಾಚಿಕೆ ಮತ್ತು ಸೌಜನ್ಯವನ್ನೇ ಮರೆಯುವಂತೆ ಮಾಡುತ್ತಿವೆ ಎಂದು ಇತಾರ್-ತಾಸ್ ಸುದ್ದಿ ಸಂಸ್ಥೆ ಟಿಪ್ಪಣಿ ಮಾಡಿದೆ.



ಕೋಟಿ ಕೋಟಿ ಜನರ ಕಂಠದಲ್ಲಿ ಮೊಳಗಿದ ಪ್ರತಿಜ್ಞೆ ಜನತೆಯ ಉತ್ಸವದ ರೂಪ ತಳೆದ ಹೋರಾಟ

ಪಶ್ಚಿಮಬಂಗಾಳದ ಜನ ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ತೋರಿದರು. ಜನವರಿ 26 ರಂದು ಎರಡು ಕೋಟಿ ಜನ ಹತ್ತು ಸಾವಿರ ಕಿ.ಮೀ. ದೂರದ ವರೆಗೆ ಕೈ ಕೈ ಹಿಡಿದು ನಿಂತು ರಾಜ್ಯದಲ್ಲಿ ವಿದ್ಯುತ್‌ಸಂಚಾರವಾದಂತಹ ದೃಶ್ಯ ನಿರ್ಮಿಸಿದರು. ಡಿಸೆಂಬರ್ 6 ರಿಂದಲೇ ಎಡರಂಗ ರಾಜ್ಯಾದ್ಯಂತ ಬಹುಮಟ್ಟದಲ್ಲಿ ನಿರಂತರವಾಗಿ ಕೋಮುವಾದ-ವಿರೋಧಿ ಪ್ರಚಾರ ನಡೆಸುತ್ತಾ ಬಂದಿತ್ತು. ಜನವರಿ 26 ರ ಬೃಹತ್ ಮಾನವ ಸರಪಳಿ ಈ ಪ್ರಚಾರದ ಕಾರ್ಯಕ್ರಮದ ಚರಮದಿಂದು ಸಾವಿರ-ಸಾವಿರ ಜನ ಇದರಲ್ಲಿ ಭಾಗವಹಿಸಿದರು. ಮಾನವ ಸೌಹಾರ್ದದಲ್ಲಿ ಕೋಮು ಸಾಮರಸ್ಯದಲ್ಲಿ ತಮ್ಮ ಆಳ ಶ್ರದ್ಧೆಯನ್ನು ವ್ಯಕ್ತಪಡಿಸಿದರು.

ಉತ್ತರದ ಹಿಮಾಲಯದಿಂದ ದಕ್ಷಿಣದ ಸಮುದ್ರತೀರದವರೆಗೆ. ಈ ಮಾನವ ಸೇತುವೆ ಪಶ್ಚಿಮಬಂಗಾಳದ ವಿಧಿಸ್ತ ಹೊಲ-ಬಯಲು, ಗುಡ್ಡಬೆಟ್ಟಗಳ ಮೂಲಕ ಹಾದು ಹೋಯಿತು. ದೇಶಗೆ ಕೃಷಿಯಲ್ಲಿ ತೊಡಗಿದ ಹಳ್ಳಿಗಳ ಮೂಲಕ ರಭಸದಿಂದ ಆದಂದ ಸಮೃದ್ಧ ಕ್ರಾಂತಿಕಾ ಪಟ್ಟಣಗಳ ಮೂಲಕ, ಸದಾ ಚುರುಕಾಗಿರುವ ಕಲ್ಕತ್ತಾದಂತಹ ಮಹಾನಗರಗಳ ಮೂಲಕ. ಎಲ್ಲೆಡೆ ಶಾಂತಿಪ್ರಿಯ ಪ್ರಜಾಪ್ರಭುತ್ವವಾದಿ ಜನ ಕೈಕೈ ಹಿಡಿದು ನಿಂತು ಕೋಮುವಾದ-ವಿರೋಧಿ ಘೋಷಣೆ ಕೂಗಲು ಪಾಲ್ಗೊಳ್ಳುತ್ತಿದ್ದರು.

ಇನ್ನೊಂದು ದೃಷ್ಟಿಯಿಂದ ಮಾನವ ಸೇತುವೆಯ ಕಾರ್ಯಕ್ರಮ ಬಂಗಾಳದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಸುಮಾರು ಎರಡು ದಶಕಗಳ ನಂತರ ಎಡ ಪಕ್ಷಗಳು, ನಕ್ಸಲೀಯರು ಕೂಡಾ ಒಂದೇ ಗುರಿಯಿಟ್ಟುಕೊಂಡ ಕಾರ್ಯಕ್ರಮದಲ್ಲಿ ಒಟ್ಟಿಗೇ ಭಾಗವಹಿಸಿದ್ದವು.

ಕಲ್ಕತ್ತೆಯಲ್ಲಿ ಕೆಲವು ಮುಖ್ಯ ಸ್ಥಳಗಳಲ್ಲಿ ಎಡರಂಗದ ಮುಖಂಡರು, ಎಡರಂಗ ಸರಕಾರದ ಮಂತ್ರಿಗಳು ಸರಪಳಿ ಹೆಣೆದ ಲಕ್ಷಾಂತರ ಜನಗಳೊಂದಿಗೆ ಬೆರೆತರು. ಮಧ್ಯಾಹ್ನ 1 ಗಂಟೆಯಿಂದ 1.10 ರವರೆಗೆ ನಡೆದ ಮಾನವ ಸರಪಳಿಯ ಕಾರ್ಯಕ್ರಮದ ನಂತರ ಹಲವು ಸ್ಥಳಗಳಲ್ಲಿ ಅವರು ಜನಗಳನ್ನುದ್ದೇಶಿಸಿ ಮಾತನಾಡಿದರು.

ಇಂತಹ ಒಂದು ಸಭೆಯಲ್ಲಿ ಕಲ್ಕತ್ತೆಯಲ್ಲಿ ಮಾತನಾಡುತ್ತಾ ಮುಖ್ಯಮಂತ್ರಿ ಜ್ಯೋತಿಬಸು ನಾವು ಈ ಗಣತಂತ್ರವನ್ನು ಸಂಪೂರ್ಣ ಬದಲಾದ ಸನ್ನಿವೇಶದಲ್ಲಿ ಆಚರಿಸುತ್ತಿದ್ದೇವೆ ಎಂದರು. ಇಂತಹ ಅಪಾಯಕಾರೀ ಸನ್ನಿವೇಶವನ್ನು ಸ್ವಾತಂತ್ರ್ಯದ ನಂತರ ಎಂದೂ ನಾವು ಎದುರಿಸಿದ್ದಿಲ್ಲ. ಈ ಅಪಾಯವನ್ನೆದುರಿಸಲು ರಾಷ್ಟ್ರೀಯ ಮಟ್ಟದಲ್ಲಿ ಎಡರಂಗ ಮತ್ತು ಇತರ ಜಾತ್ಯತೀತ ಪಕ್ಷಗಳು ಒಂದು ರಂಗ ಸ್ಥಾಪಿಸಿಕೊಂಡಿವೆ ಎಂದರು. ಮೂಲಭೂತವಾದಿಗಳು ಜನರನ್ನು ಧಾರ್ಮಿಕ ಆಧಾರದ ಮೇಲೆ ಒಡೆಯುತ್ತಾರೆ. ಬಹುಸಂಖ್ಯೆಯಲ್ಲಿರುವವರಿಂದ ಹಿಂದೂ ಮೂಲಭೂತವಾದಿಗಳು ಇವತ್ತೆ ಹೆಚ್ಚು ಹೋಗಿಗಾರರು. ಧರ್ಮದ ಹೆಸರಲ್ಲಿ ಧರ್ಮವನ್ನೇ ನಿರಾಕರಿಸುತ್ತಿದ್ದಾರೆ ಅವರು. ಶ್ರೀರಾಮನ ಹೆಸರಲ್ಲಿ ಅವರು ಕೊಲೆಗೈಯುತ್ತಿದ್ದಾರೆ ಎಂದು ಜ್ಯೋತಿ ಬಸು ಹೇಳಿದರು. ನಮಗೆ ಸೌಹಾರ್ದತೆಯ ಒಂದು ಇತಿಹಾಸವಿದೆ. ನಮಗೆ ಆ ಬಗ್ಗೆ ಹೆಮ್ಮೆಯಿದೆ. ಬಿ.ಜೆ.ಪಿ. ಇವನ್ನೆಲ್ಲಾ ಒಪ್ಪಲು ಸಿದ್ಧವಿಲ್ಲ. ಅವರು ಜನಗಳನ್ನು ಗೊಂದಲಪಡಿಸಲು ಪ್ರಯತ್ನಿಸುತ್ತಿದ್ದಾರೆ. ಭಾರತ ಈಗಲೇ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಒಂದು ಯೋಜನಾಬದ್ಧ ರೀತಿಯಲ್ಲಿ ಸೃಷ್ಟಿಸಿರುವ ಕೋಮುಗಲಭೆ ಅದನ್ನು ಇನ್ನಷ್ಟು ಕ್ಲಿಷ್ಟಗೊಳಿಸುತ್ತದೆ. ಭಾರತದ ಪ್ರತಿಷ್ಠೆಗೆ ಕುತ್ತು ಬಂದಿದೆ. ಇಡೀ ವಿಶ್ವ ನಮ್ಮ ನಾಗರಿಕತೆಯನ್ನು ಗೇಲಿ ಮಾಡುತ್ತಿದ್ದಾರೆ ಎಂದು ಹೇಳಿದರು.

ರಾಜ್ಯದ ಉತ್ತರ ತುದಿಯಲ್ಲಿರುವ ಡಾರ್ಜಿಲಿಂಗ್‌ನಿಂದ ದಕ್ಷಿಣತುದಿಯಲ್ಲಿರುವ ಕಾಕ್‌ದ್ವೀಪದವರೆಗೆ ಬೆಸೆದ ಮುಖ್ಯ ಸರಪಳಿಯಲ್ಲದೆ ರಾಜ್ಯದ ಪಶ್ಚಿಮ ಭಾಗಗಳಿಂದ ತೂಫಾನ್ ಗಂಜ್‌ನಿಂದ, ಹಲ್‌ದಿಯಾದಿಂದ, ದುರ್ಗಾಪುರದಿಂದ, ರಘುನಾಥಪುರದಿಂದ, ಝಾರ್‌ಗ್ರಾಂನಿಂದ, ಬಿಷ್ಣುಪುರದಿಂದ, ಪಾಂಡುವಾದಿಂದ ಹೊರಟ ಹಲವು ಉಪಸರಪಳಿಗಳು ಮುಖ್ಯ ಸರಪಳಿಯನ್ನು ಸೇರಿಕೊಂಡವು. ಹೀಗೆ ರಾಜ್ಯದ ಎಲ್ಲಾ ಜಿಲ್ಲೆಗಳ ಜನರೂ ಈ ಮಾನವ ಸೇತುವೆಯಲ್ಲಿ ಭಾಗಿಯಾದರು. ಮಾನವ ಸರಪಳಿ ಕಾರ್ಯಕ್ರಮದ ನಂತರ ರಾಜ್ಯಾದ್ಯಂತ ಒಂದು ಸಾವಿರಕ್ಕೂ ಹೆಚ್ಚು ಸಭೆಗಳು ನಡೆದವು.

ಗಾಂಧಿಯನ್ನು ಕೊಂದ ಶಕ್ತಿ ಗಳು ಧಾಳಿಮಾಡುತಾ ಮುನ್ನುಗ್ಗುತ್ತಿವೆ

ದೆಹಲಿಯಲ್ಲಿ ಪ್ರತಿಜ್ಞಾಸ್ವೀಕಾರ

- ಸುರ್ಜೀತ್

(ಐ.ಎನ್.ಎಸ್. ಸುದ್ದಿ)

ರಾಷ್ಟ್ರೀಯ ಏಕತಾ ಆಂದೋಳನದ ಮುಖಂಡರು ಹಾಗೂ ಎಡಪಕ್ಷಗಳ ನೂರಾರು ಕಾರ್ಯಕರ್ತರು ದೇಶದ ರಾಜಧಾನಿಯಲ್ಲಿ ಜನವರಿ 30ರಂದು ಭಾರತೀಯ ಸಂವಿಧಾನದ ಜಾತ್ಯಾತೀತ, ಪ್ರಜಾಪ್ರಭುತ್ವ ತಳಪಾಯವನ್ನು ರಕ್ಷಿಸುವ ಮತ್ತು ಭಾರತದ ಐಕ್ಯತೆಯನ್ನು ಹಾಗೂ ಕೋಮು ಸೌಮರಸ್ಯವನ್ನು ಬಲಪಡಿಸುವ ಪ್ರತಿಜ್ಞೆಯನ್ನು ಕೈಗೊಂಡರು. ಪ್ರಖ್ಯಾತ ಇಂಡಿಯಾ ಗೇಟ್‌ನ ಅಮರ್ ಜವಾನ್ ಜ್ಯೋತಿಯ ಎದುರು ಬೆಳಿಗ್ಗೆ 11 ಗಂಟೆಗೆ ಪ್ರತಿಜ್ಞಾ ಸಮಾರಂಭ ನಡೆಯಿತು. ಕೆಂಬಾವುಟಗಳು, ಬ್ಯಾನರುಗಳು, ಘೋಷಣಾ ಫಲಕಗಳು ಇಂಡಿಯಾ ಗೇಟ್‌ನ ಎದುರಿನ ವರ್ತುಲವನ್ನು ಕೆಂಪು ದ್ವೀಪವನ್ನಾಗಿ ಮಾಡಿದವು.

ಪ್ರಖ್ಯಾತ ಹಿಂದೀ ಲೇಖಕ ಭೀಷ್ಮ ಸಾಹನಿ ಮನವಿ ಹಾಗೂ ಪ್ರತಿಜ್ಞೆಯನ್ನು ಓದಿ ಹೇಳಿದರು. ಏಕತಾ ಆಂದೋಲನದ ಅಂಗ ಪಕ್ಷಗಳ ಪ್ರತಿನಿಧಿಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ಕೊನೆಯಲ್ಲಿ 45 ವರ್ಷಗಳ ಹಿಂದೆ ಜನವರಿ 30ರಂದು ಹಿಂದೂ ಮತಾಂಧನೊಬ್ಬನ ಗುಂಡಿಗೆ ಬಲಿಯಾದ ಮಹಾತ್ಮಾಗಾಂಧಿಯವರ ನೆನಪಿಗೆ ಶ್ರದ್ಧಾಂಜಲಿಯಾಗಿ ಎರಡು ನಿಮಿಷಗಳ ಮೌನ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂ. ಸುರ್ಜೀತ್ ಗಾಂಧೀಜಿಯನ್ನು ಕೊಂದ ಶಕ್ತಿಗಳು ಇನ್ನೂ ಜೀವಂತವಾಗಿವೆ, ಅಷ್ಟೇ ಅಲ್ಲ, ಧಾಳಿ ಮಾಡುತ್ತಾ ಮುನ್ನುಗ್ಗಿ ಬರುತ್ತಿವೆ, ಸ್ವಾತಂತ್ರ್ಯದ ನಂತರ ಭಾರತಕ್ಕೆ ಒಂದು ಅತಿ ದೊಡ್ಡ ಸವಾಲಾಗಿ ಬರುತ್ತಿವೆ ಎಂದರು. ಈ ಅಪಾಯದ ಗಹನತೆಯನ್ನು ಅರಿಯಿರಿ, ಈ ಸವಾಲನ್ನು ಎದುರಿಸಲು ನಿಮ್ಮೆಲ್ಲಾ ಶಕ್ತಿಯನ್ನು ಹಾಕುವ ಪ್ರತಿಜ್ಞೆ ಮಾಡಿ ಎಂದು ಸುರ್ಜೀತ್ ಮತ್ತೆ ಮತ್ತೆ ಮನವಿ ಮಾಡಿದರು. "ಇದು ಸುಲಭದ ಕೆಲಸವಲ್ಲ - ನಾವೆಲ್ಲಾ ದೇಶದ ಮೂಲೆ-ಮೂಲೆಗೂ ಹೋಗಬೇಕು, ಮನೆ ಮನೆಗಳಿಗೆ, ಮೊಹಲ್ಲಾಗಳಿಗೆ, ಶಾಲಾ-ಕಾಲೇಜುಗಳಿಗೆ ಹೋಗಬೇಕು. ದೇಶದೆದುರು ಬಂದಿರುವ ಸವಾಲನ್ನು ವಿವರಿಸಬೇಕು, ಅವರ ವಿರುದ್ಧ ಏಕೆ ಹೋರಾಟ ನಡೆಸಲೇಬೇಕು ಎಂಬುವನ್ನು ತಿಳಿಸಬೇಕು" ಎಂದು ಅವರು ಹೇಳಿದರು.

ಈ ಹೋರಾಟದಲ್ಲಿ ಕಾಂಗ್ರೆಸ್(ಐ)ನ ಪತ್ತೆಯೇ ಇಲ್ಲ

ಈ ಸಮಸ್ಯೆ ಎದುರಿಸುವಲ್ಲಿ ಸರಕಾರದ ಪಕ್ಷಪಾತದ ನಿಲುವನ್ನು ಸುರ್ಜೀತ್ ತೀಕ್ಷ್ಣವಾಗಿ ಖಂಡಿಸಿದರು. ಈ ಹೋರಾಟದಲ್ಲಿ ಕಾಂಗ್ರೆಸ್(ಐ)ನ ಪತ್ತೆಯೇ ಇಲ್ಲವಷ್ಟೇ ಅಲ್ಲ, ನೇರವಾಗಿ ಕೇಂದ್ರದ ಹತೋಟಿಯಲ್ಲೇ ಇರುವ ಉತ್ತರಪ್ರದೇಶ ಆಡಳಿತ ವಾರಣಾಸಿಯಲ್ಲಿ ಫೆಬ್ರುವರಿ 2ರಂದು ರ‍್ಯಾಲಿ ನಡೆಸಲು ಜಾತ್ಯಾತೀತ ಶಕ್ತಿಗಳಿಗೆ ಪರವಾನಿಗೆ ನೀಡಲಿಲ್ಲ. ಆದರೆ ಬಿಜೆಪಿಗೆ, 'ಸಂತ ಸಮ್ಮೇಳನ'ಗಳಿಗೆ ತಮ್ಮ ಪ್ರಚಾರ ನಡೆಸಲು ಸಂಪೂರ್ಣ ಸ್ವಾತಂತ್ರ್ಯ ನೀಡುತ್ತಿದೆ.

ಸರಕಾರಕ್ಕಾಗಲಿ, ಆಳುವ ಪಕ್ಷಕ್ಕಾಗಲೀ ದೇಶವನ್ನು ರಕ್ಷಿಸುವಲ್ಲಿ ಆಸಕ್ತಿಯಿಲ್ಲದಿದ್ದರೂ "ಜನ ನಮ್ಮ ಜತೆಗಿದ್ದಾರೆ" ಎಂದ ಸುರ್ಜೀತ್ ಜನವರಿ 20 ರಂದು ಪಾಟ್ನಾ ರ‍್ಯಾಲಿ ಹಾಗು ಹಿಂದಿನ ಅತಿ ದೊಡ್ಡ ರ‍್ಯಾಲಿ ಎಂದರು. ಮತಾಂಧ ಶಕ್ತಿಗಳ ಸವಾಲನ್ನು ಎದುರಿಸಲು ಭಾರತದ ಸಾಮಾನ್ಯ ಜನ ಎದ್ದು ನಿಲ್ಲುತ್ತಾರೆ, ಆದರೆ ಎಡ, ಜಾತ್ಯಾತೀತ ಪಕ್ಷಗಳು ಅದರ ಬಳಿಗೆ ಹೋಗಿ ಅವರನ್ನು ಸಂಘಟಿಸಿ ಅಣಿನೆರೆಸಬೇಕಾಗಿದೆ ಎಂದರು.

ಜನತಾದಳದ ರಾಮ್‌ಸಿಂಗ್ ವಿಧುರಿ, ಸಿಪಿಐನ ಅಮರ್‌ಜಿತ್ ಕೌರ್, ಐಪಿಎಫ್‌ನ ಕುಮುದಿನಿ ಪತಿ, ಆರ್‌ಎಸ್‌ಪಿಯ ಅಶೋಕ್ ಗಂಗೂಲಿ ಹಾಗೂ ಫಾರ್ವರ್ಡ್ ಬ್ಲಾಕ್‌ನ ರಾಜೇಂದರ್ ಶರ್ಮ ಸಭೆಯನ್ನುದ್ದೇಶಿಸಿ ಮಾತನಾಡಿದರು.

●

KRNM/BGS-405 MAG(2) PRB DECR 319-78/79

ಹೇಳಿ ನೀವು ಯಾರ ಕಡೆ ?

ಪುಟ 1ರಿಂದ ....

ಸ್ಟೇಷನ್‌ಗಳ ನಡುವೆ ನಡೆದ ವೈರ್‌ಲೆಸ್ ಮಾತುಕತೆಗಳ ದಾಖಲೆ ನೋಡಿ.

ಭಾಷಾ ಅಲ್ಪಸಂಖ್ಯಾತರ ಮೇಲೂ

ಮುಂಬೈ ಗಲಭೆಗಳು ಈ ಆಂತರಿಕ ಸಮರಕ್ಕೆ ಹೊಸ ಆಯಾಮ ನೀಡಿದವು. ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿಯಿಟ್ಟ ಕಾವಿ ಬಾವುಟದ ಸಂಪೂರ್ಣ ಯೋಜಿತ ಸಮರವಷ್ಟೇ ಅಲ್ಲ, ಅದರ ಜೊತೆ-ಜೊತೆಗೇ ಭಾಷಾ ಅಲ್ಪಸಂಖ್ಯಾತರ ಮೇಲೂ ಸಮರ ನಡೆಯಿತು.- ಸಾವಿರಾರು ಮರಾಠಿಯೇತರ ಹಿಂದೂಗಳನ್ನು ಹೊಡೆದೋಡಿಸಲಾಯಿತು. ಇಡೀ ಧಾರಾವಿಗೆ ಕೊಳ್ಳಿಯಿಟ್ಟಾಗ ಮುಸ್ಲಿಮರಿಗೂ ಕರುಣೆ ತೋರಲಿಲ್ಲ, ಹಿಂದೂಗಳಿಗೂ ಕರುಣೆ ತೋರಲಿಲ್ಲ.

ಕೋಮು ದ್ವೇಷದ ಈ ವಿನಾಶಕಾರಿ ಕೀಟಾಣು ಅತ್ಯಂತ ದುಷ್ಟ ರೀತಿಯಲ್ಲಿ ಅತ್ಯಂತ ಯೋಜನಾಬದ್ಧವಾಗಿ ಹರಡುತ್ತಿದೆ. ಬಿಜೆಪಿ ಮುಖ್ಯಸ್ಥರ ಸಮ್ಮುಖವೇ ಬಾಬ್ರಿ ಮಸೀದಿ ಧ್ವಂಸಗೊಳ್ಳುತ್ತಿದ್ದಾಗ ನಾನು ನಿಸ್ಸಹಾಯಕ, ಜನಜಂಗುಳಿ ನನ್ನ ಹತೋಟಿ ಮೀರಿ ಹೋಗಿದೆ ಎಂದು ಗೋಗರೆದರಂತೆ! ಮೊನ್ನೆ-ಮೊನ್ನೆ ಪಾಂಡೆಯೆಂದು ಹೇಳಿಕೊಂಡಾತ(- ಅದು ನಿಜ ಹೆಸರೋ, ಸುಳ್ಳು ಹೆಸರೋ ಏನೇ ಇರಲಿ) ವಿಮಾನ ಅಪಹರಣ ಮಾಡಿದಾಗ ವಾಜಪೇಯಿಯಿಂದ ಆಶ್ವಾಸನೆ ಬೇಕು ಎಂದನಂತೆ! ಇಲ್ಲಿಯೂ ಈ ಕ್ರಿಮಿನಲ್ ವ್ಯಕ್ತಿ ಎಲ್ಲರ ಹತೋಟಿ ಮೀರಿ ಹೋಗಿದ್ದನಂತೆ! ವಾಜಪೇಯಿಯವರ ನೆವವಂತೂ ವಿಚಿತ್ರವಾಗಿತ್ತು - ಅವ ಬಿಜೆಪಿಯವನಲ್ಲ, ಏಕೆಂದರೆ ನಾನು ಅವನನ್ನು ಎಂದೂ ನೋಡಿಲ್ಲ, ಅವನು ನನ್ನನ್ನು ನೋಡಿಲ್ಲ! ಈ ದೇಶದಲ್ಲಿ ವಿವಿಧ ಪಕ್ಷಗಳ ಮುಖಂಡರನ್ನು ಕಣ್ಣಾರೆ ನೋಡಿರದ ಲಕ್ಷಾಂತರ ಜನಗಳಿದ್ದಾರೆ ಎಂದು ವಾಜಪೇಯಿಯವರಿಗೆ ಗೊತ್ತಿಲ್ಲವೆಂದಲ್ಲ. ಆದರೆ ಪಾಂಡೆ ಮಾಡಿದ್ದು ಬಿಜೆಪಿ- ವಿಹೆಚ್‌ಪಿ, ಭಜರಂಗ ದಳ, ಆರ್‌ಎಸ್‌ಎಸ್, ಸಾಧುಗಳು ಸಂತರು ಹಿಂದೂಗಳು ಏನು ಮಾಡಬೇಕು ಎಂದು ಆಗ್ರಹಿಸುತ್ತಿದ್ದರೋ ಅದನ್ನೇ. ನಿರಂತರ ಕೋಮು ಪ್ರಚಾರದ ಪರಿಣಾಮಗಳಿಂದ ಹೊಣೆ ಜಾರಿಸಿಕೊಳ್ಳಲು ಈಗ ಬಹಳ ವಿಳಂಬವಾಗಿದೆ.

ಬಹುಶಃ ಅಪಹರಣಗೊಂಡ ವಿಮಾನದಲ್ಲಿ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ 'ಸಂಘ ಪರಿವಾರ' ಮಾಡಿದ ಕೃತ್ಯವನ್ನು ಕಂಡು ಚಪ್ಪಾಳೆ ತಟ್ಟಿಸ್ವಾಗತಿಸಿದ ಪ್ರಯಾಣಿಕರೂ ಇದ್ದಿರಬಹುದು. ಅವರೀಗ ತಮ್ಮ 'ಸ್ವಾಗತ'ದ ಬಗ್ಗೆ ಪುನರಾಲೋಚನೆ ಮಾಡಬಹುದು. ಅದೇ ರೀತಿ ಮುಂಬೈಯ ಗಲಭೆಗಳು ನೇರವಾಗಿಯೋ, ಪರೋಕ್ಷವಾಗಿಯೋ ತಟ್ಟಿದವರು, ಶಿವಸೇನೆಗೆ ಹಿಂದೆ ಹಣಕಾಸು ಒದಗಿಸಿದ ಉದ್ಯಮಿಗಳೂ ಕೂಡಾ ಈಗ ತಮ್ಮ ಅಭಿಪ್ರಾಯವನ್ನು ಬದಲಿಸಿರಬಹುದು.

ಕಿರಿಬೆರಳನ್ನೂ ಎತ್ತಲಾರದ ಪತ್ರಿಕಾರಂಗ

ಇವೆಲ್ಲದಕ್ಕೂ ದುರಂತಮಯ ಸಂಗತಿಯೆಂದರೆ ದೇಶದ ಆತ್ಮವನ್ನು ರಕ್ಷಿಸುವವರು ತಾವು ಎಂದು ಹೇಳಿಕೊಳ್ಳುವ ಪತ್ರಿಕಾ ರಂಗ ಮುಂಬೈ ದುರಂತ ನಡೆದ ಮೊದಲ ಕೆಲವು ದಿನ ಬಾಳಠಾಕ್ರೆ ಮತ್ತು ಶಿವಸೇನೆಯ ವಿರುದ್ಧ ಬಾಯಿ ಬಿಚ್ಚುವ ಧೈರ್ಯವನ್ನೂ ತೋರದಿದ್ದುದು. ಖಳನಾಯಕರ ಖಳನಾಯಕತ್ವವನ್ನು ಬಯಲಿಗೆಳೆಯುವ ಎಲ್ಲಾ ಸ್ವಾತಂತ್ರ್ಯವೂ ಅವರಿಗಿತ್ತು. ಆದರೂ ಪ್ರತಿಭಟನೆಯಿಂದ ಆತಂಕದಿಂದ ಅಥವಾ ಸಿಟ್ಟಿನಿಂದ ಕಿರಿಬೆರಳನ್ನೂ ಎತ್ತಲಿಲ್ಲ ಅವರು. ಸುಮಾರು ಒಂದು ವಾರದ ನಂತರ ಇಕನಾಮಿಕ್ ಟೈಮ್ಸ್('ಐಕ್ಯರಂಗ'ದ ಕಳೆದ ವಾರದ ಸಂಚಿಕೆ ನೋಡಿ) ಸಂಪಾದಕೀಯ ಬಾಳ ಠಾಕ್ರೆ ಮತ್ತವರ ರಕ್ತಪಿಪಾಸು ಸಹಯೋಗಿಗಳನ್ನು ಖಂಡಿಸುವವರೆಗೆ. 1930-40ರ ದಶಕದಲ್ಲಿ ಜರ್ಮನಿಯ ಪತ್ರಿಕಾರಂಗದಂತೆ ಕಾಡು ಪ್ರಾಣಿಗಳನ್ನು ಮೀರಿಸುವ ರಾಕ್ಷಸೀ ಭುಜಬಲದ ಎದುರು ಹೇಡಿಗಳಂತೆ ವರ್ತಿಸಿದರು, ತನ್ಮೂಲಕ ಅವರ ಬಾಲಬಡುಕರಂತಾದರು. ಉತ್ತರಪ್ರದೇಶದಲ್ಲಂತೂ ಪತ್ರಿಕಾ ರಂಗದ ಒಂದು ವಿಭಾಗ ಬಾಬ್ರಿ ಮಸೀದಿ ಧ್ವಂಸದಿಂದ ಆನಂದಪರವಶರಾಗಿದ್ದ 'ಸಂಘ ಪರಿವಾರ'ದೊಡನೆ ದನಿಗೂಡಿಸಿತು.

ನಿಜವಾದ ಭಾರತೀಯರು ಯಾರೆಂದು ತೋರಿದ ಒರೆಗಲ್ಲು

ಇದು ಡಿಸೆಂಬರ್-ಜನವರಿ ತಿಂಗಳಲ್ಲಿ ಭಾರತದ ಒಂದು ಸ್ಥೂಲ ಚಿತ್ರ. ಈ ದಿನಗಳಲ್ಲಿ ಜಾತ್ಯಾತೀತತೆಯ ಬಾವುಟವನ್ನು ಎತ್ತಿ ಹಿಡಿದದ್ದು ಎಂದಿನಂತೆ ಎಡಪಕ್ಷಗಳು ಹಾಗೂ ಇತರ ಜಾತ್ಯಾತೀತತೆಗೆ ಬದ್ಧವಾದ ದೇಶಪ್ರೇಮಿ ಶಕ್ತಿಗಳು. ದುರ್ಬಲವಾದರೂ, ತಮ್ಮ ನಂಬಿಕೆಗಳಿಗೆ ದೃಢವಾಗಿ ಬದ್ಧರಾಗಿಯೇ ಉಳಿದಿದ್ದಾರೆ ಇವರು. ಅದೇ ರೀತಿ ಗೂಂಡಾಗಳನ್ನು ಎದುರಿಸುವ ಧೈರ್ಯ ತೋರಿದ ಕೆಲವು ವ್ಯಕ್ತಿಗಳು. ಗಂಡಸ್ತನದ ಪರೀಕ್ಷೆಯ ಸಮಯದಲ್ಲಿ ಬೀದಿಗಿಳಿಯುವ ಧೈರ್ಯ ತೋರಿದ ಎಲ್ಲರಿಗೂ ಶತ-ಶತ ನಮನ.

ಈ ಸಮುದ್ರ ಮಂಥನದಲ್ಲಿ ನಮ್ಮ ಸಮಾಜದ ಒಳಿತು-ಕೆಡಕು ಎಲ್ಲವೂ ಮೇಲಕ್ಕೆ ಬಂದಿವೆ. ಈ ಒರೆಗಲ್ಲಿನಲ್ಲಿ ನಿಜವಾದ ಭಾರತೀಯರು ಎಂದು ಸಾಬೀತಾದವರನ್ನೆಲ್ಲಾ ಒಟ್ಟಿಗೆ ಸೇರಿಸುವ ಸಮಯವೀಗ ಬಂದಿದೆ. ಈ ಎಲ್ಲಾ ಶಕ್ತಿಗಳನ್ನು, ವ್ಯಕ್ತಿಗಳನ್ನು ಸೇರಿಸಿ ಧಾರ್ಮಿಕ ರಾಜಕೀಯದ ಮಬ್ಬನ್ನು ಹರಿದು ಚಿಂದಿ ಚಿಂದಿ ಮಾಡಬೇಕಾದ ಸಮಯವೀಗ ಬಂದಿದೆ. ಆದರೆ ಜಾತ್ಯಾತೀತ ಶಕ್ತಿಗಳ ಈ ಧರ್ಮಯುದ್ಧಕ್ಕೆ ನೇತೃತ್ವ ನೀಡಬೇಕಾದ ವ್ಯಕ್ತಿ ಕಲ್ಲಿನಂತೆ ಮಾನವ ತಾಳಿದ್ದಾನೆ, ಧಗ-ಧಗ ಉರಿಯುತ್ತಿದ್ದ ಮುಂಬೈಯಲ್ಲಿ ಕೂಡಾ.

ಇದಕ್ಕೆ ಕಾರಣ ಶಿವಸೇನೆ, ಬಾಳಠಾಕ್ರೆ ಎಂದು ಒಮ್ಮೆಯಾದರೂ ಹೇಳುವ ಧೈರ್ಯವನ್ನು ಆತ ತೋರಲಿಲ್ಲ. ತನ್ನ ಮನೆಗೇ ಬೆಂಕಿ ಬಿದ್ದಾಗ ಲಾಭ-ನಷ್ಟದ ಲೆಕ್ಕಾಚಾರ ಹಾಕುವವ ನಿಜವಾಗಿಯೂ ಸಾಮಾನ್ಯ ವ್ಯಕ್ತಿಯಲ್ಲ. ಗಲಭೆಗಳ ನಂತರ ಮುಂಬೈಗೆ ಭೇಟಿ ನೀಡಿದ ಯಾವುದೇ ಪ್ರಧಾನಮಂತ್ರಿಅ ರಾಕ್ಷಸೀ ಕೃತ್ಯಗಳನ್ನು ಮಾಡಿದವರನ್ನು ಹೆಸರಿಸಿ ಖಂಡಿಸಲಿಲ್ಲವೆಂದರೆ ಆತ ಈ ದೇಶದ ಅತ್ಯುನ್ನತ ಆಡಳಿತ ಪೀಠವನ್ನು ಅಲಂಕರಿಸಿರುವ ಅಸಾಮಾನ್ಯ ವ್ಯಕ್ತಿಯೇ ಇರಬೇಕು. ಆತ ಒಂದೋ ಮನುಷ್ಯನಿಗಿಂತ ಕೆಳಮಟ್ಟದ ಒಂದು ಜೀವಿಯಿರಬೇಕು, ಇಲ್ಲವೋ ಅಮಾನವೀಯ ವ್ಯಕ್ತಿಯಿರಬೇಕು.

ಈ 'ಮೌನೀಬಾಬಾ'ನಂತೂ ಒಂದಂಗುಲವೂ ಅಲುಗಾಡುವುದಿಲ್ಲವಾದ್ದರಿಂದ ಈಗ ಉಳಿದಿರುವ ದಾರಿಯೊಂದೇ - ಎಡಪಕ್ಷಗಳು ಮತ್ತು ಇತರ ದೇಶಪ್ರೇಮಿ ಶಕ್ತಿಗಳು ಸಮರದ ಕರೆ ನೀಡಬೇಕು, ಎಷ್ಟು ಜನಗಳನ್ನು ಒಟ್ಟು ಸೇರಿಸಲು ಸಾಧ್ಯವೋ ಅಷ್ಟು ಮಂದಿಯನ್ನು ಸೇರಿಸಿಕೊಂಡು ಕೋಮುವಾದದ ವಿರುದ್ಧ ಸಮರ ಸಾರಬೇಕು. ಪಾಟ್ನಾದಲ್ಲಿ ಜನವರಿ 20ರಂದು ಸೇರಿದ 10 ಲಕ್ಷಕ್ಕೂ ಹೆಚ್ಚು ಜನರ ರ್‍ಯಾಲಿ ಈ ಕಾರ್ಯಾಚರಣೆಯ ಆರಂಭವನ್ನು ಸಾರಿದೆ. ಜನವರಿ 26ರಂದು ಪಶ್ಚಿಮ ಬಂಗಾಳದ ಎರಡು ಕೋಟಿ ಜನಗಳು ಬೆಸೆದ ಕೋಮು ಸಾಮರಸ್ಯದ, ಗೆಳೆತನದ ಮಾನವ ಸರಪಳಿ ಅದನ್ನು ಮುಂದುವರಿಸಿದೆ.

ಟಾಟಾನೇ ಇರಬಹುದು ಗುಡಿಸಲುವಾಸಿಯೇ ಇರಬಹುದು

ಇಲ್ಲಿ ರಾಜಕೀಯ ವಿಚಾರಗಳ, ಧರ್ಮದ, ಭಾಷೆಯ ಭಿನ್ನತೆಗಳೆಲ್ಲಾ ಅಸಂಬದ್ಧ. ಒಂದೇ ಸಂಬದ್ಧ ಪ್ರಶ್ನೆಯೆಂದರೆ ನೀವು ಭಾರತವನ್ನು ಒಂದು ಜಾತ್ಯಾತೀತ ಪ್ರಭುತ್ವವಾಗಿ ಉಳಿಸಿಕೊಳ್ಳುವ ಪ್ರಶ್ನೆಯಲ್ಲಿ ಯಾರೊಂದಿಗಿದ್ದೀರಿ ಎಂಬುದಷ್ಟೇ. ಭಾರತ ಒಂದು ಜಾತ್ಯಾತೀತ ಪ್ರಭುತ್ವವಾಗಿ ಮುಂದುವರೆಯಬೇಕು ಎಂದು ಬಯಸುವವರು ಅವರು ಟಾಟಾನೇ ಆಗಬಹುದು, ಧಾರಾವಿಯ ಗುಡಿಸಲುವಾಸಿಯೇ ಆಗಬಹುದು - ನಮ್ಮ ಜತೆಗಿರುವವರು. ಹಾಗೆ ಬಯಸದವರು ಅವರೊಂದಿಗೆ ಕೋಮುವಾದಿಗಳೊಂದಿಗೆ ಇರುವರು. ಮೊದಲೇ ಹೇಳಿದಂತೆ ಇಲ್ಲಿ ತಟಸ್ಥತೆಯೆಂಬುದಕ್ಕೆ ಈಗ ಅರ್ಥವೇ ಇಲ್ಲ.

ಭಾರತ ಒಂದು ರಾಜಕೀಯ, ಭೌಗೋಳಿಕ ಘಟಕವಾಗಿ ಉಳಿಯಬೇಕೆಂದು ಬಯಸುವವರೆಲ್ಲಾ ಒಂದಾಗಿ ದೇಶವನ್ನು ಹರಿದು ಚಿಂದಿ ಮಾಡಬಯಸುವವರ ವಿರುದ್ಧ ಸಮರದಲ್ಲಿ ಧುಮುಕೋಣ. ಇತರ ವಲಯಗಳಲ್ಲಿ ನಮ್ಮ ಭಿನ್ನಾಭಿಪ್ರಾಯಗಳೇನೇ ಇರಬಹುದು, ನಾವು ಒಂದು, ಒಂದಾಗಿಯೇ ಇರುತ್ತೇವೆ.


(ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ)



ಕೃಷಿ ಕೂಲಿಕಾರ ಸಂಘಟನೆಯ ನಾಯಕರಿಗೆ ನಡೆದ ಮೊದಲ ಅಧ್ಯಯನ ಶಿಬಿರದಲ್ಲಿ ಕಾಂ.ಸೂರ್ಯನಾರಾಯಣರಾವ್, ಕಾಂ.ಪಿ.ರಾಮಚಂದ್ರರಾವ್, ಕಾಂ.ಪಿ. ಜಗನ್ನಾಥ್, ಕಾಂ.ಜಿ.ಎನ್.ನಾಗರಾಜ್, ಕಾಂ.ಭೀಮಸಿ ಕಲಾದಗಿ ಹಾಗೂ ಶಿಬಿರದ ವಿದ್ಯಾರ್ಥಿಗಳು.

ಕೃಷಿ ಕೂಲಿಕಾರರಿಂದ ಸೈಕಲ್ ಜಾಥಾ

ಕೋಮು ಸೌಹಾರ್ದ ಹಾಗೂ ಕೃಷಿ ಕೂಲಿಕಾರರ ಬೇಡಿಕೆಗಳ ಪ್ರಚಾರಕ್ಕಾಗಿ ರಾಜ್ಯಾದ್ಯಂತ ಪ್ರತಿ ಜಿಲ್ಲೆಯಲ್ಲೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘದ ಘಟಕಗಳ ನೇತೃತ್ವದಲ್ಲಿ ಫೆಬ್ರವರಿ 5ರಿಂದ 15ರವರೆಗೆ ಸೈಕಲ್ ಜಾಥಾಗಳು ನಡೆಯುತ್ತಿವೆ.



'ತಡೆಗಟ್ಟುವವರು' ಮತ್ತು 'ತೊಳೆಯಬಲ್ಲವರು'

ಅಯೋಧ್ಯಾಕಾಂಡ - 1992

"ನಾವು ರಸ್ತೆಯಲ್ಲಿ ನಮಾಜು ಮಾಡುತ್ತಿರಲಿಲ್ಲ. ಖೇರ್‌ವಾಡಿಯ ಮೇಲೆ ಪೆಟ್ರೋಲ್ ಬಾಂಬ್ ಎಸೆಯಲಿಲ್ಲ. ನಮ್ಮ ಗುಡಿಸಲುಗಳಲ್ಲಿ ಶಾಂತವಾಗಿ ಮಲಗಿದ್ದೆವು. ಆದರೂ ನಮಗೆ ಏಕೆ ಈ ಚಿತ್ರಹಿಂಸೆ?" ಎಂದು ಆರ್ತನಾಗಿ ಕೇಳುತ್ತಾನೆ ಮುಂಬೈಯ ದೆಹ್ರಾಂಪಾಡಾದ ಕೊಳಗೇರಿಯ ನಿವಾಸಿ.

* * * * * * * *

"ಗುಣಪಡಿಸುವುದಕ್ಕಿಂತ ತಡೆಗಟ್ಟುವುದೇ ಲೇಸು" ಎನ್ನುವ ಕಾಮತ್‌ಗಳು ಮನವ ತೊಳೆಯಬೇಕೆನ್ನುವ ಗುಲ್ವಾಡಿಗಳು ಈ ಕೊಳಗೇರಿ ನಿವಾಸಿಯ ಆರ್ತನಾದಕ್ಕೆ ಏನನ್ನುತ್ತಾರೆ? 'ಓಟಿನ ಬೇಟೆ' ಎನ್ನುತ್ತಾರೆ, ಅಥವಾ ಯಾವುದೋ ನಾಟಕದ ಪಾತ್ರಧಾರಿ ಎನ್ನುತ್ತಾರೆ.

* * * * * * * *

ಮುಂಬೈ ಗಲಭೆಗೂ ಅಯೋಧ್ಯಾ ಪ್ರದರ್ಶನಕ್ಕೂ ಏನೇನೂ ಸಂಬಂಧವಿಲ್ಲ ಎನ್ನುವ ಒಂದು ಅಭಿಪ್ರಾಯವನ್ನು ಒಪ್ಪುತ್ತಾ ಶ್ರೀ.ಎಂ.ವಿ. ಕಾಮತ್(ಉದಯವಾಣಿ - ಫೆ. 2) ಮುಂಬೈ ಗಲಭೆಗೆ ಕಾರಣ ಮಾರ್ಗಗಳಲ್ಲಿ ನಮಾಜು ಹಾಗೂ ಬಾಂಗ್ಲಾ ದೇಶ ಮತ್ತು ಪಾಕಿಸ್ತಾನದಿಂದ ಬಂದ 1.50 ಲಕ್ಷ ಮುಸ್ಲಿಮರು ಎಂಬ ಶಿವಸೇನೆಯ ವಾದವನ್ನು ಒಪ್ಪುತ್ತಾರೆ. ಹಾಗಿದ್ದರೆ ದೆಹ್ರಾಂಪಾಡಾದ ಆ ಬಡವನ ಪ್ರಶ್ನೆಗೇನು ಉತ್ತರ? ಮುಂಬೈಯಿಂದ ಹಿಂದಿ, ತಮಿಳು, ಕನ್ನಡ, ಮಲೆಯಾಳಿ ಹಿಂದೂಗಳನ್ನೇಕೆ ಓಡಿಸಬೇಕು? ಏಕೆಂದರೆ "ಮುಂಬೈಯಲ್ಲಿ ಅವರೆಲ್ಲರಿಗೆ ಶಿಸ್ತಿನ ಜೀವನ ನಡೆಸಲು ಅಸಾಧ್ಯವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಅವರಿಗೆ ಹಾಗೂ ಅಂತಹ ಮಂದಿಗೆ ಮುಂಬೈಗೆ ಮರಳಲು ಅವಕಾಶ ನೀಡಬೇಕೇ?" - ಕಾಮತರ ಪ್ರಶ್ನೆ - ಎಷ್ಟು ಪ್ರಾಕ್ಟಿಕಲ್ ಅಲ್ಲವೇ? ಆದರೆ ನಮಾಜು ವರ್ಷಾನುಗಟ್ಟಲೆ ನಡೆಯುತ್ತಲೇ ಇತ್ತು. ಅದನ್ನು ಡಿಸೆಂಬರ್ 6ರ ನಂತರವೇ ಪ್ರತಿದಿನದ "ಮಹಾ ಆರತಿ"ಗಳ ಮೂಲಕ ಎತ್ತುವುದು ಪ್ರಾಕ್ಟಿಕಲ್ ನಿಲುವು ಎಂದು ಕಾಮತರಿಗೂ ಅನಿಸುತ್ತದೆಯೇ?

* * * * * * * *

ಬಿಜೆಪಿ ಉಪಾಧ್ಯಕ್ಷ ಕೆ.ಆರ್.ಮಲ್ಕಾನಿ ನ್ಯೂಯಾರ್ಕ್ ಪತ್ರಿಕೆಗೆ ನೀಡಿದ ಒಂದು ಸಂದರ್ಶನದಲ್ಲಿ ಹೇಳಿದ ಮಾತು(ವಾರದ ನುಡಿ ನೋಡಿ)ಕೂಡಾ ಕಾಮತರ ಪ್ರಶ್ನೆಯಂತೆ ಎಷ್ಟೊಂದು ಪ್ರಾಕ್ಟಿಕಲ್ ಅಲ್ಲವೇ? ಇಷ್ಟೇ ಅಲ್ಲ ಈ ಸಂದರ್ಶನದಲ್ಲಿ ಮುಂದುವರಿದು ಅವರು ಹೇಳಿದ್ದಾರಂತೆ - "ಭಾರತದಲ್ಲಿ ಕೆಳವರ್ಗಗಳ ಹಿಂದೂಗಳಲ್ಲಿ ಜನನ ದರ ಹೆಚ್ಚು ಎಂಬುದೂ ನಮಗೆ ಗೊತ್ತು. ಆದರೆ ನಮಗೆ ಅದು ಮುಖ್ಯವಲ್ಲ. ನಮಗೆ ಮುಖ್ಯ ಯಾರ ಜನಸಂಖ್ಯೆ ಹೆಚ್ಚುತ್ತಿದೆ ಎಂಬುದು". ಇದೂ ಆ ಪ್ರಾಕ್ಟಿಕಲ್ ಮನಸ್ಸಿನ ಹುಣುಕು ಸ್ವಾಮಿ.

* * * * * * * *

ಶಿವಸೇನೆಯ ಆಕ್ರಮಣಶೀಲತೆ ಕಾಮತರನ್ನು ಬಾಧಿಸಿಲ್ಲ. ಅದೇ ರೀತಿ ಬಿಜೆಪಿಗೂ ಅದು ಮುಖ್ಯ ಸಮಸ್ಯೆಯಲ್ಲ. ಆದರೆ ಶಿವಸೇನೆ ತಾನೇ ಈ ಎಲ್ಲದಕ್ಕೆ ಕಾರಣ ಎಂದು ಹೇಳಿಕೊಂಡಿಲ್ಲ. ಕಾಮತರಿಗೆ, ಅಲ್ಲವಾದರೂ, ಬಿಜೆಪಿಗೆ ಅಲ್ಲವಾದರೂ ಆರ್‌ಎಸ್‌ಎಸ್‌ಗಂತೂ ಸಮಸ್ಯೆಯಾಗಿದೆಯಂತೆ(ಟೈಮ್ಸ್ ಆಫ್ ಇಂಡಿಯಾ, ಫೆ. 2) 'ಹಿಂದುತ್ವ'ದ ನಿಜಸ್ವರೂಪ ಏನು ಎಂಬ ಬಗ್ಗೆ ಕನ್ನಡ ಹಿಂದೂಗಳು, ತಮಿಳು ಹಿಂದೂಗಳು, ಬಂಗಾಳೀ ಹಿಂದೂಗಳಲ್ಲಿ ಸಂಶಯ ಮೂಡುತ್ತಿದೆಯಲ್ಲಾ ಎಂದು.

* * * * * * * *

ವಾಶಿಂಗ್‌ಟನ್‌ನಲ್ಲಿ 'ಭಾರತ ಮಿತ್ರ ಸಮಾಜ ಅಂತರಾಷ್ಟ್ರೀಯ' ಎಂಬ ಸಂಘಟನೆಯ ಸದಸ್ಯರು ಭಾರತೀಯ ರಾಯಭಾರಿ ಕಛೇರಿಯೆದುರು ಪ್ರದರ್ಶನ ನಡೆಸಿದರಂತೆ. -ಭಾರತ ಸರಕಾರ ರಾಜೀನಾಮೆ ನೀಡಬೇಕು, ಮಧ್ಯಂತರ ಚುನಾವಣೆ ನಡೆಯಬೇಕು, ಆರ್‌ಎಸ್‌ಎಸ್-ವಿಹೆಚ್‌ಪಿ-ಭಜರಂಗ ದಳದ ಮೇಲಿನ ನಿರ್ಬಂಧ ತೆಗೆಯಬೇಕು ಇತ್ಯಾದಿ ಅವರ ಬೇಡಿಕೆಗಳು. ವಾಶಿಂಗ್‌ಟನ್‌ನಲ್ಲಿನ ಸ್ಥಳೀಯ ಬಿಳಿಯರ ಶಿವಸೇನಾ ಅವತರಣಿಕೆಗಳು ಏನೆನ್ನಬಹುದು ಎಂಬಷ್ಟು ಇವರು ಪ್ರಾಕ್ಟಿಕಲ್ ಇಲ್ಲವಲ್ಲಾ ಎಂದು ನಿಮಗೆ ಅನಿಸುತ್ತದೆಯೇ? ಇಲ್ಲ ಅವರಿಗೆ ಅದು ಮುಖ್ಯವಲ್ಲ ಅವರು ಕಾಣುವ ವಾಸ್ತವ ಸಂಗತಿ ಬೇರೆಯೇ. "ಆರ್ಥಿಕ ಉದಾರೀಕರಣವನ್ನು ಸಾರ್ವಜನಿಕವಾಗಿ ವಿರೋಧಿಸಿರುವ ಕಮ್ಯುನಿಸ್ಟರ ಬೆಂಬಲಕ್ಕಾಗಿ ಉದಾರೀಕರಣ ನೀತಿಗಳನ್ನು ಕೈ ಬಿಡಲಾಗುತ್ತಿದೆ" ಎಂಬುದು ಅವರ ಇನ್ನೊಂದು ಅಳಲು. ಅಂದರೆ ಈ ಎಲ್ಲಾ "ವಾಸ್ತವ" ನಿಲುವುಗಳ ತಿರುಳು ಏನು ಎಂದು ಅರ್ಥವಾಗುತ್ತದಲ್ಲವೇ? ಅದು ಕೇವಲ ಮುಂಬೈಯಿಂದ ಶಿವಸೇನೆ ಓಡಿಸಿದ ಹಿಂದೂಗಳಿಗೆ ಮಾತ್ರವಲ್ಲ ಇಡೀ ದೇಶದಲ್ಲಿ 'ಹಿಂದುತ್ವ' ಕ್ಕೆ ಮಾರು ಹೋದ ಇತರ ಎಲ್ಲಾ ಹಿಂದೂಗಳಿಗೂ ಅರಿವಾಗುತ್ತದೆ.

* * * * * * * *

ಆದರೆ ಕೆಲವರಿಗಂತೂ ಅರಿವಾದಂತಿಲ್ಲ. ಉದಾಹರಣೆಗೆ ಹಿಂದೆ ಪತ್ರಿಕಾ ಕೌನ್ಸಿಲ್‌ನಿಂದ ಕಾವಿತನಕ್ಕಾಗಿ ಛೀಮಾರಿ ಹಾಕಿಸಿಕೊಂಡ ಕೆಲವು ಸಂಪಾದಕರಿಗೆ ಇನ್ನೂ ಇವೆಲ್ಲಾ ತಿಳಿದಂತಿಲ್ಲ. "ನಾವು ಮಾನಹೀನರು ಮಾತ್ರವಲ್ಲ, ಮತಿಹೀನರು" ಎಂದು 'ಒಪ್ಪಿಕೊಂಡಿರುವ' ಇವರಿಗೆ(- ತರಂಗ, ಫೆ. 14) ಪ್ರೀತಿ, ಸಾಮರಸ್ಯದ ವಿನಂತಿ, ಮಾನವ ಸರಪಳಿಗಳು ನಾಟಕವಾಗಿ ಕಂಡರೆ ಈದ್‌ಗಾ ಮೈದಾನದಲ್ಲಿಯೇ ರಾಷ್ಟ್ರಧ್ವಜ ಹಾರಿಸಬೇಕೆನ್ನುವವರು ರಾಷ್ಟ್ರ ಪ್ರೇಮಿಗಳಾಗಿ ಕಾಣುತ್ತಾರೆ. ಇವರೆಲ್ಲಾ ಯಾರ ನಾಟಕದಲ್ಲಿ ಯಾರ ಬಂಟನ ಪಾತ್ರ ವಹಿಸುತ್ತಿದ್ದಾರೆ ಎಂದು 'ಪ್ರಜಾಪ್ರಭುತ್ವ ದಿನದಂದು ಕಪ್ಪು ಪತಾಕೆ ಅರಳಿಸಿದ್ದನ್ನು ದೆಪ್ಪಾಗಿ ಕಣ್ಣು ಕಣ್ಣು ಬಿಟ್ಟು ನೋಡುತ್ತಾ ದೆಪ್ಪಾಗಿ ಕೂತಿದ್ದಾರೆ' ಎಂಬ ಹಸಿ-ಹಸಿ ಕಾವಿ ಸುಳ್ಳನ್ನು ಹೇಳುವಾಗ ತಿಳಿಯುತ್ತದೆಯಲ್ಲವೆ? ಎಡಪಕ್ಷಗಳ, ರಾಷ್ಟ್ರೀಯರಂಗದ ಮುಖಂಡರ, ಮುಸ್ಲಿಮ್ ಬುದ್ಧಿಜೀವಿಗಳ ಖಂಡನೆಗಳು, ಕಾವಿ ಪಡೆಯ 'ಶತ್ರು'ಗಳ ಪಟ್ಟಿಯಲ್ಲಿರುವ ಪ್ರೊ. ಇರ್ಫಾನ್ ಹಬೀಬ್ ಜನವರಿ 26ರಂದು ಕಪ್ಪು ಪತಾಕೆ ಏರಿಸುವುದನ್ನು ದೈಹಿಕ ಹಲ್ಲೆಗಳನ್ನೂ ಲೆಕ್ಕಿಸದೆ ತಡೆದದ್ದು, ಇತ್ಯಾದಿ ಇವರಿಗೆ ಏಕೆ ಬೇಕು? 'ಮಲವ ತೊಳೆಯಬಲ್ಲವರಲ್ಲದೆ........................ ?

* * * * * * * *

ಕಾಂಗ್ರೆಸ್ ಮುಖಂಡರ ವರ್ತನೆಗಳನ್ನು ಎಲ್ಲಾ ಜಾತ್ಯಾತೀತರ ವರ್ತನೆಗಳೆಂದು ಸಾರಾಸಗಟಾಗಿ ತಮ್ಮನ್ನೇ ನಂಬಿಸಿಕೊಳ್ಳುತ್ತಾ ಸರಿಯೆಂದು ಸಂತೋಷ ಪಡುವವರಿಗೆ ನಾವೇನೆನ್ನೋಣ? ಒಣ ಉಪದೇಶ ಕೊಡುವುದು ಕೇವಲ ಕಾಂಗ್ರೆಸ್ ರಾಜಕಾರಣಿಗಳ ಸೊತ್ತೇನು, ನಾವೂ ಏಕೆ ಅವರು ಮನದಲ್ಲಿ ಮಲ ತುಂಬಿಕೊಂಡು ಉಳಿದವರ ಮನ ತೊಳೆಯುವ ಉಪದೇಶ ನೀಡಬಾರದು ಎಂಬ ಪತ್ರಕರ್ತರಿಗೆ ಏನೆನ್ನೋಣ?

* * * * * * * *

ಅವರು ಶಾಂತಿದೂತರ ನಿರೀಕ್ಷೆಯಲ್ಲಿದ್ದಾರಂತೆ. ಇರಲಿ, ಆದರೆ ಸಾಮಾನ್ಯ ಭಾರತೀಯ ಜನರು ನರಸಿಂಹರಾಯರುಗಳ, ಗುಲ್ವಾಡಿಗಳ, ಕಾಮತ್‌ರುಗಳ ಉಪದೇಶಗಳ ನಿರೀಕ್ಷೆಯಲ್ಲಿಲ್ಲ, ಅವರುತಮ್ಮ ಕಟು ಅನುಭವಗಳನ್ನು ಪರೀಕ್ಷಿಸಿಕೊಳ್ಳುತ್ತಿದ್ದಾರೆ. "ಅವರು ಏನೆಲ್ಲಾ ಹೇಳುತ್ತಾರೆ. ಹೆಮ್ಮೆಯಿಂದ ಹೇಳಿ - ನಾವು ಹಿಂದೂಗಳು ಎನ್ನುತ್ತಾರೆ. ಆದರೆ ನಾನು ಹೆಮ್ಮೆಯಿಂದ ಹೇಳುತ್ತೇನೆ ನಾನು ಹಿಂದೂಸ್ಥಾನಿಯೆಂದು, ಮಾನವನೆಂದು" ಎನ್ನುವ ಕಾನ್‌ಪುರದ ಇತ್ತೀಚಿನ ಕೋಮುಗಲಭೆಗಳಲ್ಲಿ ಎಲ್ಲವನ್ನೂ ಕಳಕೊಂಡ ಗುಲಾಂ ಶಕೀಲ್‌ನಂತವರು ನಮಗಂತೂ ಶಾಂತಿದೂತರಾಗಿ ಕಾಣುತ್ತಾರೆ.

- ಕೆ.ವಿ.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462
ಸಂಪಾದಕರು : ಪಿ.ರಾಮಚಂದ್ರರಾವ್